ದೆಹಲಿ ಕರ್ನಾಟಕ ಸಂಘದ

# ಅಭಿಮತ

ಫೆಬ್ರವರಿ 2011

ಬೆಲೆ ರೂ. 1.



## ಅನಂತದಲ್ಲಿ ಲೀನವಾದ ಚಿರಂತನ ಚೇತನ

# ರಾಜಧಾನಿಯ ರಾಜಪಥದಲ್ಲಿ ಮೆರೆದ ಕರ್ನಾಟಕದ ಸ್ತಬ್ದಚಿತ್ರ 'ಬಿದರಿಕಲೆ'ಗೆ ಗಣರಾಜ್ಯೋತ್ಸವ ಪ್ರಶಸ್ತಿ




ಗಣರಾಜ್ಯೋತ್ಸವ ಪರೇಡ್‌ನಲ್ಲಿ ಪಾಲ್ಗೊಂಡಿದ್ದ ಕರ್ನಾಟಕದ ಬಿದರಿಕಲೆ ಸ್ತಬ್ದಚಿತ್ರಕ್ಕೆ ದ್ವಿತೀಯ ಬಹುಮಾನ ಲಭಿಸಿದೆ. ಕರ್ನಾಟಕ ಸರ್ಕಾರದ ಪರವಾಗಿ ವಾರ್ತಾ ಇಲಾಖೆ ಸಿದ್ದಪಡಿಸಿದ್ದ ಈ ಸ್ತಬ್ದಚಿತ್ರವು ಕಲೆ ಹಾಗು ಸಂಗೀತದ ಸಮನ್ವತೆಯಿಂದ ಕೂಡಿತ್ತು. ಪಾರಂಪರಿಕ ಕಲೆಯಾದ 'ಬಿದರಿ'ಯ ಅಪೂರ್ವ ಕಲಾಕೃತಿಗಳನ್ನು ಒಳಗೊಂಡಿದ್ದ ಸ್ತಬ್ದಚಿತ್ರಕ್ಕೆ ಅನನ್ಯವಾದ ಸುಂದರಿವಾದನದ ಹಿನ್ನೆಲೆ ಸಂಗೀತವಿತ್ತು. ಕರ್ನಾಟಕ ವಾರ್ತಾ, ಕನ್ನಡ ಹಾಗೂ ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿ ರಮೇಶ್ ಝಳಕಿ ಅವರ ಮಾರ್ಗದರ್ಶನದಲ್ಲಿ ಆಯ್ಕೆ ಮಾಡಿದ್ದ ಬಿದರಿ ಕಲಾ ಸ್ತಬ್ದಚಿತ್ರವು ಗಣರಾಜ್ಯೋತ್ಸವ ಪರೇಡ್‌ನಲ್ಲಿ ಮನಸೂರೆಗೊಂಡಿತ್ತು. ಭಾರತ ರಕ್ಷಣಾ ಇಲಾಖೆಯ ಉನ್ನತ ಸಮಿತಿಯು ಪ್ರಶಸ್ತಿಗಾಗಿ ಬಿದರಿ ಕಲೆ ಸ್ತಬ್ದಚಿತ್ರವನ್ನು ಆಯ್ಕೆ ಮಾಡಿತು. ಪ್ರಸಿದ್ಧ ಕಲಾವಿದ ಶಶಿಧರ ಅಡಪ ಅವರು ವಿನ್ಯಾಸಗೊಳಿಸಿದ್ದ ಸ್ತಬ್ದ ಚಿತ್ರವನ್ನು ಸಂಜಯ್ ಮಾರ್ಕೆಟಿಂಗ್ ಅಂಡ್ ಪಬ್ಲಿಸಿಟಿ ಸರ್ವೀಸಸ್‌ನ ಆರ್.ನಾಗರಾಜ, ಬಾಬು, ಕಲಾವಿದ ರಘು, ಆನಂದಕೃಷ್ಣ ನೇತೃತ್ವದ 50 ಕಲಾವಿದರ ತಂಡ ಎರಡು ತಿಂಗಳ ಪರಿಶ್ರಮದಿಂದ ಆಕರ್ಷಕವಾಗಿ ರೂಪಿಸಿತ್ತು.

ವಾರ್ತಾ ಇಲಾಖೆ ನಿರ್ದೇಶಕ ಡಾ. ಮುದ್ದುಮೋಹನ್ ಅವರ ನೇತೃತ್ವದಲ್ಲಿ ಜಂಟಿ ನಿರ್ದೇಶಕ ಎನ್.ಭೃಂಗೀಶ್, ಕ್ಷೇತ್ರ ಪ್ರಚಾರ ಶಾಖೆಯ ಉಪನಿರ್ದೇಶಕ ಎಸ್.ವಿ.ಲಕ್ಷ್ಮೀನಾರಾಯಣ, ದೆಹಲಿಯ ಕರ್ನಾಟಕ ವಾರ್ತಾ ಕೇಂದ್ರದ ಸಹಾಯಕ ನಿರ್ದೇಶಕ ಎಲ್.ಪಿ.ಗಿರೀಶ್, ಸಹಾಯಕ ನಿರ್ದೇಶಕರುಗಳಾದ ಜಗನ್ನಾಥ್, ಪ್ರಕಾಶ್, ಬಸವರಾಜ್ ಬುಳ್ಳಾ, ಕಲಾವಿದ ಚೇತನ್ ಕುಮಾರ್ ಅವರನ್ನು ಒಳಗೊಂಡ ತಂಡ ಸ್ತಬ್ದಚಿತ್ರದ ನಿರ್ಮಾಣ ಉಸ್ತುವಾರಿ ವಹಿಸಿತ್ತು. ಸ್ತಬ್ದಚಿತ್ರದಲ್ಲಿ ಬಿದರಿ ಕಲಾಕುಟುಂಬದ ಕಲಾವಿದರು ಪಾಲ್ಗೊಂಡಿದ್ದು ಸುಶ್ರಾವ್ಯ ಸುಂದರಿ ಸಂಗೀತವನ್ನು ಮಲ್ಲಿನಾಥ್ ಜಾದವ್ ಅವರು ನೀಡಿದ್ದರು.

ವಾರ್ತಾ ಇಲಾಖೆ ನಿರ್ದೇಶಕ ಮುದ್ದುಮೋಹನ್ ಮತ್ತು ತಂಡಕ್ಕೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹಾರ್ದಿಕ ಅಭಿನಂದನೆಗಳು.



ಧನಂಜಯ ಕುಮಾರ್, ಬೈಕೆರೆ ನಾಗೇಶ್, ಆರ್.ಪಿ. ಜಗದೀಶ್, ಎಲ್.ಪಿ, ಗಿರೀಶ್ ಮತ್ತಿತರ ಗಣ್ಯರೊಡನೆ ವಾರ್ತಾ ಇಲಾಖೆ ನಿರ್ದೇಶಕ ಡಾ. ಮುದ್ದುಮೋಹನ್



ರಕ್ಷಣಾ ಸಚಿವ ಎ.ಕೆ. ಆ್ಯಂಟನಿ ಅವರಿಂದ ಪ್ರಶಸ್ತಿ ಸ್ವೀಕರಿಸುತ್ತಿರುವ ವಾರ್ತಾ ಇಲಾಖೆ ನಿರ್ದೇಶಕ ಡಾ. ಮುದ್ದುಮೋಹನ್ ದೆಹಲಿ ಕರ್ನಾಟಕ ವಾರ್ತಾ ಕೇಂದ್ರದ ಸಹಾಯಕ ನಿರ್ದೇಶಕ ಗಿರೀಶ್

**ಪ್ರಧಾನ ಸಂಪಾದಕರು**
ಉಷಾ ಭರತಾದ್ರಿ

**ಸಂಪಾದಕ ಮಂಡಳಿ**
ಚೆನ್ನು ಎಸ್. ಮಠದ
ರೇಣುಕಾ ಎಸ್. ನಿಡಗುಂದಿ
ಸಂತೋಷ್ ಕುಮಾರ್ ಉಪಾಧ್ಯಾಯ
ಚಂದ್ರಶೇಖರ ಎನ್.ಪಿ.

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

**ಅಧ್ಯಕ್ಷರು**
ಡಾ. ವೆಂಕಟಾಚಲ ಜಿ. ಹೆಗಡೆ

**ಉಪಾಧ್ಯಕ್ಷರು**
ಉಷಾ ಭರತಾದ್ರಿ
ಬಿ.ಕೆ. ಬಸವರಾಜು

**ಪ್ರಧಾನ ಕಾರ್ಯದರ್ಶಿ**
ಸಿ.ಎಂ. ನಾಗರಾಜ

**ಖಜಾಂಚಿ**
ಕೆ.ಆರ್. ರಾಮಮೂರ್ತಿ

**ಜಂಟಿ ಕಾರ್ಯದರ್ಶಿಗಳು**
ಎನ್.ಆರ್. ಶ್ರೀನಾಥ್
ರೇಣುಕಾ ಎಸ್. ನಿಡಗುಂದಿ

**ಸಮಿತಿ ಸದಸ್ಯರು**
ಆಂಜನಿ ಗೌಡ
ಎಸ್.ಸಿ. ಹೇಮಲತ
ಟಿ.ಎಂ. ಮೈಲಾರಪ್ಪ
ಪಿ.ಸಿ. ಶ್ರೀನಿವಾಸ
ಸಿ.ಆರ್. ಶ್ರೀನಿವಾಸ
ಜಿ.ಜಿ. ಹೆಗಡೆ
ಆನಂದ ಈಶ್ವರಪ್ಪ ಮುರಗೋಡ
ಬಿ. ನಾರಾಯಣ
ಆರ್. ರೇಣುಕುಮಾರ್

**DELHI KARNATAKA SANGHA**
Rao Tularam Marg, Sector-12, R K Puram,
New Delhi-110022.
Phone: 011-26109615. 011-65643615
email:dksangha@gmail.com
website : www.delhikarnatakasangha.com

ಅಭಿಮತ ಸಂಪುಟ 21 ಸಂಚಿಕೆ 5
ಫೆಬ್ರವರಿ 2011, ಬೆಲೆ ರೂ. 1

# ಮನದ ಮಾತು

ಜನವರಿ 9, ಚುನಾವಣೆಯ ದಿನದಂದು ಅತೀವ ಚಳಿ. ಅಂದು ಸೂರ್ಯ ಇಣುಕು ನೋಟವನ್ನೂ ಬೀರಲಿಲ್ಲ. ಬಹುತೇಕ ದೆಹಲಿಯ ಜನ ಬೆಚ್ಚಗೆ ಮನೆಯೊಳಗೆ ಕುಳಿತಿದ್ದರು. ಆದರೆ ದೆಹಲಿಯ ಕನ್ನಡ ಬಂಧುಗಳಿಗೆ ಕನ್ನಡ ಹಾಗೂ ಕರ್ನಾಟಕ ಸಂಘದ ಮೇಲಿನ ಅಪಾರ ಪ್ರೀತಿ ಚಳಿಯ ಕೊರತೆಯನ್ನು ಮರೆಸಿತ್ತು. ಸಡಗರ, ಸಂಭ್ರಮದೊಂದಿಗೆ ನಿರೀಕ್ಷೆಗೂ ಮೀರಿ ಅಧಿಕ ಸಂಖ್ಯೆಯಲ್ಲಿ ಕನ್ನಡ ಶಾಲೆಯ ಆವರಣಕ್ಕೆ ಆಗಮಿಸಿ ತಮ್ಮ ಅಮೂಲ್ಯ ಮತ ಚಲಾಯಿಸಿ ನೂತನ ತಂಡವನ್ನು ಚುನಾಯಿಸಿದರು; ಸಂಘವನ್ನು ಗುರುತರ ಹೊಣೆಯೊಂದಿಗೆ ಸಮರ್ಥವಾಗಿ ಮುನ್ನಡೆಸುವ ಆಣತಿ ನೀಡಿದರು. ಈಗ ಅಧಿಕಾರಕ್ಕೆ ಬಂದಿರುವ ಹೊಸ ತಂಡ ತನ್ನ ಕರ್ತವ್ಯವನ್ನು ನಿರ್ವಹಿಸಲು ಅನೇಕ ಹೊಸ ಯೋಜನೆಗಳೊಂದಿಗೆ ಕಾರ್ಯಾರಂಭಗೊಳಿಸಿದೆ; ದೆಹಲಿ ಕನ್ನಡಿಗರ ಆಶೋತ್ತರಗಳಿಗೆ ಸ್ಪಂದಿಸುವ ಭರವಸೆ ತಳೆದಿದೆ. ವಿಶ್ವಾಸವಿಟ್ಟು ತಂಡವನ್ನು ಆರಿಸಿದ ಪ್ರೀತಿಯ ಕನ್ನಡ ಬಂಧುಗಳಿಗೆ ಸಮಸ್ತ ಕಾರ್ಯಕಾರಿ ಸಮಿತಿಯು ಕೃತಜ್ಞತಾಪೂರ್ವಕ ಧನ್ಯವಾದಗಳನ್ನು ಅತ್ಯಂತ ನಮ್ರತೆಯಿಂದ ಸಲ್ಲಿಸುತ್ತದೆ.

ಕರ್ನಾಟಕದ ಗದಗದಲ್ಲಿ ಜನಿಸಿ ಗುರುಸವಾಯಿ ಗಂಧರ್ವರ ಬಳಿ ಸಂಗೀತ ತರಬೇತಿ ಪಡೆದು ಸಂಗೀತ ಲೋಕದ ಧ್ರುವತಾರೆಯಾಗಿ ಮಿನುಗಿದ ಭಾರತ ರತ್ನ, ಪಂಡಿತ್ ಭೀಮಸೇನ ಜೋಶಿ ಅವರ ಅಗಲಿಕೆ ರಾಷ್ಟ್ರಕ್ಕೆ ತುಂಬಲಾರದ ನಷ್ಟ. ಅಷ್ಟು ಪ್ರಖರ ಪಾಂಡಿತ್ಯದ, ಧೀಮಂತ ಪ್ರತಿಭೆಯ ಅಪೂರ್ವ ಗಾಯಕ ಮತ್ತೊಮ್ಮೆ ಹುಟ್ಟಿ ಬರಲಾರರು. ಹಿಂದುಸ್ತಾನಿ ಶಾಸ್ತ್ರೀಯ ಸಂಗೀತದಲ್ಲಿ ತಮ್ಮದೇ ಆದ ನವನವೀನ ಆವಿಷ್ಕಾರಗಳನ್ನು ಹುಟ್ಟು ಹಾಕಿದ ಭೀಮಸೇನ ಜೋಶಿ ಅವರ ಸಾಧನೆ ನಿಜಕ್ಕೂ ಅವಿಸ್ಮರಣೀಯ. ಈಗ ನಮ್ಮೊಂದಿಗೆ ಇರುವ ಅವರ ಹೆಜ್ಜೆ ಗುರುತುಗಳು ಇನ್ನೂ ನೂರ್ಕಾಲ ಅವರ ನೆನಪನ್ನು ಚಿರಸ್ಥಾಯಿಯಾಗಿಸುವುದು ಖಚಿತ. ದೆಹಲಿ ಕರ್ನಾಟಕ ಸಂಘ ಅಗಲಿದ ಈ ಮಹಾನ್ ಚೇತನಕ್ಕೆ ತನ್ನ ಶ್ರದ್ಧಾಂಜಲಿಯನ್ನು ಅರ್ಪಿಸಿತು.

ಇದೇ ಸಂದರ್ಭದಲ್ಲಿ ನಾವು ಹೃತ್ಪೂರ್ವಕ ಶ್ರದ್ಧಾಂಜಲಿ ಅರ್ಪಿಸಿದ್ದು ಇತ್ತೀಚೆಗೆ ದಿವಂಗತರಾದ ಬಿ.ಎಸ್.ಚಂದ್ರಶೇಖರ್ ಅವರಿಗೆ. ಪ್ರಸಾರಭಾರತಿ ಸೇವೆಯಲ್ಲಿದ್ದ ಅವರು ತಮ್ಮ ದೆಹಲಿ ವಾಸ್ತವ್ಯದ ಸಂದರ್ಭದಲ್ಲಿ ಸಂಘದ ಮುಖವಾಣಿ 'ಅಭಿಮತ'ದ ಸಂಪಾದಕ ಮಂಡಳಿಯ ಸದಸ್ಯರಾಗಿ ಪತ್ರಿಕೆಯನ್ನು ಮುನ್ನಡೆಸಿದವರು. ಚಂದ್ರಶೇಖರ್ ತಮ್ಮ ಲಘು, ಹಾಸ್ಯ ಲೇಖನಗಳಿಂದ ಕನ್ನಡ ಸಾರಸ್ವತ ಲೋಕಕ್ಕೆ ಕಾಣಿಕೆ ನೀಡಿದವರು. ಅಭಿಮತ ಪತ್ರಿಕೆಯನ್ನು ಆರಂಭಿಸಿ, ಮುನ್ನಡೆಸಿದ ಅವರ ಸೇವೆಯನ್ನು ಸದಾ ಸ್ಮರಿಸುತ್ತಾ, ಸಂಪಾದಕ ಮಂಡಳಿ ತನ್ನ ಹೃದಯಪೂರ್ವಕ ಶ್ರದ್ಧಾಂಜಲಿಯನ್ನು ಸಮರ್ಪಿಸುತ್ತದೆ.

ಬೆಂಗಳೂರಿನಲ್ಲಿ ನಾಲ್ಕು ದಶಕಗಳ ನಂತರ ಕನ್ನಡ ಸಾಹಿತ್ಯ ಸಮ್ಮೇಳನ ಯಶಸ್ವಿಯಾಗಿ ನಡೆಯಿತು. ನಾಲ್ಕು ದಶಕಗಳ ಹಿಂದೆ ಬೆಂಗಳೂರು ಕನ್ನಡ ನಾಡಿನ ಅಂದಚೆಂದದ, ಚಿಕ್ಕ ಚೊಕ್ಕವಾದ ಊರಾಗಿತ್ತು. ಕನ್ನಡ ಇಡೀ ಊರಿನ ಉಸಿರಾಗಿತ್ತು. ಆದರೆ ಈಗ ಅಮೆರಿಕದ ಅಧ್ಯಕ್ಷ ಬರಾಕ್ ಒಬಾಮನನ್ನೂ ಬೆಚ್ಚಿ ಬೀಳಿಸುವ ಜಾಗತಿಕ ಮಾಹಿತಿ ತಂತ್ರಜ್ಞಾನದ ನೆಲೆಯಾಗಿದೆ. ಭಾರತದ ಭಾಷೆಗಳಲ್ಲದೆ, ಜಗತ್ತಿನ ಎಲ್ಲ ಪ್ರಮುಖ ಭಾಷೆಗಳು ಇಲ್ಲಿ ನೆಲೆಯೂರತೊಡಗಿವೆ. ಈ ಭರಾಟೆಯಲ್ಲಿ ಕನ್ನಡ ಬೆಂಗಳೂರಿನಲ್ಲಿ ಉಳಿದೀತೆ ಎಂಬ ಆತಂಕ ಕಾಡದೇ ಇರದು. ಇಂಥ ಸಂದರ್ಭದಲ್ಲಿ 77ನೇ ಕನ್ನಡ ಸಾಹಿತ್ಯ ಸಮ್ಮೇಳನ ಅತ್ಯಂತ ಪರಿಣಾಮಕಾರಿಯಾಗಿ ನೆರವೇರಿದ್ದು, ಕನ್ನಡತನವನ್ನು ಜಾಗೃತಗೊಳಿಸಿದ್ದು ಅಭಿನಂದನೀಯ. 98ರ ಹರೆಯದ ಹಿರಿಯ ನಿಘಂಟು ತಜ್ಞ, 'ಇಗೋ ಕನ್ನಡ' ಖ್ಯಾತಿಯ ಪ್ರೊ. ಜಿ.ವೆಂಕಟ ಸುಬ್ಬಯ್ಯನವರ ಅಧ್ಯಕ್ಷತೆ ಈ ಸಮ್ಮೇಳನಕ್ಕೆ ವಿಶೇಷ ಮೆರಗು ತಂದಿತ್ತು. ಜಗತ್ತಿಗೆ ಸೇರಿದ ಬೆಂಗಳೂರು ನಗರ ಕನ್ನಡಕ್ಕೆ ಪ್ರಥಮ ಪ್ರಾಶಸ್ತ್ಯ ನೀಡಲಿ, ಕನ್ನಡ ಸಂಸ್ಕೃತಿ ನಿತ್ಯ ಉಸಿರಾಡಲಿ ಎಂಬುದು ನಮ್ಮ ಅಭಿಲಾಷೆ.

❑ **ಉಷಾ ಭರತಾದ್ರಿ**

# ಅಂತರಾಳದಿಂದ....

## ಮಂಜು ಕರಗಿದಾಗ

ಈ ಬಾರಿ ದೆಹಲಿಗೆ ಯಾಕೋ ಮಂಜು ಮುಸುಕಿರಲಿಲ್ಲ. ತೀರಾ ತೆಳುವಾದ ಲೇಪನದೊಂದಿಗೆ ಬಂದ ಮಂಜಿನ ತೆರೆ ದೆಹಲಿಯ ಜೀವನವನ್ನು ತಲ್ಲಣಗೊಳಿಸಲಿಲ್ಲ. ಮುಂದೇನಾಗುವುದೆಂದು ಹೇಳುವುದು ಕಷ್ಟ. ಹವಾಮಾನವೇ ಒಂದು ಬಗೆಯಲ್ಲಿ ಕಲಸುಮೇಲೋಗರವಾಗುತ್ತಿದೆ. ಮಾಘದ ಮುಸ್ಸಂಜೆಯಲ್ಲಿ ಚಳಿ ನಿಧಾನವಾಗಿ ಕರಗಿ ಹೋಗಬೇಕಾದ ಕಾಲದಲ್ಲಿ ... ಮೊನ್ನೆ ಯಾರೋ ಊರಿನಿಂದ ಬಂದವರು ... "ನಮ್ಮ ಬದಿಗೆ ಭಯಂಕರ ಚಳಿ" ಎಂದು ಗೋಳಾಡಿಕೊಂಡಿದ್ದರು. ನಾವು ದೆಹಲಿಯಲ್ಲಿರುವವರು, ಚಳಿಗೆ ಹೆದರುವುದೆಂದರೆ? ಹಿಮಾಲಯದಿಂದ ಬೀಸಿ ಬರುವ ಚಳಿಗಾಳಿ ನಮ್ಮನ್ನೆಲ್ಲ ಸವರಿಕೊಂಡು ಹೋಯಿತಲ್ಲವೇ? ಆ ದಿನ.... ದೆಹಲಿ ಕರ್ನಾಟಕ ಸಂಘದ ಚುನಾವಣೆಯ ದಿನವೇ ಸೂರ್ಯದೇವನನ್ನೇ ಆಕಾಶದಲ್ಲಿ ಕೂಡಿಹಾಕಿದ ಚಳಿಯನ್ನು ನಾವೆಲ್ಲ ಮರೆಯುವುದಾರೂ ಹೇಗೆ? ಆದರೂ ನೂರಾರು ದೆಹಲಿ ಕನ್ನಡಿಗರು ಚಳಿಗೆ ಮೈವೊಡ್ಡಿ ಚುನಾವಣಾ ಪ್ರಕ್ರಿಯೆಯಲ್ಲಿ ತೊಡಗಿಕೊಂಡದ್ದು ಮರೆಯಲಾರದ ಅನುಭವ. ಜನವರಿಯ ಮೊದಲ ವಾರದ ಚಳಿಯ ಹಿನ್ನೆಲೆಯಲ್ಲಿ ದೆಹಲಿ ಕರ್ನಾಟಕ ಸಂಘದ ಚುನಾವಣೆ ನಡೆದಿದ್ದು ಇದೇ ಪ್ರಥಮ ಬಾರಿ ಎಂದು ಯಾರೋ ಹಿರಿಯರು ಗುನುಗುಟ್ಟಿದ್ದು ನನ್ನ ನೆನಪಿನಾಳದಲ್ಲಿ ಇಳಿದಿದೆ. ಪ್ರಕ್ರಿಯೆ ಮುಖ್ಯವಾಗಬೇಕು. ಸಂಘದ ಪ್ರಜಾಸತ್ತಾತ್ಮಕ ಪ್ರಕ್ರಿಯೆಯಲ್ಲಿ ಎಲ್ಲ ಸದಸ್ಯರಿಗೂ ಅವರ ವಿಚಾರಗಳನ್ನು ಮತದಾನದ ಮೂಲಕ ಒಡಮೂಡಿಸಲು ಸಾಧ್ಯವಾಗಬೇಕು. ಇದನ್ನು ಸಾಕಾರಗೊಳಿಸಿದ ಹಾಗೂ ಈ ಬಗೆಯ ಸಾಧ್ಯತೆಗಳ ಎಲ್ಲೆಯನ್ನು ನಿರ್ಮಿಸಿದ ಹಿಂದಿನ ಸಂಘದ ಪದಾಧಿಕಾರಿಗಳಿಗೂ, ಕಾರ್ಯಕಾರಿ ಸಮಿತಿಯ ಸದಸ್ಯರಿಗೂ ಅಭಿನಂದನೆಗಳು. ದೆಹಲಿ ಕರ್ನಾಟಕ ಸಂಘ ಸಾಂಸ್ಥಿಕವಾಗಿ ನಿರಂತರತೆಯನ್ನು ಪಡೆಯಬೇಕು. ಅದಕ್ಕೆ ಅದರದ್ದೇ ಆದ ಐದು ದಶಕಗಳಿಗೂ ಮೀರಿದ ಸಾಂಸ್ಕೃತಿಕ ಹಾಗೂ ರಾಜಕೀಯ ಪರಂಪರೆಯಿದೆ. ನಾವೆಲ್ಲ ಈ ಚಾರಿತ್ರಿಕ ಪರಂಪರೆಯ ಭಾಗವಾಗಿ ಈ ಪ್ರಕ್ರಿಯೆಯಲ್ಲಿ ದೆಹಲಿ ಕರ್ನಾಟಕ ಸಂಘದ ಗೆಲುವಿಗೆ ಕಾರಣರಾಗಿದ್ದೇವೆ. ವ್ಯಕ್ತಿ ವಿಚಾರಗಳು ಈ ಪ್ರಕ್ರಿಯೆಯಲ್ಲಿ ಗೌಣ ಎಂಬುದು ನನ್ನ ವಿನಮ್ರ ಅಭಿಪ್ರಾಯ.

ನೂತನ ಕಾರ್ಯಕಾರಿ ಸಮಿತಿ ಈಗ ಚುಕ್ಕಾಣಿ ಹಿಡಿದಿದೆ. ಹೊಸ ವಿಚಾರಗಳು ಹಾಗೂ ಆಶಯಗಳೊಂದಿಗೆ ಅದು ಮುನ್ನಡೆಯುವ ಉತ್ಸಾಹದಲ್ಲಿದೆ. ಚುನಾವಣೆಯೆಂಬ ಪ್ರಜಾಸತ್ತಾತ್ಮಕ ಪ್ರಕ್ರಿಯೆ ಮುಗಿದ ಮೇಲೆ ಕಾರ್ಯಕಾರಿ ಸಮಿತಿಯೆಂಬುದು ಒಂದು ಇಡಿಯಾದ ಶಕ್ತಿಯಾಗಿ ಕೆಲಸ ಮಾಡಲು ಮುಂದಾಗಿದೆ. ಹತ್ತಾರು ತೊರೆಗಳು ಹಾಗೂ ರಭಸದಿಂದ ನೆಗೆದು ಬರುವ ಪುಟ್ಟ ಪುಟ್ಟ ನೀರಿನ ಸೆಲೆಗಳ ಮೂಲಕವೇ ದೊಡ್ಡ ನದಿಯ ಹರವು, ಗಾಂಭೀರ್ಯ ಹೆಚ್ಚಬೇಕಲ್ಲವೇ? ಒಮ್ಮೆ ನದಿಯ ಉದರವನ್ನು ಸೇರಿದ ಮೇಲೆ ಯಾವ ತೊರೆಯ ನೀರು ಎತ್ತ? ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯ ಒಲವು, ಕಾರ್ಯಕಲಾಪಗಳ ಮುನ್ನಡೆ ಇದೇ ಬಗೆಯಲ್ಲೇ ಸಾಗಲಿ ಎಂದು ನಾವೆಲ್ಲರೂ ಆಶಿಸೋಣ. ಚುನಾವಣೆಯಲ್ಲಿ ಗೆದ್ದವರು, ಸೋತವರು... ಎಲ್ಲರೂ ಒಂದಾಗಿ ಸಂಘದ ಒಳಿತಿಗಾಗಿ ಶ್ರಮಿಸಬೇಕಾಗಿದೆ.

ದೆಹಲಿ ಕರ್ನಾಟಕ ಸಂಘದ ಮುಂದಿರುವ ಹಲವು ಬಗೆಯ ಆಶಯಗಳನ್ನು ಹಾಗೂ ಸಾಧ್ಯತೆಗಳನ್ನು ನಾವು ಒಟ್ಟಾಗಿ ಗಮನಿಸಬೇಕು. ಅದರ ಹಿರಿಮೆ–ಗರಿಮೆಗಳು ಸಂಘದ ಸದಸ್ಯರ ಚಟುವಟಿಕೆಗಳು, ಕಾರ್ಯಕ್ರಮಗಳು ಹಾಗೂ ಇನ್ನಿತರ ಪ್ರಸಂಗಗಳನ್ನು ಮೀರಿ ಬೆಳೆಯಬೇಕಾದ ಅವಶ್ಯಕತೆಯಿದೆ. ಸದಸ್ಯರೆಲ್ಲರ ಆಶಯ–ಆಕಾಂಕ್ಷೆಗಳನ್ನು ಗಮನದಲ್ಲಿಟ್ಟುಕೊಂಡು, ಅದನ್ನು ಸಮರ್ಥವಾಗಿ ನಿರ್ವಹಿಸಿಕೊಂಡು, ದೆಹಲಿ ಕರ್ನಾಟಕ ಸಂಘ ಇನ್ನಾವುದೊ ಅಮೂರ್ತವಾದ ಗುರಿಯತ್ತ ಸಾಗಬೇಕಾದ ಅವಶ್ಯಕತೆಯಿದೆ. ಸುಮಾರು ಎರಡು ದಶಕಗಳ ಹಿಂದೆ ಸಂಘದ ಸಾಂಸ್ಕೃತಿಕ ಸಮುಚ್ಚಯದ ಪರಿಕಲ್ಪನೆ ಮೂಡುವ ಕಾಲದಲ್ಲಿದ್ದ ವಿಚಾರಗಳು ಇದೇ ಬಗೆಯವಾಗಿದ್ದವು. ದೆಹಲಿಯಲ್ಲಿ ಕನ್ನಡಿಗರಿಗೆ ಹಾಗೂ ಕನ್ನಡೇತರರಿಗೆ ಕರ್ನಾಟಕದ ಭಾಷೆಯ ಹಾಗೂ ಸಂಸ್ಕೃತಿಯ ವಿಶಾಲ ಹರವಿನ ಪರಿಚಯ ಮಾಡಿಸುವ ಉದ್ದೇಶ ಇವುಗಳಲ್ಲಿ ಪ್ರಮುಖವಾದದ್ದು. ಜೊತೆಯಲ್ಲಿ ನಾವು ನಮ್ಮ ಸಂಸ್ಕೃತಿಯ ಹಾಗೂ ಭಾಷೆಯ ಶ್ರೀಮಂತಿಕೆಯನ್ನು ಮರೆಯುವಂತಾಗಬಾರದು. ದೆಹಲಿಯಂತಹ ಜಾಗೆಯಲ್ಲಿ ನಮ್ಮ ಸಾಂಸ್ಕೃತಿಕ ಸೃಜನಶೀಲತೆಯನ್ನು ಜೋಪಾನವಾಗಿರಿಸಿಕೊಳ್ಳಲು ನಾವು ತೀರಾ ಎಚ್ಚರದಿಂದ ಇರಬೇಕಾದ ಅಗತ್ಯವಿದೆ. ದೆಹಲಿಯಲ್ಲೇ ಹುಟ್ಟಿ ಬೆಳೆಯುತ್ತಿರುವ ಕನ್ನಡದ ಮುಂದಿನ ಪೀಳಿಗೆಯವರಿಗೆ ನಾವು ಕನ್ನಡದ ಮಣ್ಣಿನ ವಾಸನೆಯನ್ನು ಆಹ್ಲಾದಿಸಲು ಯಶಸ್ವಿಯಾಗುತ್ತಿದ್ದೇವೆಯೇ ಎಂಬುದೇ ಪ್ರಮುಖವಾದ ಪ್ರಶ್ನೆಯಾಗಿದೆ. ಸುಮಾರು ಎರಡು ದಶಕಗಳ ಹಿಂದೆ ಮೊದಲ ಬಾರಿಗೆ ದೆಹಲಿಗೆ ವಾಸಿಸಲು ಬಂದ ನನಗೆ ಕರ್ನಾಟಕದ, ಅದರಲ್ಲೂ ಉತ್ತರ ಕನ್ನಡದ ಹೆಂಚಿನ ಮನೆಗಳು ಎಲ್ಲೂ ಕಾಣದೇ ಕಸಿವಿಸಿಯಾಗಿತ್ತು. ಮುಂಬೈ, ಪುಣೆ, ಧಾರವಾಡ–ಹುಬ್ಬಳ್ಳಿ ಕಡೆ ಹೋಗುವಾಗ ಕಂಡುಬರುವ ಹೆಂಚಿನ ಮನೆಗಳು, ಇಮಾರತುಗಳು, ಚಾಳಗಳನ್ನು ನೋಡಿದಾಗಲೆಲ್ಲ ಒಂದು ಬಗೆಯ ರೋಮಾಂಚನವಾಗುತ್ತಿತ್ತು. 'ಅಂತೂ ಊರಿಗೆ ಬಂದೆವಲ್ಲ' ಎಂಬ ಭಾವ ಪ್ರಕಟವಾಗುತ್ತಿತ್ತು. ಆಗ ಇನ್ನೂ ವಿದ್ಯಾರ್ಥಿ ದೆಶೆಯಲ್ಲಿ ಕರ್ನಾಟಕ ಎಕ್ಸ್‌ಪ್ರೆಸ್‌ನಲ್ಲಿ ಬೆಂಗಳೂರಿಗೆ ಮರಳುತ್ತಿರುವಾಗ.... ಕರ್ನಾಟಕದ ಗಡಿಯೊಳಕ್ಕೆ ಬಂದಾಗ.... ಹತ್ತಿರ ಹತ್ತಿರ ಬಂದಾಗ.... ಕಾಣುವ ರಸ್ತೆ ಸಾರಿಗೆಯ ಕೆಂಪು ಬಸ್ಸುಗಳೂ ಒಂದು ಬಗೆಯ ಸಂತಸವನ್ನು ನೀಡುತ್ತಿದ್ದವು. ಈಗ ಕಾಲ ಬದಲಾಗಿ ಹೋಗಿದೆ. ಮಂಗಳೂರಿನ ಹೆಂಚಿನ ಮನೆಗಳೇ ಮಾಯವಾಗುತ್ತಿವೆ. ಒಟ್ಟಾರೆ ಎಲ್ಲವೂ ಬದಲಾಗುತ್ತಿದೆ. ನಾವು ಬದಲಾಗುತ್ತಿದ್ದೇವೆಯೇ? ಆದರೂ, ಈ ಬಗೆಯ ನವಿರಾದ ಸಂವೇದನೆಗಳೇ ನಮ್ಮನ್ನು ಭಾಷೆ ಹಾಗೂ ಸಂಸ್ಕೃತಿಯೊಂದಿಗೆ ಜೋಡಿಸಿಡುತ್ತವೆ. ಬಹುಶಃ ಇನ್ನೊಂದು ಪೀಳಿಗೆಯವರಿಗೆ ಇನ್ನೊಂದು ಬಗೆಯ ಆಶಯಗಳು... ರೋಮಾಂಚನ... ಒಟ್ಟಾರೆ ಬದಲಾವಣೆ ಬದುಕಿನ ಒಂದು ಅಂಗ.

ಈ ಬದಲಾವಣೆಯ ಆಂತರ್ಯವನ್ನು ಅರಿತುಕೊಂಡು ಸಂಘ ಮುಂದುವರೆಯಬೇಕಾಗಿದೆ. ಸಂಘವೆಂದರೆ ಬರೀ ಅದರ ಸುಂದರವಾದ ಕಟ್ಟಡ ಹಾಗೂ ಇನ್ನಿತರ ಸಲಕರಣೆಗಳಲ್ಲ. ಇದಕ್ಕೂ ಮಿಗಿಲಾದ ಒಂದು ಸಾಂಸ್ಕೃತಿಕ ಆಯಾಮ, ಅದಕ್ಕಿರಬೇಕಾದ ಅಗತ್ಯವಿದೆ. ಸುಮಾರು ಒಂದು ದಶಕದ ಹಿಂದ ಇದ್ದ ಹಲವಾರು ಸಮಸ್ಯೆಗಳು ಈಗ ನಮ್ಮನ್ನು ಕಾಡುವುದಿಲ್ಲ. ತಂತ್ರಜ್ಞಾನ ಬೆಳೆದಿದೆ. ಕರ್ನಾಟಕವೇ ಈಗ ಎಲ್ಲ ಕಾಲಕ್ಕೂ ದೆಹಲಿಗೆ ಬರುವಂತಾಗಿದೆ. ಕನ್ನಡದ ಎಲ್ಲ ಕಾರ್ಯಕ್ರಮಗಳು, ಕರ್ನಾಟಕದ ಎಲ್ಲ ಜಾಯಮಾನಗಳನ್ನು ನಾವು ಇಡೀ ದಿನ ದೆಹಲಿಯ ನಮ್ಮ ಮನೆಗಳಲ್ಲೇ ಕುಳಿತು ವೀಕ್ಷಿಸುವಂತಾಗಿದೆ. ದೆಹಲಿಯಿಂದ ಊರಿಗೆ ಹೋಗಿ ಬರಲು ಯಾವ ಅಡೆತಡೆಗಳೂ ಇಲ್ಲ. ಬೇಕಾದಾಗ, ಯಾವ ಜಾಗೆಯಲ್ಲಿದ್ದರೂ ನೀವು ಕರ್ನಾಟಕದ ಮೂಲೆಯನ್ನು ಕ್ಷಣಾರ್ಧದಲ್ಲಿ ತಲುಪಬಹುದು. ತಂತ್ರಜ್ಞಾನ, ಮಾಹಿತಿಜಾಲ...ದೂರವಾಣಿ.... ಸಂಪರ್ಕ.... ಇವೆಲ್ಲ ನಮ್ಮ ಬದುಕನ್ನು ವಿಸ್ಮಯಕಾರಕ ರೀತಿಯಲ್ಲಿ ಬದಲಿಸಿವೆ. ಬರೀ ಬದುಕನ್ನೇ ಅಲ್ಲ. ಅವು ನಮ್ಮ ವಿಚಾರಗಳನ್ನು, ಸಂವೇದನೆಗಳನ್ನು ... ಇನ್ನೂ ಏನೇನೂ ... ಒಟ್ಟಾರೆ ಎಲ್ಲವನ್ನೂ ಬದಲಿಸಿವೆ. ಭಾಷೆಯ ಪುಟ್ಟ ಗೊಂದಲಗಳನ್ನು ಹೊರತುಪಡಿಸಿದರೆ ಈಗ ಕರ್ನಾಟಕದ ತುಣುಕಗಳು ಜಗತ್ತಿನಾದ್ಯಂತ ಹಲವಾರು ಜಾಗೆಗಳಲ್ಲಿ, ಹಲವಾರು ಬಗೆಗಳಲ್ಲಿ ಜೀವಂತವಾಗಿವೆ.

ಈ ಬಗೆಯ ವಿಶಿಷ್ಟ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘ ಮೂರು ವಿವಿಧ ಪೀಳಿಗೆಗಳನ್ನು ಒಳಗೊಂಡು, ಬೇರೆ ಬೇರೆ ಮಜಲುಗಳಲ್ಲಿ ಸಾಗಬೇಕಾಗಿದೆ. ಯಾವುದನ್ನೋ ಕಳಕೊಂಡಂತ ಒಂದು ಬಗೆಯ ಅಗಲಿಕೆಯ ಭಾವ ಯಾಕೆ ನಮ್ಮನ್ನು ಗಾಢವಾಗಿ ಆವರಿಸುವುದಿಲ್ಲ ಎಂಬುದಕ್ಕೆ ಹಲವಾರು ಉತ್ತರಗಳು ಸಾಧ್ಯ. ಆದರೂ, ಊರಿಗೆ ಮರಳುವ ಆಸೆ ಹಲವರದ್ದು. ಆದರೆ, ಮರಳಲಾಗದ ವ್ಯಥೆ ಇನ್ನು ಕೆಲವರದ್ದು. ಒಟ್ಟಾರೆ, ನಾವು ದೆಹಲಿ ಕನ್ನಡಿಗರು ಒಂದು ಬಗೆಯ ಸ್ಥಿತ್ಯಂತರವಾದ ಪ್ರಜ್ಞೆಯಲ್ಲಿ ತೊಳಲಾಡುತ್ತಿದ್ದೇವೆ. ದೆಹಲಿ ಕರ್ನಾಟಕ ಸಂಘಕ್ಕೆ ಬಹುಶ: ಈ ಆಯಾಮಗಳನ್ನು ಗಮನದಲ್ಲಿಟ್ಟುಕೊಂಡು ಮುಂದುವರಿಯಬೇಕಾದ ಅಗತ್ಯತೆ ಇದೆ. ದೆಹಲಿಯಲ್ಲಿ ಕನ್ನಡದ ಕಂಪನ್ನು ಹರಿ ಬಿಡುವ ಗುರುತರವಾದ ಜವಾಬ್ದಾರಿ ಅದಕ್ಕಿದೆ. ಹೊರನಾಡ ಕನ್ನಡಿಗರು–ಒಳನಾಡ ಕನ್ನಡಿಗರು ಎಂಬ ಭೇದವೇ ಇಲ್ಲದಷ್ಟು ಬದಲಾವಣೆಯ ಗಾಳಿ ಬೀಸುತ್ತಿದೆ. ಹಾಗೆ ನೋಡಿದರೆ, ಎಷ್ಟೋ 'ಹೊರ ನಾಡಿ'ನವರು ಕನ್ನಡಿಗರಾಗದೇ ಕರ್ನಾಟಕದಲ್ಲೇ ತಳವೂರಿದ್ದಾರೆ. ಎಷ್ಟೋ ಕನ್ನಡಿಗರು ಹೊರನಾಡಿನಲ್ಲಿ 'ಕನ್ನಡಿಗ'ರಾಗಿಯೇ ತಳವೂರಿದ್ದಾರೆ. ಇದು ಬದುಕಿನ...ಸಂಸ್ಕೃತಿಯ ... ಸಂವೇದನೆಯ ವಿಚಾರ. ಸಂಘದ ತುಂಬ ಹರಿಯವ ಗಾಳಿಯಲ್ಲಿ ಈ ಕನ್ನಡದ ಕಂಪು ಸದಾ ಪಸರಿಸಲಿ ಎಂದು ಹಾರೈಸುತ್ತಾ ... ನಮಗೆ ಈ ಬಗೆಯ ಜವಾಬ್ದಾರಿಗಳನ್ನು ಕೊಟ್ಟ ನಿಮಗೆಲ್ಲ ನಮಿಸುತ್ತ... ಈ ನೂತನ ಕಾರ್ಯಕಾರಿ ಸಮಿತಿ ತಮ್ಮೆಲ್ಲರದ್ದು, ತಮಗಾಗಿ ಕೆಲಸ ಮಾಡಲು ಸಿದ್ಧವಿದೆ ಎಂದು ಹೇಳಿಕೊಳ್ಳುತ್ತ... ಈಗ ಮತ್ತೆ ದೆಹಲಿಯನ್ನು ಆವರಿಸಿಕೊಳ್ಳುತ್ತಿರುವ ಮಂಜು ಬೇಗ ಕರಗಲಿ ಎಂದು ಆಶಿಸುತ್ತೇನೆ.

❑ **ಡಾ.ವೆಂಕಟಾಚಲ ಹೆಗಡೆ**

ಮುನ್ನೋಟ

ಹೊಸ ವರ್ಷದ ಆರಂಭದಲ್ಲಿ ಹೊಸ ಹರುಷದೊಂದಿಗೆ ಸಂಘಕ್ಕೆ ಹೊಸದಾದ ಕಾರ್ಯಕಾರಿ ಸಮಿತಿ ಆಯ್ಕೆಯಾಗಿದೆ. ಬಹಳಷ್ಟು ಕೆಲಸಕಾರ್ಯಗಳನ್ನು ಮಾಡುವ ತವಕ ಹಾಗೂ ಹಂಬಲ ನಮಗಿದೆ. ಮುಖ್ಯವಾಗಿ ಸಂಘದ ದುರಸ್ತಿ ಕೆಲಸ, ಸಾಹಿತ್ಯ ಸಾಂಸ್ಕೃತಿಕ ಕಾರ್ಯಕ್ರಮಗಳ ಜೊತೆಗೆ ವಾರ್ಷಿಕವಾಗಿ ನಡೆಯುವ ಕ್ರಿಕೆಟ್, ಆಟೋಟ, ಪಿಕ್‌ನಿಕ್ ಮುಂತಾದ ಕಾರ್ಯಕ್ರಮಗಳ ಆಯೋಜನೆಗಳನ್ನು ಮಾಡಬೇಕಾಗಿದೆ.

ಇರುವ ಹಾಗೂ ಬರಬಹುದಾದ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸದಸ್ಯರ ಬೇಕುಗಳಿಗೆ ಸ್ಪಂದಿಸುವ ಪ್ರಯತ್ನವನ್ನು ಮಾಡುವತ್ತ ನಮ್ಮ ಹೆಜ್ಜೆ...... ಇದಕ್ಕೆ ನಿಮ್ಮ ಹೆಜ್ಜೆಯ ಸಹಕಾರವನ್ನು ಬಯಸುತ್ತಿದ್ದೇವೆ.

ಇದೀಗ ಸಂಘದ ಸದಸ್ಯರು ಬಹುದಿನಗಳಿಂದ ನಿರೀಕ್ಷಿಸುತ್ತಿದ್ದ ಅಂಬಿಕೇಶ್ ಸ್ಮಾರಕ ಕ್ರಿಕೆಟ್ ಪಂದ್ಯಾವಳಿ ಆಯೋಜನೆಗೊಳ್ಳುತ್ತಿದೆ. ಜೊತೆಗೆ ಮಾರ್ಚ್ ತಿಂಗಳಲ್ಲಿ ವಾರ್ಷಿಕ ದಿನಾಚರಣೆ ಮತ್ತು ಆಟೋಟ ಸ್ಪರ್ಧೆಗಳು ನಡೆಯಲಿವೆ.
ಮುಂದಿನ ಪರೀಕ್ಷೆಗಳಿಗೆ ಸಿದ್ಧತೆ ಮಾಡುತ್ತಿರುವ ಎಲ್ಲಾ ವಿದ್ಯಾರ್ಥಿಗಳಿಗೆ ನನ್ನ ಶುಭ ಹಾರೈಕೆಗಳು.

❑ ಸಿ.ಎಂ.ನಾಗರಾಜ
ಪ್ರಧಾನ ಕಾರ್ಯದರ್ಶಿ

# ದೆಹಲಿ ಕರ್ನಾಟಕ ಸಂಘ

ರಾವ್ ತುಲಾರಾಮ್ ಮಾರ್ಗ, ಸೆಕ್ಟರ್-12, ಆರ್.ಕೆ. ಪುರಂ,
ನವದೆಹಲಿ-110022

## ಈ ಬಾರಿಯ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿಜೇತ

## ಡಾ. ರಹಮತ್ ತರೀಕೆರೆ

ಅವರಿಗೆ

## ಅಭಿನಂದನೆ ಮತ್ತು ಸಂವಾದ ಕಾರ್ಯಕ್ರಮ

ದಿನಾಂಕ : 18.02.2011ರ ಶುಕ್ರವಾರ
ಸಮಯ : ಸಂಜೆ 6.30ಕ್ಕೆ
ಸ್ಥಳ : ಸಂಘದ ಸೆಮಿನಾರ್ ಹಾಲ್

## ಬನ್ನಿ ಪಾಲ್ಗೊಳ್ಳಿ

ಡಾ. ವೆಂಕಟಾಚಲ ಜಿ.ಹೆಗಡೆ
ಅಧ್ಯಕ್ಷರು

ಸಿ.ಎಂ. ನಾಗರಾಜ
ಪ್ರಧಾನ ಕಾರ್ಯದರ್ಶಿ

## ಉಚಿತ ವೈದ್ಯಕೀಯ ತಪಾಸಣೆ

ಫೆಬ್ರವರಿ ತಿಂಗಳ 27ರ ಭಾನುವಾರದಂದು ಡಾ. ಭೀಮಭಟ್ ಅವರಿಂದ ಉಚಿತ ವೈದ್ಯಕೀಯ ತಪಾಸಣೆ ನಡೆಯಲಿದೆ. ದೆಹಲಿ ಕನ್ನಡಿಗರು ಈ ವೈದ್ಯಕೀಯ ಸೇವೆಯನ್ನು ಸದುಪಯೋಗಪಡಿಸಿಕೊಳ್ಳಬೇಕಾಗಿ ವಿನಂತಿ.

■ ಪ್ರಧಾನ ಕಾರ್ಯದರ್ಶಿ

## ಅಂಬಿಕೇಶ್ ಮೆಮೋರಿಯಲ್ ಕ್ರಿಕೆಟ್ ಪಂದ್ಯಾವಳಿ

ದೆಹಲಿ ಕರ್ನಾಟಕ ಸಂಘ ಆಯೋಜಿಸುವ ಅಂಬಿಕೇಶ್ ಮೆಮೋರಿಯಲ್ ಕ್ರಿಕೆಟ್ ಪಂದ್ಯಾವಳಿಯು ಫೆಬ್ರವರಿ 13, 20 ಮತ್ತು 27ರಂದು ನಡೆಯಲಿದೆ. ಒಟ್ಟು 14 ತಂಡಗಳು ಈ ಪಂದ್ಯಾವಳಿಯಲ್ಲಿ ಭಾಗವಹಿಸಲಿವೆ.
ಸ್ಥಳ : ದಿನಾಂಕ 13 ಮತ್ತು 27 ಫೆಬ್ರವರಿ 2011- ಸಿವಿಲ್ ಸರ್ವಿಸಸ್ ಅಥಾರಿಟಿ ಗ್ರೌಂಡ್ಸ್, ವಿನಯ್ ಮಾರ್ಗ್-ನೆಹರು ಪಾರ್ಕ್ ಸಮೀಪ
ದಿನಾಂಕ 20.2.2011ರಂದು ಬಸವ ಇಂಟರ್‌ನ್ಯಾಷನಲ್ ಸ್ಕೂಲ್, ದ್ವಾರಕಾ, ನವದೆಹಲಿ.
ಹೆಚ್ಚಿನ ವಿವರಗಳಿಗೆ ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿರಿ.

## ನಾಟಕ

ದೆಹಲಿ ಕರ್ನಾಟಕ ಸಂಘದ ನಾಟಕ ಉಪಸಮಿತಿ ಒಂದು ನಾಟಕವನ್ನು ಪ್ರದರ್ಶಿಸಲು ನಿರ್ಧರಿಸಿದ್ದು, ನಾಟಕದಲ್ಲಿ ಅಭಿನಯಿಸಲು ಆಸಕ್ತಿಯುಳ್ಳವರು ತಮ್ಮ ಹೆಸರನ್ನು ಸಂಘದ ಕಛೇರಿಯಲ್ಲಿ ನೊಂದಾಯಿಸಬಹುದು.
ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ : 26109615 / 65643615

# ಮೂರು ರಾಗಗಳಿಂದ ನೂರಾರು ರಾಗಗಳನ್ನು ಸೃಜಿಸಿದ ರಾಗಬ್ರಹ್ಮ ಭಾರತ ರತ್ನ, ಪಂಡಿತ್ ಭೀಮಸೇನ ಜೋಷಿ



"ಸಂಗೀತ ಕಲಿಯಲು ಒಬ್ಬ 'ಗುರು'ವಿಗಾಗಿ ಹುಡುಕುತ್ತಾ ಮನೆ ಬಿಟ್ಟು ಹೊರಟು ಸಂಘರ್ಷದ ಬದುಕನ್ನು ಎದುರಿಸಿ ಸಹಸ್ರಾರು ಸಂಗೀತಾರ್ಥಿಗಳಿಗೆ 'ಗುರು'ವಾಗಿ ಬದುಕಿ ಭೌತಿಕವಾಗಿ ಇಹಲೋಕ ತ್ಯಜಿಸಿದ್ದರೂ, ಭಾರತ ರತ್ನ ಪಂಡಿತ್ ಭೀಮಸೇನ ಜೋಷಿ ಅವರು ತಮ್ಮ ರೋಮಾಂಚನಗೊಳಿಸುವ ಸುಶ್ರಾವ್ಯ ಕಂಠ, ತನ್ಮಯತೆಗೊಳಿಸುವ ಭಜನೆ, ಗಾಯನ, ಸಂಗೀತ ಶಾಸ್ತ್ರದ ನಿಯಮಗಳನ್ನು ಮೀರದೆಯೂ ಸಿದ್ಧಿಸಿಕೊಂಡ ರಾಗಶುದ್ಧತೆಗಳಿಂದ ತಾವಷ್ಟೆ ಅಲ್ಲದೇ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತವನ್ನೂ ಅಮರವಾಗಿಸಿದ್ದಾರೆ. ಮನಸ್ಸು-ಹೃದಯ-ಬುದ್ಧಿಗಳನ್ನು ಮೇಳೈಸುವುದೇ ಇವರ ಶಾಸ್ತ್ರೀಯ ಸಂಗೀತದ ವೈಶಿಷ್ಟ್ಯವಾಗಿತ್ತು"-ಇವು 'ಸಿಂಗ್ ಬಂಧು ಸೋದರರು' ಎಂದೇ ಪ್ರಸಿದ್ಧರಾದ ಶ್ರೀಯುತ ತೇಜ್‌ಪಾಲ್ ಸಿಂಗ್ ಅವರ ಮನದಾಳದ ಮಾತುಗಳು. ದೆಹಲಿ ಕರ್ನಾಟಕ ಸಂಘವು 26.01.2011ರ ಸಂಜೆ ಏರ್ಪಡಿಸಿದ್ದ ಪಂಡಿತ್ ಭೀಮಸೇನ ಜೋಷಿ ಅವರ ಭಾವಪೂರ್ಣ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ತೇಜ್‌ಪಾಲ್ ಸಿಂಗ್ ಅವರು ದೆಹಲಿ ವಿಶ್ವವಿದ್ಯಾಲಯದ ವಿಶ್ರಾಂತ ಸಂಗೀತ ಪ್ರಾಧ್ಯಾಪಕರು. ಇವರು ತಮಸ್, ಫರ್‌ಫರ್‌ಕೀ ಕಹಾನಿ ಮೊದಲಾದ ಟೆಲಿ ಧಾರಾವಾಹಿಗಳಿಗೆ ಸಂಗೀತ ನಿರ್ದೇಶನವನ್ನು ಮಾಡಿ ಮನೆ ಮಾತಾಗಿರುವ ಪ್ರಖ್ಯಾತ ಹಿಂದೂಸ್ತಾನಿ ಗಾಯಕರೂ ಹೌದು. ಗಾಯನ ಕ್ಷೇತ್ರಕ್ಕೆ ಕರ್ನಾಟಕ ನೀಡಿದ ಪ್ರಖ್ಯಾತ ಹಿಂದುಸ್ತಾನಿ ಗಾಯಕರ ಕೊಡುಗೆಯನ್ನು ಶ್ರೀ ಸಿಂಗ್ ಅವರು ಮನಸಾರೆ ಪ್ರಶಂಶಿಸುತ್ತಾ ಪಂಡಿತ್ ಭೀಮಸೇನ್ ಜೋಷಿ ಅವರ ಜೀವನ ಚರಿತ್ರೆಯ ಮೇಲೆ ಬೆಳಕು ಚೆಲ್ಲಿದರು.

ಇದೇ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಶ್ರೇಷ್ಠ ಹಿಂದೂಸ್ತಾನಿ ಗಾಯಕ, ಕರ್ನಾಟಕ ವಾರ್ತಾ ಇಲಾಖೆಯ ನಿರ್ದೇಶಕರಾದ ಶ್ರೀಯುತ ಮುದ್ದುಮೋಹನ್ ಅವರು ತಮ್ಮ ಹಾಗೂ ಪಂಡಿತ್ ಭೀಮಸೇನ ಜೋಷಿ ಅವರ ಒಡನಾಟ ಮತ್ತು ಜೀವನಾನುಭವಗಳನ್ನು ನೆರೆದಿದ್ದ ಸಂಗೀತಾಸಕ್ತರ ಜೊತೆ ಹಂಚಿಕೊಂಡರು. "ಶಾಸ್ತ್ರೀಯ ಸಂಗೀತದ ನಭೋಮಂಡಲದಲ್ಲಿ ಸೂರ್ಯನಂತೆ ತೇಜೋಮಯನಾಗಿ ಬೆಳಗಿ ಇಂದು ಅಸ್ತಂಗತರಾಗಿರುವ ಪಂಡಿತ್ ಭೀಮಸೇನ ಜೋಷಿ ಅವರು ಗದಗಿನ ಗ್ರಾಮೀಣ ಪ್ರದೇಶದಲ್ಲಿ ಜನಿಸಿ ಶಾಸ್ತ್ರೀಯ ಸಂಗೀತದಲ್ಲಿ ವಿಶ್ವವಿಖ್ಯಾತರಾಗಿದ್ದಾರೆ. ಕಷ್ಟಸಹಿಷ್ಣುತೆ, ಅಚಲ ಗುರುಭಕ್ತಿ, ಅತೀವ ಆಧ್ಯಾತ್ಮಿಕ ಒಲವು ಇವು ಅವರ ಬದುಕಿನ ವೈಶಿಷ್ಟ್ಯತೆಗಳಾಗಿದ್ದು ತಮ್ಮ ಕಿರಾಣಾ-ಘರಾಣದ ಮೂಲಕ ಪಂಡಿತರಿಗಷ್ಟೇ ಅಲ್ಲ ಪಾಮರರಿಗೂ ಸಂಗೀತದ ರಸದೌತಣ ಉಣ ಬಡಿಸಿದ ಕೀರ್ತಿಗೆ ಭಾಜನರಾಗಿದ್ದಾರೆ. ಪಂಡಿತ್ ಭೀಮಸೇನ ಜೋಷಿಯವರ ಜೀವನದಲ್ಲಿನ ಮತ್ತೊಂದು ಕುತೂಹಲಕಾರಿ ಅಂಶವೇನೆಂದರೆ ತಂದೆ ಶ್ರೀ ಗುರುರಾಜ ಜೋಷಿ ಅವರೇ ತಮ್ಮ ಮಗನನ್ನು ಕುರಿತು 'ನಡೆದು ಬಂದ ದಾರಿ' ಎಂಬ ಜೀವನ ಚರಿತ್ರೆಯನ್ನು ಬರೆದಿರುವುದು. ಅದರಲ್ಲಿ ತಮ್ಮ ಮಗ ಶ್ರೇಷ್ಠ ಸಂಗೀತಗಾರನಾಗಬೇಕೆಂಬ ಕನಸು ಕಂಡಿದ್ದಲ್ಲದೇ, ತಾವು ಶ್ರೇಷ್ಠ ಸಂಗೀತಗಾರನ ತಂದೆಯಾಗಬೇಕೆಂಬ ಹಂಬಲ ವ್ಯಕ್ತಪಡಿಸಿದ್ದಾರೆ"-ಎಂದು ಉಲ್ಲೇಖಿಸುತ್ತ ಶ್ರೀ ಮುದ್ದುಮೋಹನ್ ಅವರು ಭೀಮಸೇನ ಜೋಷಿ ಅವರ ಬಗೆಗಿನ ಗೌರವಾದರಗಳನ್ನು ಪ್ರತಿಬಿಂಬಿಸಿದರು.

ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ಮಾತನಾಡುತ್ತಾ ಮುಂಬರುವ ದಿನಗಳಲ್ಲಿ ಅಗಲಿದ ಭೀಮಸೇನ ಜೋಷಿ ಅವರ ಸ್ಮರಣಾರ್ಥ ಒಂದು 'ಸ್ವರಾಂಜಲಿ' ಗಾಯನ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವ ಬಯಕೆ ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘದ ಮುಖವಾಣಿಯಾದ 'ಅಭಿಮತ' ಪತ್ರಿಕೆಯ ಆರಂಭದ ದಿನಗಳಲ್ಲಿ ಇಂದಿನ ಅಧ್ಯಕ್ಷರಾದ ಡಾ. ವೆಂಕಟಾಚಲ ಹೆಗಡೆಯವರ ಜೊತೆ ಸಂಪಾದಕ ಮಂಡಳಿಯ ಸದಸ್ಯರಾಗಿದ್ದು, ಇತ್ತೀಚೆಗೆ ನಿಧನರಾದ ಶ್ರೀ ಬಿ.ಎಸ್. ಚಂದ್ರಶೇಖರ್ ಅವರಿಗೂ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು. ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆಯವರು ಶ್ರೀಯುತ ಬಿ.ಎಸ್. ಚಂದ್ರಶೇಖರ್ ಅವರ ಜೊತೆಗಿನ ತಮ್ಮ ಒಡನಾಟವನ್ನು ಹಂಚಿಕೊಳ್ಳುತ್ತಾ, ಹಲವು ಹಾಸ್ಯ ಲೇಖನಗಳು, ಸಣ್ಣಕತೆ, ಕವನಗಳನ್ನು ಬರೆದು ಸದ್ದಿರಿಯದ ಸಾಧನೆಗೈದ ಬಿ.ಎಸ್. ಚಂದ್ರಶೇಖರ್ ಅವರು ಕರ್ನಾಟಕ ಸಂಘಕ್ಕೆ ಸಲ್ಲಿಸಿದ ಸೇವೆಯನ್ನು ಸ್ಮರಿಸಿದರು. ಚಂದ್ರಶೇಖರ್ ಅವರ ಪತ್ನಿಯೂ ಸಹ 'ಧೃತಿ' ಎಂಬ ಕಾವ್ಯನಾಮದಲ್ಲಿ ಹಲವಾರು ಲೇಖನಗಳು, ಕಥೆಗಳನ್ನು ಅಭಿಮತಕ್ಕಾಗಿ ಬರೆಯುತ್ತಿದ್ದ ಸಂಗತಿಯನ್ನು ನೆನಪಿಸಿಕೊಂಡರು. 1989-2000ವರೆಗೆ ದೆಹಲಿ ಆಕಾಶವಾಣಿಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ ನಂತರ ಚಂದ್ರಶೇಖರ್ ಅವರು ಬೆಂಗಳೂರಿಗೆ ಹೋಗಿ ನೆಲೆಸಿದ್ದರು.

ಕಾರ್ಯಕ್ರಮದ ಮುಕ್ತಾಯಕ್ಕೂ ಮುನ್ನ ಶ್ರೀ ಮುದ್ದುಮೋಹನ್ ಅವರು ತಮ್ಮ ಸುಮಧುರ ಕಂಠದಿಂದ ದಾಸರ ಪದವನ್ನು ಮನದುಂಬಿ ಹಾಡಿ ಅಗಲಿದ ಮಹಾನ್ ಚೇತನಕ್ಕೆ ಅರ್ಥಪೂರ್ಣ ಶ್ರದ್ಧಾಂಜಲಿ ಸಮರ್ಪಿಸಿದರು. ದೆಹಲಿ ಸಂಗೀತ ಪ್ರೇಮಿಗಳು ಮೆಲುಕು ಹಾಕುವಂತಿದ್ದ ಅವಿಸ್ಮರಣೀಯ ಸಂಜೆಯಲ್ಲಿ ಭಾಗವಹಿಸಿ ಅಗಲಿದ ಮಹಾನ್ ಚೇತನಕ್ಕೆ ತಮ್ಮ ಅಂತಿಮ ನಮನ ಸಲ್ಲಿಸಿದರು.

ಕಾರ್ಯಕ್ರಮದ ಆರಂಭದಲ್ಲಿ ಶ್ರೀ ಸಂತೋಷ್‌ಕುಮಾರ್ ಉಪಾಧ್ಯಾಯ ಅವರು ಪಂಡಿತ್ ಭೀಮಸೇನ ಜೋಷಿಯವರ ಜೀವನ - ಸಾಧನೆಗಳ ಕುರಿತಾದ ಕಿರುಸಾಕ್ಷ್ಯಚಿತ್ರವನ್ನು ಪ್ರಸ್ತುತಪಡಿಸಿದರು. ಕಾರ್ಯಕ್ರಮವನ್ನು ಸಂಘದ ಉಪಾಧ್ಯಕ್ಷೆ ಶ್ರೀಮತಿ ಉಷಾ ಭರತಾದ್ರಿ ನಿರೂಪಿಸಿದರು, ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ಅವರು ವಂದಿಸಿದರು.

❑ ಚಂದ್ರಶೇಖರ ಎನ್.ಪಿ.

ಸ್ಮರಣೆ

# ಮೌನವಾದ ಭೀಮಸೇನ ಸುರ-ತಾನ

ಧಾರವಾಡ ಅದೆಷ್ಟೋ ಸಂಗೀತ ರತ್ನಗಳನ್ನು ಭಾರತದೇಶಕ್ಕೆ ನೀಡಿದ ಅಪೂರ್ವ ಗಣಿ. ಅದು ನೀಡಿದ ಪಂಚರತ್ನಗಳಾದ ಡಾ. ಮಲ್ಲಿಕಾರ್ಜುನ್ ಮನ್ಸೂರ್, ಪಂಡಿತ್ ಬಸವರಾಜ ರಾಜಗುರು, ವಿದುಷಿ ಗಂಗೂಬಾಯಿ ಹಾನಗಲ್ಲ, ಭಾರತ ರತ್ನ ಪಂ. ಭೀಮಸೇನ ಜೋಷಿ, ಪಂ. ಕುಮಾರ್ ಗಂಧರ್ವ ಇವರುಗಳ ಹೆಸರು ವಿಶ್ವದಲ್ಲಿ ಧ್ರುವ ನಕ್ಷತ್ರದಂತೆ ಚಿರಸ್ಥಾಯಿ.

ಭೀಮಸೇನನ ಜನನ 1922 ರ ಫೆಬ್ರವರಿ 4 ರಂದಾಯಿತು. ಅಜ್ಜ ಉತ್ತಮ ಕೀರ್ತನಕಾರರಾಗಿದ್ದರು. ತಂದೆ ಶ್ರೀ ಗುರುರಾಜ ಜೋಷಿ ಸಂಸ್ಕೃತ ವಿದ್ವಾಂಸರು ಹಾಗೂ ಶಾಲೆಯ ಮುಖ್ಯೋಪಾಧ್ಯಯರು. ಮನೆಯ ಕಟ್ಟಳೆಯನ್ನು ಮೀರಿ ಬೆಳೆಯುವ ಚೈತನ್ಯ ಬಾಲಕ ಭೀಮಸೇನನಲ್ಲಿ. ಚಿಕ್ಕಂದಿನಿಂದಲೇ ಸಂಗೀತವನ್ನು ಆಲಿಸುವದೆಂದರೆ ಭೀಮಸೇನನಿಗೆ ಎಲ್ಲಿಲ್ಲದ ಆಸಕ್ತಿ. ಶಾಲೆ ಮತ್ತು ಮನೆಯ ನಡುವಿನ ದಾರಿಯಲ್ಲಿದ್ದ ರೆಕಾರ್ಡ ಶಾಪ್ ಹೊರಗೆ ನಿಂತು ತಾಸುಗಟ್ಟಲೇ ಸಂಗೀತವನ್ನು ಕೇಳುತ್ತ ನಿಂತಿರುತ್ತಿದ್ದ ಭೀಮಸೇನನಿಗೆ ಅಕಸ್ಮಾತ್ತಾಗಿ ಉಸ್ತಾದ್ ಅಬ್ದುಲ್ ಕರೀಂಖಾನ್ ಸಾಹೇಬರ ರಾಗ್‌ಬಸಂತ್ ಕೇಳುವ ಯೋಗ ಒದಗಿ ಬಂತು. ತಕ್ಷಣವೇ ಆ 12ರ ಹರೆಯದ ಭೀಮಸೇನ ತನ್ನ ಜೀವನದ ಗುರಿಯನ್ನು ನಿಶ್ಚಯಿಸಿಕೊಂಡ. ಗುರುವನ್ನು ಅರಸುತ್ತಾ ದೆಹಲಿ, ಕಲ್ಕತ್ತಾದವರೆಗೂ ಅಲೆದ. ಅನೇಕ ಬಾರಿ ಟಿಕೆಟ್ ಇಲ್ಲದೇ ರೈಲು ಪ್ರಯಾಣ ಮಾಡಬೇಕಾಯಿತು. ಕೊನೆಗೊಂದು ದಿನ ಜಲಂಧರದಲ್ಲಿ ತನ್ನ ಆರಂಭದ ಗುರುವನ್ನು ಹುಡುಕಿ ಅವರ ಮಾರ್ಗದರ್ಶನದಲ್ಲಿ 3 ವರ್ಷ ಸಂಗೀತಾಭ್ಯಾಸ ಮಾಡಿದ. ಒಂದುದಿನ ತಂದೆ ಗುರುರಾಜ ಜೋಷಿಯವರು ಮಗನನ್ನು ಜಲಂಧರದಲ್ಲಿ ಪತ್ತೆ ಮಾಡಿ ಕರೆಸಿಕೊಂಡರು. ತದನಂತರ ತಮ್ಮ ಮನೆಯ ಹತ್ತಿರದ ಕುಂದಗೋಳದಲ್ಲಿದ್ದ ಕಿರಾಣಾ ಘರಾಣಾದ ಪಂಡಿತ ಸವಾಯಿ ಗಂಧರ್ವರ ಅಡಿಯಲ್ಲಿ ಪಳಗಿದ ಪಂ. ಭೀಮಸೇನ ಜೋಷಿ ಮತ್ತೆ ಹಿಂದಿರುಗಿ ನೋಡಲೇ ಇಲ್ಲ. 5 ವರ್ಷಗಳಲ್ಲಿ ಹಗಲು-ರಾತ್ರಿ ಎನ್ನದೇ ತೋಡಿ, ಮುಲ್ತಾನಿ ಮತ್ತು ಪೂರಿಯಾ ರಾಗಗಳನ್ನು ಕಲಿತ ಪಂ. ಭೀಮಸೇನ ಜೋಷಿ ಇನ್ನಿತರ ರಾಗಗಳನ್ನು ತಮ್ಮ ಗುರುಗಳಿಗೆ ಸಾಥ್ ನೀಡುತ್ತಾ ಹಾಗೂ ತಮ್ಮ ಸಹಪಾಠಿ ವಿದುಷಿ ಗಂಗೂಬಾಯಿ ಹಾನಗಲ್ ಹತ್ತಿರ ಕಲಿತರು.



ಬೇಗಂ ಅಖ್ತರ್‌ರ ಶಿಫಾರಸ್ಸಿನ ಮೇರೆಗೆ ಲಖನೌ ಆಕಾಶವಾಣಿಯಿಂದ ತಮ್ಮ ಮೊದಲ ವೃತ್ತಿಯನ್ನಾರಂಭಿಸಿದ ಭೀಮಸೇನ ಜೋಷಿ 1943 ರಲ್ಲಿ ಸಂಗೀತದ ರಾಜಧಾನಿಯಾದ ಮುಂಬೈಗೆ ಸ್ಥಳಾಂತರ ಮಾಡಿಸಿಕೊಂಡರು. ಅಲ್ಲಿ ಅನೇಕ HMV ರೆಕಾರ್ಡಿಂಗ್‌ಗಳ ಮೂಲಕ ಪ್ರಸಿದ್ಧರಾಗತೊಡಗಿದರು. 1972ರಲ್ಲಿ ಪದ್ಮಶ್ರೀ, 1985 ರಲ್ಲಿ ಪದ್ಮಭೂಷಣ, 1999 ರಲ್ಲಿ ಪದ್ಮವಿಭೂಷಣ ಪ್ರಶಸ್ತಿ ಪಡೆದ ಪಂಡಿತ ಭೀಮಸೇನ ಜೋಷಿಯವರನ್ನು 2008ರಲ್ಲಿ ಅರಸಿ ಬಂತು ಭಾರತದ ಅತಿ ಉನ್ನತ ಗೌರವವಾದ ಭಾರತರತ್ನ ಪ್ರಶಸ್ತಿ. ಅನೇಕ ಮರಾಠಿ ಅಭಂಗಗಳು, ಸಿನಿಮಾ ಹಾಡುಗಳು, ದಾಸವಾಣಿಗಳಿಂದ ಜನರ ಮನದಲ್ಲಿ ಆಳವಾಗಿ ಪ್ರಭಾವ ಬೀರಿದ ಭೀಮಸೇನರು ದೇಶದ ಮೂಲೆ ಮೂಲೆಗಳಲ್ಲಿ ಮನೆ ಮಾತಾಗಿದ್ದು ದೂರದರ್ಶನದ 'ಮಿಲೇ ಸುರ್ ಮೇರಾ ತುಮ್ಹಾರಾ'ದಿಂದ. ಅವರ ಈ ಹಾಡಿನಲ್ಲಿ ಭಾರತದ ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣಗಳ ಛಾಯೆ ಎದ್ದು ತೋರುತ್ತಿದ್ದವು. ಅತ್ಯಂತ ಜನಸಾಮಾನ್ಯನಿಂದ ಹಿಡಿದು ಸಂಗೀತದ ದಿಗ್ಗಜರವರೆಗೆ ಎಲ್ಲರಿಗೂ ಅರ್ಥವಾಗುವಂತೆ, ಹಿಡಿಸುವಂತೆ ಸಂಗೀತವನ್ನು ಪ್ರಸ್ತುತ ಪಡಿಸುವುದು ಭೀಮಸೇನರಿಗೆ ಸಿದ್ಧಿಸಿತ್ತು.

ಭೀಮಸೇನರ ಗಾಯನದಲ್ಲಿ ಅವರ ಶರೀರದ ಮೇಲೆ ಸ್ವರಗಳ ಏರಿಳಿತ ಪ್ರತಿಫಲಿಸುತ್ತಿತ್ತು. ಅವರು ಗಾಳಿಯನ್ನು ಭೇದಿಸುತ್ತಿದ್ದರು, ಭೂಮಿಯನ್ನು ಸೀಳುತ್ತಿದ್ದರು, ಆಗಸದಲ್ಲಿ ಗಾಳಿಪಟದಂತೆ ರಾಗವನ್ನು ಹಾರಿ ಬಿಡುತ್ತಿದ್ದರು, ಸ್ವರ ಮಾಧುರ್ಯವನ್ನು ರಾಗದ ಮೂಸೆಯಿಂದ ಎಳೆದು ತೆಗೆಯುತ್ತಿದ್ದರು. ಅವನ್ನೆಲ್ಲ ಒಟ್ಟುಗೂಡಿಸಿ ಭೂಮಿಯ ಗರ್ಭದಲ್ಲಿ ಇಳಿಸುತ್ತಿದ್ದರು. ಒಮ್ಮೆ ನೆಲಕ್ಕೆ ತಲೆ ತಗುಲುವುದೋ ಎಂಬಷ್ಟು ಬಾಗುತ್ತಿದ್ದರು. ಇನ್ನೊಮ್ಮೆ ಶರೀರದಲ್ಲಿನ ನಾದವೆಲ್ಲ ಹೊರಬೀಳಲೋ ಎಂಬಂತೆ ಬಾಯಿ ತೆರೆಯುತ್ತಿದ್ದರು. ಮೈಯನ್ನು ಆಗೊಮ್ಮೆ ಈಗೊಮ್ಮೆ ತಿರುಗಿಸುತ್ತಾ ರಾಗದ ಮೇಲೆ ಪ್ರಯೋಗ ನಡೆಸುತ್ತಿದ್ದರು. ದೇಶಾದ್ಯಂತ ಅನೇಕ ಪಂಡಿತ-ಉಸ್ತಾದರಿಂದ ಮಾರ್ಗದರ್ಶನ ಪಡೆದ ಈ ಸಂಗೀತ ಗಾರುಡಿಗನಿಗೆ ತಾನು ಕೇವಲ ಕಿರಾಣಾ ಘರಾಣಕ್ಕೆ ಸೀಮಿತ ಎಂದಾಗಬಾರದು ಎಂದು ಎಲ್ಲಾ ಘರಾಣಾಗಳ ಶೈಲಿಯನ್ನು ಅರ್ಥಪೂರ್ಣವಾಗಿ ಸಂಮಿಳಿತಗೊಳಿಸಿ ಕೇಳುಗರೆದುರು ಪ್ರಸ್ತುತಪಡಿಸುವ ಸವಾಲನ್ನು, ಬಿಡಿಸುವ ಪ್ರಯತ್ನಗಳನ್ನು ಈ ಪ್ರಕ್ರಿಯೆಗಳು ಸೂಚಿಸುತ್ತಿದ್ದವು. ಅವರದೇ ಮಾತಿನಲ್ಲಿ ಹೇಳುವುದಾದರೆ "ಅಸಂಭವ್ ಕೋ ಸಂಭವ್ ಕರ್ನೇಕೀ ಆಶಾ ಥೀ. . ." ಶ್ವಾಸವನ್ನು ಹೇಗೆ ಹಿಡಿದಿಟ್ಟು ರಾಗಗಳಲ್ಲಿ ಪಳಗಿಸುವುದೆಂಬುದನ್ನು ಪಂಡಿತ್ ಭೀಮಸೇನ ಜೋಷಿಯವರ ಗಾಯನದಲ್ಲಿ ಕಾಣಬಹುದು. ಒಂದೆಡೆ ಉಸ್ತಾದ್ ಬಡೇ ಗುಲಾಂ ಖಾನರ ಛಾಯೆ ಕಂಡು ಬಂದರೆ, ಇನ್ನೊಂದೆಡೆ ಸಿದ್ಧೇಶ್ವರೀದೇವಿಯವರ ಶೈಲಿ, ಮಗದೊಂದೆಡೆ ಅಬ್ದುಲ್ ಕರೀಂಖಾನರ ಛಾಪು. . .ಭಕ್ತಿ ರಸದಿಂದ ಹಿಡಿದು ಶಾಸ್ತ್ರೀಯ ಸಂಗೀತವನ್ನು ಪಂಡಿತ್ ಭೀಮಸೇನ ಜೋಷಿಯವರ ಧ್ವನಿಯಲ್ಲಿ ಕೇಳುವ ಯೋಗವನ್ನು ನಾವು ಪಡೆದಿದ್ದೇವೆ. ಇಂತಹ ಅದ್ವಿತೀಯ ಕಲಾಕಾರರು ಅನೇಕ ಶತಮಾನಗಳಿಗೊಬ್ಬರು ಜನಿಸುತ್ತಾರೆ. ಹಿಂದೆ ಅಕ್ಬರನ ಕಾಲದಲ್ಲಿ ತಾನಸೇನನಿದ್ದ. ಈಗ ನೂರು ಕೋಟಿ ಭಾರತೀಯರಿಗೆ ಭೀಮಸೇನ... ಅಕ್ಷರಷಃ ಸಂಗೀತದ ಭೀಮಸೇನನಾಗಿದ್ದ ಪಂಡಿತ್ ಭೀಮಸೇನ ಜೋಷಿ ಇಂದು ನಮ್ಮ ನಡುವೆ ಇಲ್ಲ. ಅವರ ಅಜರಾಮರ ರಾಗಗಳು, ಭಜನೆಗಳು, ಅಭಂಗಗಳು, ಶತಶತಮಾನಗಳ ಕಾಲ ಕೇಳುಗರ ಕಿವಿಯಲ್ಲಿ ಮಾರ್ದನಿಸಲಿವೆ.

ಮತ್ತೆ ಬನ್ನಿ ಕರ್ನಾಟಕ ರತ್ನ ಭೀಮಸೇನ ಜೋಷಿ. . .

ಇದು ದೆಹಲಿ ಕರ್ನಾಟಕ ಸಂಘದ ಶ್ರದ್ಧಾಂಜಲಿ... ಭಾವಾಂಜಲಿ...

❑ ಸಂತೋಷ ಕುಮಾರ ಉಪಾಧ್ಯಾಯ

ನೆನಪು

# "ಅಭಿಮತ"ದ ಇನ್ನಿಲ್ಲದ ಶ್ರೀ ಬಿ.ಎಸ್.ಚಂದ್ರಶೇಖರ್–ಒಂದು ನೆನಪು



'ಅಭಿಮತ'ದ ಸಂಪಾದಕ ಮಂಡಳಿಯಲ್ಲಿ ಪ್ರಾರಂಭದಿಂದಲೂ ಇದ್ದ ಶ್ರೀ ಬಿ.ಎಸ್. ಚಂದ್ರಶೇಖರ್ ನಿಧನರಾದ ಸುದ್ದಿಯನ್ನು ಕೇಳಿದಾಗ ಒಮ್ಮೆಗೆ ಏನು ಹೇಳಬೇಕೆಂದು ಗೊತ್ತಾಗಲಿಲ್ಲ. ಮೊದಲ ಸುದ್ದಿ ಬಂದದ್ದು ಶ್ರೀ ಸತ್ಯನಾಥ ಅವರಿಂದ. ಅವರೂ ಸಹ ಅಭಿಮತದ ಮೊದಲ ಬಳಗದಲ್ಲಿದ್ದವರು ಮತ್ತು ಚಂದ್ರಶೇಖರ ಅವರೊಂದಿಗೆ ಆತ್ಮೀಯವಾಗಿ ಒಡನಾಡಿದವರು. ಶ್ರೀ ಚಂದ್ರಶೇಖರ ಅವರ ನಿಧನದೊಂದಿಗೆ ಮತ್ತೊಮ್ಮೆ ಅಭಿಮತದ ನೆನಪಿನ ಗಣಿಯಲ್ಲಿ ಇಳಿದಂತಾಯಿತು. ಅಭಿಮತ ಈಗ ಎರಡು ದಶಕಗಳಿಗೂ ಮೀರಿ ತನ್ನದೇ ಆದ ಪಥದಲ್ಲಿ ಸಾಗಿ ಹೋಗುತ್ತಿದೆ. ಅದು ಅಕ್ಟೋಬರ್ 1990ರಲ್ಲಿ ಜನಿಸಿದಾಗ, ಅದನ್ನು ಓಲೈಸಿ, ಮುದ್ದಿಸಿ, ಕೈಹಿಡಿದು ನಡೆಸಿದವರಲ್ಲಿ ದಿವಂಗತ ಶ್ರೀ ಚಂದ್ರಶೇಖರ್ ಅವರೂ ಒಬ್ಬರು. ಆಕಾಶವಾಣಿಯಲ್ಲಿ ನಿರ್ದೇಶಕರಾಗಿ ಕೆಲಸ ಮಾಡುತ್ತಿದ್ದರು. ಯಾವ ಬಗೆಯ ಆಡಂಬರವೂ ಇಲ್ಲದ ಸರಳ ವ್ಯಕ್ತಿ ಅವರಾಗಿದ್ದರು. ಒಮ್ಮೆಯೂ ಎತ್ತರಿಸಿ ಮಾತನಾಡದ ಸೌಜನ್ಯಮೂರ್ತಿಯವರು. ಅಭಿಮತದ ಮೊದಲ ದಿನಗಳು ತೀರಾ ಗೊಂದಲಮಯವಾಗಿದ್ದರೂ, ಒಂದು ಬಗೆಯ ಉತ್ಸಾಹ ಎಲ್ಲರಲ್ಲೂ ತುಳುಕುತ್ತಿತ್ತು. "ಈ ತಿಂಗಳ ಮುಖಪತ್ರಿಕೆಯನ್ನು ಪ್ರಾರಂಭಿಸಿದ್ದಂತೂ ಆಯಿತು... ಆದರೆ ಇದು ಎಷ್ಟು ದಿನ ನಡೆದೀತೋ?" ಎಂಬ ಪ್ರಶ್ನೆ ಎಲ್ಲರನ್ನೂ ಕಾಡುತ್ತಿತ್ತು. ಆಗ ಅಭಿಮತವೆಂಬುದು ಎಂಟು ಪುಟಗಳ ಪುಟ್ಟ ಪ್ರಪಂಚ. ಒಂದು ಬಗೆಯಲ್ಲಿ ಅದು ದೆಹಲಿ ಕರ್ನಾಟಕ ಸಂಘದ ಪ್ರಪಂಚ. ಆದರೂ, ಈ ಎಂಟು ಪುಟಗಳಲ್ಲಿ ಕನ್ನಡದ ಲೇಖನಗಳನ್ನು...ವರದಿಗಳನ್ನು ತುಂಬುವುದು ಸುಲಭವಾದ ಕೆಲಸವಾಗಿರಲಿಲ್ಲ. ಯಾವ ಲೇಖನಗಳೂ ಇಲ್ಲದಿದ್ದರೆ ಸಂಪಾದಕ ಮಂಡಳಿಯವರೇ ಲೇಖನಗಳನ್ನು ಬರೆಯಬೇಕು. ಶ್ರೀ ಚಂದ್ರಶೇಖರ್ ಅವರು ಹಾಗೂ ಅವರ ಪತ್ನಿ 'ಧೃತಿ' ಅವರದ್ದು ಆರದ ಲೆಕ್ಕಣಿಕೆ. ಹೀಗಾಗಿ ಅಭಿಮತದ ಒಡಲನ್ನು ಭರ್ತಿ ಮಾಡಲು ಇವರಿಬ್ಬರೂ ದೆಹಲಿಯಲ್ಲಿರುವ ತನಕ ಯಾವ ಸಮಸ್ಯೆಯೂ ಇರಲಿಲ್ಲ. ಬರೀ ಬರೆಯುವುದೊಂದೇ ಅಲ್ಲ. ಇನ್ನಾರೋ ತುಂಬಾ ಉತ್ಸಾಹದಿಂದ ಬರೆದ ಲೇಖನವನ್ನು ಓದಿ, ತಿದ್ದಿ...ಸರಿಪಡಿಸುವ ಕೆಲಸವನ್ನು ಅವರು ತುಂಬಾ ಅಚ್ಚುಕಟ್ಟಾಗಿ ಮಾಡುತ್ತಿದ್ದರು.

ಅಭಿಮತದ ದೆಸೆಯಿಂದಾಗಿ ನಾವೆಲ್ಲ ತಿಂಗಳಿಗೆ ನಾಲ್ಕಾರು ಬಾರಿ ಭೇಟಿಯಾಗುತ್ತಿದ್ದೆವು. ನಾನೇ ಎಷ್ಟೋ ಬಾರಿ ಶ್ರೀ ಚಂದ್ರಶೇಖರ್ ಅವರ ಕಚೇರಿಗೆ ಎಡತಾಕಿದ್ದೆ. ಮೊದಲು ಆಕಾಶವಾಣಿ ಭವನದ ಮೂಲೆಯೊಂದರಲ್ಲಿ ಅವರು ಕುಳಿತಿರುತ್ತಿದ್ದರು. ನಂತರ ಬಡ್ತಿ ಪಡೆದು ಮಂಡಿಹೌಸ್‌ನಲ್ಲಿ ಕುಳಿತುಕೊಳ್ಳುತ್ತಿದ್ದರು. ಅವರೊಂದಿಗೆ ಕುಳಿತು ಅಭಿಮತದ ಲೇಖನಗಳ ಕುರಿತಾಗಿ, ರೂಪರೇಷೆಗಳ ಕುರಿತಾಗಿ ಮಾತನಾಡುತ್ತಿದ್ದೆವು. ಎಷ್ಟೋ ಬಾರಿ ನಾವು (...ನಾವು ಅಂದರೆ–ಚಂದ್ರಶೇಖರ್, ಸತ್ಯನಾಥ್, ಡಿ.ಎಸ್.ಸಿ. ರಾವ್, ರಂಗಸ್ವಾಮಯ್ಯ, ಚೆನ್ನು ಮಠದ... ಹೀಗೆ ಪಟ್ಟಿ ಉದ್ದವಾಗುತ್ತ ಹೋಗುತ್ತದೆ) ಸಂಘದಲ್ಲೇ ಕುಳಿತು ಯಾವುದೋ ಇತ್ತೀಚಿನ ಪುಸ್ತಕದ ಕುರಿತೋ, ಲೇಖನದ ಕುರಿತೋ ಮಾತನಾಡುತ್ತಿದ್ದೆವು. ಆಗ ಮೊಬೈಲ್ ಇನ್ನೂ ಬಂದಿರಲಿಲ್ಲ. ಮಾಹಿತಿ ತಂತ್ರಜ್ಞಾನ ಜಾಲ ದಟ್ಟವಾಗಿ ಹರಡಿಕೊಂಡಿರಲಿಲ್ಲ. ಒಮ್ಮೊಮ್ಮೆ ಆಗತಾನೇ ಅಮೆರಿಕೆಯಿಂದ ಬಂದಿದ್ದ ಸತ್ಯನಾಥ್ ಅವರೊಂದಿಗೆ ಸಿಜಿಓ ಕಾಂಪ್ಲೆಕ್ಸ್‌ನಲ್ಲಿ 'ಇಮೈಲ್' ಎಂಬುದನ್ನು ನೋಡುತ್ತಿದ್ದೆ. 'Hot Mail' ಎಂಬ ಹೆಸರನ್ನು ತೊಂಬತ್ತರ ಮೊದಲ ಭಾಗದಲ್ಲಿ ನಾವು ಕೇಳಿದ್ದೆವು. ಚಂದ್ರಶೇಖರ್ ಅವರು ಇದಾವುದಕ್ಕೂ ತೀರಾ ತಲೆಕೆಡಿಸಿಕೊಂಡಿರಲಿಲ್ಲ. ಅವರಾಯಿತು. ಅವರ ಬರವಣಿಗೆಯಾಯಿತು. ಲಘು ಬರಹಗಳನ್ನು ಬರೆಯುವುದರಲ್ಲಿ ಅವರು ಕನ್ನಡ ಸಾರಸ್ವತ ಪ್ರಪಂಚದಲ್ಲಿ ಹೆಸರುವಾಸಿಯಾಗಿದ್ದರು.

ಅವರನ್ನು ದೆಹಲಿಯಿಂದ ಬೆಂಗಳೂರಿಗೆ ಬೀಳ್ಕೊಟ್ಟ ಮೇಲೆ ಅವರೊಂದಿಗೆ ಸಂಪರ್ಕವೇ ಕಡಿಮೆಯಾಗಿ ಹೋಯಿತು. ಅವರ ಲೇಖನಗಳನ್ನು ಪ್ರಜಾವಾಣಿ...ಸುಧಾ... ತರಂಗ ಪತ್ರಿಕೆಗಳಲ್ಲಿ ಗಮನಿಸುತ್ತಿದ್ದೆ. ಆದರೆ, ಅವರೊಂದಿಗೆ ನಿರಂತರ ಸಂಪರ್ಕ ಸಾಧ್ಯವಾಗಲಿಲ್ಲ. ಅವರನ್ನು ಕಳಕೊಂಡದ್ದು, ನನ್ನ ಯಾವುದೋ ನೆನಪಿನ ಸರಪಣಿಯನ್ನೇ ತುಂಡರಿಸಿದಂತೆ ಆಗಿದೆ. ಅಭಿಮತದ ಅವರ ಲೇಖನಗಳು ಈಗಲೂ ನಮ್ಮೊಂದಿಗಿವೆ. ಮಂದವಾಗಿ ಬೀಸುವ ತಂಗಾಳಿಯಂತೆ ಶ್ರೀ ಚಂದ್ರಶೇಖರ್ ಅವರು ಸಂಘದ ಇತಿಹಾಸದ ಪುಟಗಳಲ್ಲಿ ದಾಖಲಾಗಿ ಹೋಗಿದ್ದಾರೆ. ಅವರಿಗೆ ನನ್ನ ಪ್ರೀತಿಯ ನಮನಗಳು.

❑ **ಡಾ. ವೆಂಕಟಾಚಲ ಹೆಗಡೆ**

* * * * * * *

ನನ್ನ ಪರಿಚಿತರಾದ ಶ್ರೀ ಬಿ.ಎಸ್. ಚಂದ್ರಶೇಖರ ಅವರು ಮೊನ್ನೆ ಮೊನ್ನೆ ಬೆಂಗಳೂರಿನಲ್ಲಿ ನಿಧನರಾದರೆಂಬ ಆಘಾತದ ಸುದ್ದಿಯನ್ನು ಕೇಳಿ ತತ್ತರಿಸಿದೆ. ದಿಲ್ಲಿಯಲ್ಲಿ ನಾನು ಕರ್ನಾಟಕ ಸಂಘದ ಅಧ್ಯಕ್ಷನಾಗಿದ್ದಾಗ (1990–92) ಶ್ರೀ ಬಿ.ಎಸ್. ಚಂದ್ರಶೇಖರ ಅವರ ಪರಿಚಯವು ನನಗಾಗಿತ್ತು. ಅವರು ಆಕಾಶವಾಣಿಯಲ್ಲಿ ಹುದ್ದೆಯಲಿದ್ದರು. "ಉಡುಗೊರೆ" ಎಂಬ ಪ್ರಬಂಧ ಸಂಕಲನವನ್ನು ಅವರು ಅದಾಗಲೇ ಪ್ರಕಟಿಸಿದ್ದರು. ಅವರ ಶ್ರೀಮತಿಯವರು "ಧೃತಿ" ಎಂಬ ಕಾವ್ಯನಾಮದಿಂದ ಹಲವಾರು ಕಾದಂಬರಿಗಳನ್ನು ಬರೆದಿದ್ದರು. 1990ರ ಗಾಂಧಿಜಯಂತಿಯ ದಿನ ದಿಲ್ಲಿ ಕರ್ನಾಟಕ ಸಂಘದ ಮುಖಪತ್ರಿಕೆಯಾದ 'ಅಭಿಮತ'ದ ಮೊದಲ ಸಂಪಾದಕ ಮಂಡಳಿಯ ಸದಸ್ಯರನ್ನು ಆಯ್ಕೆ ಮಾಡುವ ಗುರುತರ ಹೊಣೆ ನನ್ನದಾಗಿತ್ತು. ದಿಲ್ಲಿ ಕರ್ನಾಟಕ ಸಂಘದ ಇಂದಿನ ಅಧ್ಯಕ್ಷರಾದ ಡಾ.ವೆಂಕಟಾಚಲ ಹೆಗಡೆ ಅವರು ಒಳ್ಳೆಯ ಬರಹಗಾರರೆಂದು ನಾನು ಗುರುತಿಸಿದ್ದೆ. ಅವರ ಜತೆಯಲ್ಲಿ ಶ್ರೀ ಚಂದ್ರಶೇಖರ ಅವರನ್ನೂ, ಇನ್ನೊಬ್ಬ ಬರಹಗಾರರಾಗಿದ್ದ ಶ್ರೀ ಜಿ.ಆರ್. ರಂಗಸ್ವಾಮಯ್ಯ ಅವರನ್ನೂ ಸಂಪಾದಕ ಮಂಡಳಿಯ ಸದಸ್ಯರಾಗಬೇಕೆಂದು ನಾನು ಈ ಮೂವರನ್ನು ಕೇಳಿಕೊಂಡಿದ್ದೆ. ನನ್ನ ಕೋರಿಕೆಯನ್ನು ಈ ಮೂವರೂ ಮನ್ನಿಸಿ 'ಅಭಿಮತ'ದ ಸಂಪಾದಕತ್ವದ ಹೊಣೆಯನ್ನು ವಹಿಸಿಕೊಂಡಿದ್ದರು. ನನ್ನ ಅಧ್ಯಕ್ಷತೆಯ ಕಾಲಾವಧಿಯಲ್ಲಿ ಈ ಮೂವರು 'ಅಭಿಮತ'ವನ್ನು ಕೈಹಿಡಿದು ಮುನ್ನಡೆಸಿದರು. 'ಅಭಿಮತ'ವನ್ನು ಒಂದು ಒಳ್ಳೆಯ ಮಾಸಪತ್ರಿಕೆಯನ್ನಾಗಿಸುವಲ್ಲಿ ಮೂವರೂ ಸಾಕಷ್ಟು ಪರಿಶ್ರಮವನ್ನು ವಹಿಸಿದ್ದರು.

ಶ್ರೀ ಚಂದ್ರಶೇಖರ ಮಿತಭಾಷಿಗಳಾಗಿದ್ದರು. ತುಂಬ ಹಿತಮಿತವಾಗಿ ನಗುತ್ತಿದ್ದರು. ಸಾಹಿತ್ಯದಲ್ಲಿ ಆಸಕ್ತಿಯು ಇತ್ತು. ಎತ್ತರವಾಗಿದ್ದರೂ ಅವರು ದೃಢಕಾಯದವರಾಗಿರಲಿಲ್ಲ. ತಮಗೆ ವಹಿಸಿದ ಜವಾಬ್ದಾರಿಯನ್ನು ಸದ್ದು ಗದ್ದಲವಿಲ್ಲದೆಯೇ ಶ್ರದ್ಧೆಯಿಂದ ಮಾಡುತ್ತಿದ್ದರು. ಅವರ ದುಡಿತ, ನಿಷ್ಠೆ ಹಾಗೂ ಪ್ರಾಮಾಣಿಕತೆಯಿಂದ ಕೂಡಿದ್ದಾಗಿತ್ತು. ಪ್ರಾರಂಭದ ದಿನಗಳಲ್ಲಿ ಪ್ರತಿಯೊಂದು ಸಂಚಿಕೆಯನ್ನು ಸಂಪಾದಕ ಮಂಡಳಿಯವರು ಸಭೆ ಸೇರಿ ವಿನ್ಯಾಸಗೊಳಿಸುತ್ತಿದ್ದರು. ನನಗಿನ್ನೂ ನೆನಪಿದೆ. ನಾನು ಬರೆದ 'ನನ್ನ ಕನಸಿನ ಕರ್ನಾಟಕ ಸಂಘ' ಎಂಬ ಲೇಖನವನ್ನು 'ಅಭಿಮತ' ಸಂಚಿಕೆಯಲ್ಲಿ ಹಾಕಬೇಕೋ ಬೇಡವೋ ಎಂಬುದನ್ನು ಸಂಪಾದಕ ಮಂಡಳಿಯಲ್ಲಿ ಚರ್ಚಿಸಿ ಹಾಕಿದ್ದರು, ನನ್ನ ಲೇಖನದ ಕೆಳಗೆ ಚಂದ್ರಶೇಖರ ಅವರು ಹೀಗೆ ಶರಾ ಬರೆದಿದ್ದರು. 'ಇದು ಲೇಖಕರ ವೈಯಕ್ತಿಕ ಅಭಿಪ್ರಾಯ'.

ಶ್ರೀ ಚಂದ್ರಶೇಖರರು ಮಾತಿಗಿಂತ ಕೃತಿಯಲ್ಲಿ ವಿಶ್ವಾಸವನ್ನಿಟ್ಟವರಾಗಿದ್ದರು. ತಮಗೆ ವಹಿಸಿದ್ದ ಕೆಲಸವನ್ನು ಶ್ರದ್ಧೆ–ಭಕ್ತಿಯಿಂದ ನಿರ್ವಹಿಸುತ್ತಿದ್ದರು. ಅಂದಿನ ಆ ದಿನಗಳಲ್ಲಿ ನನಗೆ ಅವರೊಬ್ಬ ನಂಬಲರ್ಹವಾದ ಸಾಮರ್ಥ್ಯದ ಸ್ತಂಭವಾಗಿದ್ದರು. ಈ ಮೂಲಕ ನಾನು ಅವರಿಗೆ ನನ್ನ ಶ್ರದ್ಧಾಸುಮವನ್ನು ಅರ್ಪಿಸುತ್ತಿದ್ದೇನೆ. ನನಗೆ ನೆನಪಿದ್ದಂತೆ ಅವರು ಡಾ.ಎಸ್.ಎಲ್. ಭೈರಪ್ಪನವರ ಕ್ಲಾಸ್‌ಮೇಟ್ ಆಗಿದ್ದರು. ಭೈರಪ್ಪನವರು ದಿಲ್ಲಿಗೆ ಬಂದಾಗಲೆಲ್ಲ ಅವರಲ್ಲಿಯೇ ಉಳಿಯುತ್ತಿದ್ದರು. ಶಾಂತ ಸ್ವಭಾವದ ಸನ್ಮಿತ್ರರೊಬ್ಬರನ್ನು ಕಳೆದುಕೊಂಡೆನಲ್ಲ ಎಂಬ ದುಗುಡದಿಂದಲೇ ಈ ದೂರದಲ್ಲಿ ಕುಳಿತು ಅವರನ್ನು ನೆನಪಿಸಿಕೊಳ್ಳುತ್ತಿದ್ದೇನೆ. ಅವರ ಆತ್ಮಕ್ಕೆ ಶಾಂತಿಯನ್ನು ಆ ದೇವರು ದಯಪಾಲಿಸಲಿ ಎಂದು ಪ್ರಾರ್ಥಿಸುತ್ತಿದ್ದೇನೆ.

❑ **ಎನ್.ಪಿ. ಭಟ್ಟ, ಧಾರವಾಡ**

# ದೆಹಲಿ ಕನ್ನಡ ಶಾಲೆಯ ವಾರ್ಷಿಕೋತ್ಸವ



ರಾಷ್ಟ್ರದ ರಾಜಧಾನಿಯಾದ ದೆಹಲಿಯಲ್ಲಿ ಕನ್ನಡದ ಕಂಪನ್ನು ಉಳಿಸಿ ಬೆಳೆಸುವುದರಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವ ದೆಹಲಿ ಕನ್ನಡ ಶಾಲೆ, ದಿ.ಕೃಷ್ಣಮೂರ್ತಿರಾವ್ ಅವರ ಕನಸಿನ ಸಾಕಾರ ರೂಪವಾಗಿದೆ. ಕನ್ನಡಿಗರೆಲ್ಲರ ಅಭಿಮಾನ, ಪ್ರೀತಿಯೊಂದಿಗೆ ವಿವಿಧ ಹಂತಗಳನ್ನು ದಾಟಿ, ಸುವರ್ಣ ಮಹೋತ್ಸವದ ವರ್ಷಕ್ಕೆ ಕಾಲಿರಿಸಿದೆ. ಈ ಸಂದರ್ಭದಲ್ಲಿ ಶಾಲೆಯಲ್ಲಿ ಸಂಭ್ರಮದ ವಾರ್ಷಿಕೋತ್ಸವವನ್ನು ಜನವರಿ 29, 2011ರಂದು ಆಚರಿಸಲಾಯಿತು.

ಮುಖ್ಯ ಅತಿಥಿಗಳಾದ ಶ್ರೀ ಕೆ.ಜಿ.ಬೋಪಯ್ಯ, ವಿಧಾನ ಸಭಾಪತಿ, ಕರ್ನಾಟಕ ಸರಕಾರ, ಹಾಗೂ ಇತರ ಗಣ್ಯ ಕನ್ನಡಿಗರಿಗೆ ಎನ್.ಸಿ.ಸಿ. ವಿದ್ಯಾರ್ಥಿಗಳ ಗೌರವ ರಕ್ಷೆಯೊಂದಿಗೆ ಭವ್ಯ ಸ್ವಾಗತ ನೀಡಲಾಯಿತು.

ಸರಸ್ವತಿ ವಂದನೆಯೊಂದಿಗೆ ಕಾರ್ಯಕ್ರಮ ಆರಂಭವಾಯಿತು. ನಂತರ ಆಡಳಿತ ಮಂಡಳಿಯ ಮ್ಯಾನೇಜರ್ ಡಾ.ಶಶಿಕುಮಾರ್ ಅವರು ಸ್ವಾಗತ ಭಾಷಣ ಮಾಡಿದರು. ಆಡಳಿತ ಮಂಡಳಿಯ ಅಧ್ಯಕ್ಷ ಶ್ರೀ ಜಿ.ಎಂ.ಲಿಂಗರಾಜು ಅವರು ಶಾಲೆಯ ಮುಂದಿನ ಯೋಜನೆಗಳು ಹಾಗೂ ಸಾಧನೆಗಳ ಬಗ್ಗೆ ವಿವರ ನೀಡಿದರು. ಶಾಲೆಯ ಸುವರ್ಣ ಮಹೋತ್ಸವ ಸಂದರ್ಭದಲ್ಲಿ ಕರ್ನಾಟಕ ಸರ್ಕಾರದ ವತಿಯಿಂದ ನೆರವು ನೀಡಬೇಕೆಂಬ ಮನವಿಯನ್ನು ವಿಧಾನ ಸಭಾಪತಿ ಶ್ರೀ ಕೆ.ಜಿ. ಬೋಪಯ್ಯ ಅವರಿಗೆ ನೀಡಿದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆಯವರು "ಹಿರಿಯರು ಕಟ್ಟಿ ಬೆಳೆಸಿದ ಸಂಸ್ಥೆ ಇಂದು ಬೆಳೆದು ಹೆಮ್ಮರವಾಗಿದೆ. ಕನ್ನಡ ಶಾಲೆಯಲ್ಲಿ ಓದಿದ ಹಳೆಯ ವಿದ್ಯಾರ್ಥಿಗಳು ಇಂದು ಶಾಲೆಗೆ ಕೀರ್ತಿ ತಂದಿರುವ ಸಂಗತಿ ಹೆಮ್ಮೆ ಪಡುವಂತಹದ್ದು. ರಾಷ್ಟ್ರದ ರಾಜಧಾನಿಯಲ್ಲಿರುವ ಏಕೈಕ ಕನ್ನಡ ಶಾಲೆ ಮತ್ತಷ್ಟು ಅಭಿವೃದ್ಧಿ ಹೊಂದಲಿ" ಎಂದು ಶುಭ ಹಾರೈಸಿದರು.

ಮುಖ್ಯ ಅತಿಥಿಗಳಾದ ಶ್ರೀ ಕೆ.ಜಿ. ಬೋಪಯ್ಯ ಅವರು ನಿಸ್ವಾರ್ಥ ಸೇವೆ ನೀಡಿದ ಅಧ್ಯಾಪಕರುಗಳನ್ನು ಅಭಿನಂದಿಸುತ್ತಾ "ಇತ್ತೀಚಿನ ದಿನಗಳಲ್ಲಿ ಶಾಲೆಗಳು ವ್ಯಾಪಾರೀ ಕೇಂದ್ರಗಳಾಗಿರುವುದು ನಿಜಕ್ಕೂ ದುಃಖದ ಸಂಗತಿ. ಉತ್ತಮ ವಿದ್ಯೆಯ ತಳಹದಿಯೇ ಪ್ರತಿಯೊಬ್ಬರ ಉಜ್ವಲ ಭವಿಷ್ಯವನ್ನು ರೂಪಿಸಬಲ್ಲದು. ಬಾಲ್ಯದಲ್ಲಿ ಕಲಿತ ವಿದ್ಯೆಯೇ ಮುಂದಿನ ಬಾಳಿಗೆ ದಾರಿ ದೀಪ" ಎಂದು ನುಡಿದರು. ಸರ್ಕಾರದ ನೆರವಿಗಾಗಿ ತಾವು ಖಂಡಿತಾ ಪ್ರಯತ್ನಿಸುವುದಾಗಿ ಭರವಸೆ ಇತ್ತರು.

ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷರುಗಳಾದ ಶ್ರೀ ಕೆ. ಈಶ್ವರ ಭಟ್, ಡಾ. ಅಹಲ್ಯಾ ಚಿಂತಾಮಣಿ, ಕಾರ್ಯದರ್ಶಿ ಆಂಜನಿ ಗೌಡ, ಖಜಾಂಚಿ ಬಸವರಾಜ್ ಎಸ್. ಮೇಟಿ, ಮ್ಯಾನೇಜರ್ ಡಾ. ಶಶಿಕುಮಾರ್ ಹಾಗೂ ಶಾಲೆಯ ನಿರ್ವಾಹಕ ಪ್ರಾಂಶುಪಾಲರಾದ ಕೆ.ಟಿ. ಗಣೇಶ್ ಅವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಶಾಲೆಯ ನಿರ್ವಾಹಕ ಪ್ರಾಂಶುಪಾಲರಾದ ಶ್ರೀ ಕೆ.ಟಿ.ಗಣೇಶ್ ಅವರು ವಾರ್ಷಿಕ ವರದಿಯನ್ನು ಮಂಡಿಸುತ್ತಾ, ಕೇವಲ ಹತ್ತು ಮಕ್ಕಳೊಂದಿಗೆ 1961ನೇ ಇಸವಿಯ ವಿಜಯ ದಶಮಿಯ ಶುಭದಿನದಂದು ಆರಂಭವಾದ ಶಾಲೆ, ಇದೀಗ ಬೆಳೆದು ಹೆಮ್ಮರವಾಗಿ ನೂರಾರು ಮಕ್ಕಳಿಗೆ ವಿದ್ಯಾಭ್ಯಾಸ ನೀಡುತ್ತಿದೆಯೆಂದು ಹೇಳಿದರು. ಆಟ, ಪಾಠ ಹಾಗೂ ಪಠ್ಯೇತರ



ವಿಷಯಗಳಲ್ಲಿ ಗಣನೀಯ ಸಾಧನೆಯನ್ನು ಶಾಲೆ ನೀಡುತ್ತಿದೆ ಎಂದು ವಿವರಣೆ ನೀಡಿದರು.

ಮಕ್ಕಳಿಗೆ ಬಹುಮಾನ ವಿತರಣೆ, ಹಾಗೂ ನಿವೃತ್ತ ಅಧ್ಯಾಪಕರುಗಳಿಗೆ ಸನ್ಮಾನ ಮಾಡಿ ಅಭಿನಂದಿಸಲಾಯಿತು. ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಒಂದನೆಯ ತರಗತಿಯ ಪುಟಾಣಿಗಳಿಂದ ಶುರುವಾಗಿ ಹನ್ನೆರಡನೆಯ ತರಗತಿಯ ವಿದ್ಯಾರ್ಥಿಗಳವರೆಗಿನ ಹಲವಾರು ಮಕ್ಕಳು ಭಾಗವಹಿಸಿ ತಮ್ಮ ಪ್ರತಿಭಾ ಪ್ರದರ್ಶನ ನೀಡಿದರು. ಕರ್ನಾಟಕದ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಕಾರ್ಯಕ್ರಮಗಳು, ದೇಶಭಕ್ತಿ, ಸರ್ವಧರ್ಮ ಸಮನ್ವಯವನ್ನು ಪ್ರತಿಬಿಂಬಿಸುವ ಕಾರ್ಯಕ್ರಮಗಳು, ಕನ್ನಡ, ಹಿಂದಿ, ಪಂಜಾಬಿ ಹಾಗೂ ಇಂಗ್ಲೀಷ್ ಭಾಷೆಯಲ್ಲಿ ಪ್ರದರ್ಶಿತವಾಗಿ ನೆರೆದಿದ್ದ ಅಪಾರ ಸಭಿಕರ ಪ್ರಶಂಸೆಗೆ ಪಾತ್ರವಾದವು. ಶಾಲೆಯ ಪೇರೆಂಟ್ಸ್ ಟೀಚರ್ಸ್ ಅಸೋಸಿಯೇಷನ್‌ನ ಸದಸ್ಯರು, ಸಂಸ್ಥೆಯ ಕಾರ್ಯಕಾರಿ ಸಮಿತಿಯ ಸದಸ್ಯರು ಹಾಗೂ ಹಳೆಯ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

❑ ಪ್ರೇಮಲತಾ

ಅಭಿನಂದನೆ

# ರಹಮತ್ ತರೀಕೆರೆಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರ



ನಿಡುಗಾಲದ ಗೆಳೆಯ ರಹಮತ್‌ಗೆ ಈ ಸಲದ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರ ಬಂದಿದೆ. ಅದಕ್ಕೆ ನಾನು ತುಂಬ ಸಂತೋಷ ಪಡಲು ಕಾರಣ ಆತ ನನ್ನ ಗೆಳೆಯ ಎಂಬುದಷ್ಟೇ ಅಲ್ಲ, ಬದಲು ಆತ ತನ್ನ ಬರೆಹ ಮತ್ತು ಬದುಕಿನಲ್ಲಿ ಪ್ರತಿಪಾದಿಸುತ್ತಿದ್ದ ಕೆಲವು ಉದಾತ್ತ ಮತ್ತು ಪ್ರಗತಿಪರ ಮೌಲ್ಯಗಳಿಗೆ ಒಂದು ಬಗೆಯ ಅಂಗೀಕಾರ ದೊರೆಯಿತಲ್ಲ ಎಂಬ ಸಮಾಧಾನವೂ ನನಗಿದೆ. ರಹಮತ್ ತಾನು ನಂಬಿದ ಮೌಲ್ಯಗಳ ಉಳಿಕೆ ಮತ್ತು ಪ್ರಸಾರಕ್ಕೆ ನಿರಂತರ ಹೋರಾಟವನ್ನೂ ನಡೆಸಿಕೊಂಡು ಬಂದ ಕ್ರಿಯಾಶೀಲ ವ್ಯಕ್ತಿಯೂ ಹೌದು. ಹೀಗಾಗಿ ಸುದ್ದಿ ತಿಳಿಯುತ್ತಿದ್ದಂತೆ ದೂರವಾಣಿಯಲ್ಲಿ ಆತನನ್ನು ಸಂಪರ್ಕಿಸಲು ದಿನವಿಡೀ ಪ್ರಯತ್ನಿಸಿದೆ. ಆದರೆ ವಿಫಲನಾದೆ. ಪ್ರಶಸ್ತಿಯಿಂದ ವಿಚಲಿತನಾಗದೆ ಏನೋ ಬರೆಯುತ್ತಿರಬಹುದು ಅಂದುಕೊಂಡೆ.

ರಹಮತ್ ನನ್ನು ಕಳೆದ ಸುಮಾರು 30 ವರ್ಷಗಳಿಂದ ನಾನು ಬಲ್ಲೆ. ಶಿವಮೊಗ್ಗದಲ್ಲಿ ಇದ್ದ ಅವನ ಮನೆಗೆ ನಾನು 80ರ ದಶಕದ ಆರಂಭದಲ್ಲಿಯೇ ಹೋಗಿದ್ದೆ. ಕನ್ನಡ ವಿವಿಯಲ್ಲಿ ನಾವು ಸಹೋದ್ಯೋಗಿಗಳು. ಆತನ ಜೊತೆ ಕನ್ನಡ ವಿವಿಯಲ್ಲಿ ಕಳೆದ ಒಳ್ಳೆಯ ದಿನಗಳು ನನಗೆ ಇನ್ನೂ ಚೆನ್ನಾಗಿ ನೆನಪಿದೆ. ಹಂಪಿಯ ಬಂಡೆಗಳ ನಡುವೆ ತಲೆ ಎತ್ತಿದ್ದ ವಿವಿಯಲ್ಲಿ ನಾವೇ ತರುತ್ತಿದ್ದ ಮಧ್ಯಾಹ್ನದ ಬುತ್ತಿ ಊಟವನ್ನು ನಾವು ಹಂಚಿಕೊಂಡು ತಿನ್ನುತ್ತಿದ್ದೆವು. ಯಾರಾದರೂ ಉಪ್ಪಿಟ್ಟು ತಂದರೆ 'ಗಂಡ ಹೆಂಡತಿ ಜಗಳಾಡಿದ್ದಿರೇನೋ' ಎಂದಾತ ಹಾಸ್ಯ ಮಾಡುತ್ತಿದ್ದ. ಅನೇಕ ಬಗೆಯ ಜನಪರ ಹೋರಾಟಗಳಲ್ಲಿ ನಾವು ಜೊತೆಯಾಗಿದ್ದೆವು. ಒಮ್ಮೆಯಂತೂ ಆತ ಪ್ರತಿಭಟನೆಯ ಸೂಚನೆಯಾಗಿ ಅಧಿಕಾರಿಗಳೊಬ್ಬರ ಕಾರಿಗೆ ಅಡ್ಡ ಮಲಗಿ ಬಿಟ್ಟಿದ್ದ. ಆಗ ಆತನನ್ನು ಎಬ್ಬಿಸಲು ನಮಗೆ ಸಾಕೋ ಸಾಕಾಗಿತ್ತು. ಉತ್ತರ ಕರ್ನಾಟಕದಾದ್ಯಂತ ನಾನು ಮತ್ತು ರಹಮತ್ ಮಾಡಿದ ಭಾಷಣಗಳಿಗೆ ಲೆಕ್ಕವಿಲ್ಲ. ಆತನ ಮಡದಿ ಭಾನು ನಿಜವಾದ ಅರ್ಥದಲ್ಲಿ ಆತನ ಸಂಗಾತಿ. ಆತನಿಗೆ ಇಬ್ಬರು ಹೆಣ್ಣು ಮಕ್ಕಳು. ನಾವೆಲ್ಲ ಕೂಡು ಕುಟುಂಬವಾಗಿ ಬದುಕುತ್ತಿದ್ದೆವು.

ಕಾರಣಾಂತರಗಳಿಂದ ಮುಂದೆ ನಾನು ದೆಹಲಿ ಸೇರಿದೆ. ಈ ಗೆಳೆಯ ಹಂಪಿಯಲ್ಲಿಯೇ ಉಳಿದು, ಕನ್ನಡದ ಮಣ್ಣಲ್ಲಿ ಆಳವಾಗಿ ತಳ ಊರಿದ. ಕನ್ನಡ ಸಾಹಿತ್ಯವನ್ನು ಆಳವಾಗಿ ಅಭ್ಯಸಿಸಿದ. ಜಾನಪದಕ್ಕೂ ಕಿವಿ ಕೊಟ್ಟ. ಅವೆರಡರ ಅನುಭವದ ಮೇಲಿಂದ ಕನ್ನಡ ಸಂಸ್ಕೃತಿಗೆ ಹೊಸ ವ್ಯಾಖ್ಯೆ ಬರೆಯತೊಡಗಿದ. ಹಾಗೆ ಬರೆಯುತ್ತ ಬರೆಯುತ್ತ ಇದೀಗ ಎತ್ತರಕ್ಕೆ ಬೆಳೆದು ನಿಂತಿದ್ದಾನೆ. ಆತನ ಬೆಳವಣಿಗೆಯ ಎಲ್ಲ ಹಂತಗಳನ್ನು ಹತ್ತಿರದಿಂದ ನೋಡಿದ ನನಗೆ ಈಗ ಈ ಪ್ರಶಸ್ತಿಯ ಸುದ್ದಿ ಕೇಳಿ ಅಚ್ಚರಿಯಾಗಲಿಲ್ಲ, ನಾನದನ್ನು ನಿರೀಕ್ಷಿಸಿದ್ದೆ, ನಿರೀಕ್ಷೆ ಹುಸಿಯಾಗದ್ದಕ್ಕೆ ಸಹಜವಾಗಿ ಸಂತೋಷವಾಗಿದೆ. ಹಾಗೆ ನೋಡಿದರೆ, ರಹಮತ್, ಸಾರಾ ಅಬೂಬಕರ್, ಬೊಳುವಾರು ಮಹಮ್ಮದ್, ಐಯ್ ಕೆ ಬೊಳುವಾರು, ಫಕೀರ್ ಮಹಮದ್ ಕಟ್ಪಾಡಿ, ಸಬಿಹಾ ಮೊದಲಾದ ಅನೇಕರು ಕಾರಣಾಂತರಗಳಿಂದ ನನಗೆ ಬಹಳ ಆಪ್ತರಾದವರು, ತಮ್ಮ ಬದುಕಿನ ರೀತಿಯಿಂದಲೇ ನಮಗೆಲ್ಲ ಆದರ್ಶವಾಗಿಬಿಡುವ ಇವರೆಲ್ಲ ನಮ್ಮ ಕಾಲದ ಅತಿ ದೊಡ್ಡ ಶಕ್ತಿಗಳೆಂದು ನನ್ನ ನಂಬಿಕೆ.

ರಹಮತ್‌ನ ಹುಟ್ಟೂರು ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕಿನ ಸಮತಳ. 1959 ರಲ್ಲಿ ಜನಿಸಿದ ರಹಮತ್ ತರೀಕೆರೆ, ಮುಂದೆ ಜೂನಿಯರ್ ಕಾಲೇಜೊಂದರಲ್ಲಿ ಅಧ್ಯಾಪಕನಾಗಿ ಸೇರಿದ. ಅಲ್ಲಿಂದ ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಕನ್ನಡ ಸಾಹಿತ್ಯ ವಿಭಾಗ ಕ್ಕೆ ಸೇರಿ, ಅಲ್ಲಿ ಪ್ರೊಫೆಸರ್ ಹಾಗೂ ಭಾಷಾ ನಿಕಾಯದ 'ಡೀನ್' ಆಗಿ ಇದೀಗ ಅಲ್ಲಿಯೇ ಕಾರ್ಯ ನಿರ್ವಹಣೆ ಮಾಡುತ್ತಿದ್ದಾನೆ. ಕನ್ನಡದ ಹೊಸ ತಲೆಮಾರಿನ ತೀಕ್ಷ್ಣ ಒಳನೋಟಗಳ ಲೇಖಕರೆಂದೇ ಸಾಹಿತ್ಯಲೋಕದಲ್ಲಿ ಗುರುತಿಸಲ್ಪಟ್ಟಿರುವ ರಹಮತ್ ತರೀಕೆರೆ ಕನ್ನಡದ ಸುಪ್ರಸಿದ್ಧ ಸಂಸ್ಕೃತಿ ಚಿಂತಕ ಹಾಗೂ ವಿಮರ್ಶಕ. 'ಸಂಸ್ಕೃತಿಯ ಬಗ್ಗೆ ವಿಮರ್ಶೆ' ಹಾಗೂ 'ದಣಿವರಿಯದ ತಿರುಗಾಟ,' ಆತನ ಪ್ರೀತಿಯ ಹವ್ಯಾಸಗಳು. ಆತನ 'ಕತ್ತಿಯಂಚಿನ ದಾರಿ' ವಿಮರ್ಶಾ ಸಂಕಲನಕ್ಕೆ ಇದೀಗ ಕೇಂದ್ರ ಸಾಹಿತ್ಯ ಅಕಾಡೆಮಿಗೆ ಪುರಸ್ಕಾರ ದೊರೆತಿದೆ . 2006 ರಲ್ಲಿ ಬೆಂಗಳೂರಿನ, ಅಭಿನವ ಪ್ರಕಾಶನದ ವತಿಯಿಂದ ಹೊರಬಂದಿರುವ ಪ್ರಸ್ತುತ ಕೃತಿಯಲ್ಲಿ, ಕುವೆಂಪು, ರಾಮಚಂದ್ರಶರ್ಮ, ನಿಸಾರ್ ಅಹ್ಮದ್, ಕೆ.ವಿ.ಸುಬ್ಬಣ್ಣ, ಲಂಕೇಶ್, ಪುಣೇಕರ್, ಚೆನ್ನಯ್ಯ, ಪೂರ್ಣಚಂದ್ರ ತೇಜಸ್ವಿ, ಡಿ.ಆರ್ ನಾಗರಾಜ, ಶಿವರಾಮ ಕಾರಂತ, ಮುಂತಾದ ಆಧುನಿಕ ಲೇಖಕರ ಕೃತಿಗಳಮೇಲೆ ವಿಶ್ಲೇಷಣಾ ಲೇಖನಗಳಿವೆ. ಹಾಗೇ ಆಧುನಿಕ-ಪೂರ್ವ ಲೇಖಕರ ಮೇಲೆ ಬೆಳಕು ಚೆಲ್ಲುವ ಪ್ರಯತ್ನ ಕೂಡಾ ಇಲ್ಲಿದೆ. 'ಕನ್ನಡ ಮುಸ್ಲಿಮ್ ಜಾನಪದ' ಮತ್ತು 'ಮುಸ್ಲಿಮ್ ತತ್ವಪದಕಾರರ' ಬಗೆಗೆ ಎರಡು ವಿಶಿಷ್ಟ ಲೇಖನಗಳೂ ಇಲ್ಲಿವೆ.

ತರೀಕೆರೆಯ ಮಹತ್ವದ ಕೃತಿಗಳು:

ತರೀಕೆರೆ ಅನೇಕ ಕೃತಿಗಳನ್ನು ಪ್ರಕಟಿಸಿದ್ದಾರೆ. ಅವುಗಳಲ್ಲಿ ಮುಖ್ಯವಾದ ಕೆಲವುಗಳೆಂದರೆ :-

1. ಸಾಹಿತ್ಯ ವಿಮರ್ಶೆ : ಪ್ರತಿಸಂಸ್ಕೃತಿ, ಕತ್ತಿಯಂಚಿನ ದಾರಿ, ಚಿಂತನೆಯ ಪಾಡು
2. ಸಂಸ್ಕೃತಿ ಚಿಂತನೆ : ಮರದೊಳಗಣ ಕಿಚ್ಚು, ಸಾಂಸ್ಕೃತಿಕ ಅಧ್ಯಯನ
3. ಸಾಹಿತ್ಯ ಮೀಮಾಂಸೆ : ಮಾತು ತಲೆಯೆತ್ತುವ ಬಗೆ, ಇಲ್ಲಿ ಯಾರೂ ಮುಖ್ಯರಲ್ಲ
4. ಸಂದರ್ಶನಗಳು: ಲೋಕವಿರೋಧಿಗಳ ಜತೆಯಲ್ಲಿ
5. ಸಂಶೋಧನೆ: ಕರ್ನಾಟಕದ ಸೂಫಿಗಳು, ಕರ್ನಾಟಕದ ನಾಥಪಂಥ
6. ಅನುವಾದ: ವಸಾಹತು ಪ್ರಜ್ಞೆ ಮತ್ತು ವಿಮೋಚನೆ
7. ಪ್ರವಾಸ ಕಥನ: ಅಂಡಮಾನ್ ಕನಸು
8. ಚಿಂತನೆ : ಧರ್ಮಪರೀಕ್ಷೆ
9. ಜಾನಪದ: ಐವರು ಹೇಳಿದ ಜನಪದ ಕತೆಗಳು
10. ಸಂಪಾದನೆ : ಹೊಸತಲೆಮಾರಿನ ತಲ್ಲಣ, ಧರ್ಮ ವಿಶ್ವಕೋಶ, ಕವಿರಾಜಮಾರ್ಗ: ಸಾಂಸ್ಕೃತಿಕ ಮುಖಾಮುಖಿ, ಮಲೆಗಳಲ್ಲಿ ಮದುಮಗಳು: ಸಾಂಸ್ಕೃತಿಕ ಮುಖಾಮುಖಿ, ಅಕ್ಕನ ವಚನಗಳು: ಸಾಂಸ್ಕೃತಿಕ ಮುಖಾಮುಖಿ, ಇಂಗ್ಲಿಷ್ ಗೀತಗಳು: ಸಾಂಸ್ಕೃತಿಕ ಮುಖಾಮುಖಿ

ಗೌರವ ಪ್ರಶಸ್ತಿಗಳು:


'ಅಂಡಮಾನ್ ಕನಸು' ಕೃತಿಗೆ ಪ್ರವಾಸ ಕಥನ ಕೃತಿಗಳು ವಿಭಾಗದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ. ಸಾಹಿತ್ಯ ವಿಮರ್ಶೆಯ ಕೆಲಸಕ್ಕಾಗಿ 2008 ರಲ್ಲಿ ಜಿ.ಎಸ್. ಎಸ್. ಪ್ರಶಸ್ತಿ ದೊರೆತಿದೆ. ಶಿವಮೊಗ್ಗದ ಕರ್ನಾಟಕ ಸಂಘ ದಿಂದ 'ಧರ್ಮ ಪರೀಕ್ಷೆ' ಹೆಸರಿನ ರಾಜಕೀಯ ಚಿಂತನೆಗಳ ಕೃತಿಗೆ 'ಪಿ ಲಂಕೇಶ್ ಪ್ರಶಸ್ತಿ' ಹಾಗೂ ಅದೇ ಕೃತಿಗೆ 'ಕನ್ನಡ ಸಾಹಿತ್ಯ ಪರಿಷತ್ತಿ'ನ 'ಹಾ. ಮಾ. ನಾಯಕ ಪ್ರಶಸ್ತಿ' ದೊರೆತಿದೆ.

ಇದೀಗ 'ಕತ್ತಿಯಂಚಿನ ದಾರಿ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ. ದೇಶದ 22 ಭಾಷೆಗಳನ್ನು ಪ್ರತಿನಿಧಿಸಿದ ಜ್ಯೂರಿ ಸಮಿತಿ, ಈ ಪ್ರಶಸ್ತಿಯನ್ನು ಆಯ್ಕೆ ಮಾಡಿದೆ. ಒಂದು ಲಕ್ಷ ರೂಪಾಯಿ ನಗದು, ಹಾಗೂ ಪ್ರಶಸ್ತಿ ಫಲಕಗಳನ್ನು ಒಳಗೊಂಡ ಈ ಪ್ರಶಸ್ತಿಯನ್ನು 2011 ರ ಫೆಬ್ರವರಿ, 16 ರಂದು, ನವದೆಹಲಿಯಲ್ಲಿ ಪ್ರದಾನಮಾಡಲಾಗುತ್ತದೆ.

ಅಧ್ಯಯನ, ಹೋರಾಟ ಮತ್ತು ಬರೆಹಗಳ ನಡುವೆ ಸಮನ್ವಯ ಸಾಧಿಸುತ್ತಾ ಬರೆಯುತ್ತಿರುವ ರಹಮತ್ ಅವರಿಗೆ ದೆಹಲಿ ಕನ್ನಡಿಗರ ಪರವಾಗಿ ಅಭಿನಂದನೆಗಳು.

❑ ಡಾ. ಪುರುಷೋತ್ತಮ ಬಿಳಿಮಲೆ

# ದೆಹಲಿಗೆ ವಿಜಯ್ ಮರ್ಚಂಟ್ ಟ್ರೋಫಿ ತಂದ ಕನ್ನಡಿಗ ಕೋಚ್ ಎಂ. ಶಿವರಾಮ ರೈ



ಡಿಡಿಸಿಎ (Delhi & District Cricket Association) ಹದಿನಾರರ ಕೆಳಗಿನ ವಯಸ್ಸಿನ ಕ್ರಿಕೆಟ್ ತಂಡವು (U16) ಪ್ರತಿಷ್ಠಿತ ವಿಜಯ್ ಮರ್ಚಂಟ್ ಟ್ರೋಫಿಯನ್ನು ಗೆದ್ದಿದೆ. ದೆಹಲಿಯು ಅಂತಿಮ ಆಟದಲ್ಲಿ ಮಹಾರಾಷ್ಟ್ರದ ಎದುರು ಮೊದಲ ಇನ್ನಿಂಗ್ಸ್ ಲೀಡ್‌ನಲ್ಲಿ ಗೆಲುವು ಸಾಧಿಸಿತು. ಕೇರಳದ ಪೆರಿಂತಲ್‌ಮನ್ನ ಕ್ರಿಕೆಟ್ ಸ್ಟೇಡಿಯಂನಲ್ಲಿ ನಡೆದ ಈ ಪಂದ್ಯಾವಳಿಯು ಫೈನಲ್‌ಗೆ ಬರುವ ಮುನ್ನ ದೆಹಲಿ ತಂಡವು ನಾಕೌಟ್ ಮಟ್ಟದಲ್ಲಿ ಪಂಜಾಬ್, ಹಿಮಾಚಲ ಪ್ರದೇಶ, ಜಮ್ಮು ಮತ್ತು ಕಾಶ್ಮೀರ ಹಾಗೂ ಹರ್ಯಾಣ ತಂಡಗಳನ್ನು ಸೋಲಿಸಿತ್ತು. ನಂತರ ಕ್ವಾರ್ಟರ್ ಫೈನಲ್‌ನಲ್ಲಿ ಜಾರ್ಖಂಡ್ ಹಾಗೂ ಸೆಮಿ ಫೈನಲ್‌ನಲ್ಲಿ ಉತ್ತರ ಪ್ರದೇಶ ತಂಡವನ್ನು ಸೋಲಿಸಿತ್ತು. ದೆಹಲಿ ತಂಡದ ಮಿಡ್ಲ್ ಆರ್ಡರ್ ಬ್ಯಾಟುಗಾರ ಹಾಗೂ ಆಫ್ ಸ್ಪಿನ್ನರ್ ಪ್ರಶಾಂತ್ ಭಂಡಾರಿ ಏಳು ಮ್ಯಾಚ್‌ಗಳಲ್ಲಿ 810 ರನ್‌ಗಳನ್ನು ಪಡೆದನಲ್ಲದೇ 23 ವಿಕೆಟ್‌ಗಳನ್ನು ಕೂಡ ಪಡೆದನು.

ದೆಹಲಿ ತಂಡದ ಈ ಅಮೋಘ ವಿಜಯದ ಹಿಂದೆ ಕನ್ನಡಿಗ ಕ್ರಿಕೆಟ್ ಕೋಚ್ ಎಂ. ಶಿವರಾಮ ರೈ ಅವರ ಕೊಡುಗೆ ಮಹತ್ತರವಾದದ್ದು. ಗೌತಮ್ ಗಂಭೀರ್, ಅಮಿತ್ ಮಿಶ್ರಾ, ತೇಜಸ್ವೀ ಯಾದವ್ (ಲಾಲೂ ಮಗ) ಶಿವರಾಮ ರೈ ಅವರ ಗರಡಿಯಲ್ಲಿ ಪಳಗಿದ ಕೆಲವು ಆಟಗಾರರು.

ದೆಹಲಿ ಕನ್ನಡಿಗರ ಕ್ರಿಕೆಟ್ ಪ್ರೇಮಿಗಳಿಗೂ ಹಾಗೂ ದೆಹಲಿ ಕನ್ನಡ ಶಾಲೆಯ ಮಕ್ಕಳಿಗೂ ಶಿವರಾಮ ರೈ ಅವರ ಅನುಭವಿ ನೇತೃತ್ವದಲ್ಲಿ ತರಬೇತಿ ದೊರೆಯುವಂತಾಗಲಿ ಎಂದು ಆಶಿಸೋಣ. ವಿಜಯ್ ಮರ್ಚಂಟ್ ಟ್ರೋಫಿ ಗೆಲುವಿನ ಸಾಧಕ ಶಿವರಾಮ ರೈ ಅವರಿಗೆ ಸಮಸ್ತ ದೆಹಲಿ ಕನ್ನಡಿಗರ ಹಾರ್ದಿಕ ಅಭಿನಂದನೆಗಳು.



ಕಳೆದ ಮೂರು ದಶಕಗಳಿಂದ ಹೊರನಾಡಿನಲ್ಲಿ ಕನ್ನಡ ಸಂಸ್ಕೃತಿ ಪ್ರಚಾರ ಮಾಡಿದ 'ದೆಹಲಿ ಕನ್ನಡಿಗ' ಪತ್ರಿಕೆ ಸಂಪಾದಕ ಬಾ.ಸಾಮಗ ಅವರಿಗೆ ಚನ್ನಗಿರಿಯಲ್ಲಿ 'ಲೋಚನ' ಕನ್ನಡ ಸಂಘದವರು ಜನವರಿ 16ರಂದು ಏರ್ಪಡಿಸಿದ್ದ 'ಡಾ.ಸಿ.ಅಶ್ವತ್ ನಮನ' ಕಾರ್ಯಕ್ರಮದಲ್ಲಿ ಪ್ರಖ್ಯಾತ ಕವಿ ಡಾ.ಎಚ್.ಎಸ್.ವೆಂಕಟೇಶಮೂರ್ತಿ ಅವರು 'ಶ್ರೇಷ್ಠ ಹೊರನಾಡ ಕನ್ನಡ ಪ್ರಚಾರಕ' ಪ್ರಶಸ್ತಿ ನೀಡಿ ಸನ್ಮಾನಿಸಿದರು.


Saujanya Printing Press

A HOUSE OF QUALITY PRINTING


C-95, Okhla Industrial Area, Phase-I,
New Delhi - 110 020
Phone : 26815778, 41611143
Mobile : 9811104398, 9811604398
e-mail : rvprintingpress@gmail.com / hpgp2006@gmail.com

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ
ಬಹುವರ್ಣದ ಸುಸಜ್ಜಿತ ಮುದ್ರಣಾಲಯ

ಮುದ್ರಣವೂ ಒಂದು ಕಲೆ, ಅದುವೇ ನಮ್ಮ ನೆಲೆ

# ಕರ್ನಾಟಕದಲ್ಲಿ ಬೆಳಗಿದ ದೆಹಲಿಯ "ದಿನಕರ"

## ಪ್ರತಿಷ್ಠಿತ 'ಹಂಪಿ ಉತ್ಸವ'ದಲ್ಲಿ ದಿನಕರ ತಂಡದಿಂದ 'ನಾ ಸತ್ತಿಲ್ಲ!' ನಾಟಕ ಪ್ರದರ್ಶನ



ಜನವರಿ 28 ರಿಂದ ಫೆಬ್ರವರಿ 1 ರ ತನಕ 'ದಿನಕರ' (ದಿಲ್ಲಿ ನಗರ ಕನ್ನಡ ಕಲಾವಿದರ ರಂಗ, ನವದೆಹಲಿ) ತಂಡದಿಂದ ಕನ್ನಡ ನಾಡಿನ ನಾಲ್ಕು ಜಿಲ್ಲೆಗಳಲ್ಲಿ 'ನಾ ಸತ್ತಿಲ್ಲ!' ನಾಟಕದ ಪ್ರಯೋಗಗಳು ಯಶಸ್ವಿಯಾಗಿ ನಡೆದವು.

ಕರ್ನಾಟಕದ ಜಗತ್ಪ್ರಸಿದ್ಧ ಐತಿಹಾಸಿಕ ಆಕರ್ಷಣೆಯ ತಾಣವಾದ ಹಂಪಿಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ–ಕರ್ನಾಟಕ ಸರ್ಕಾರ, ಕರ್ನಾಟಕ ಪ್ರವಾಸೋದ್ಯಮ ಇಲಾಖೆ ಹಾಗೂ ಬಳ್ಳಾರಿಯ ಜಿಲ್ಲಾಡಳಿತ ಸಂಯುಕ್ತವಾಗಿ ಆಯೋಜಿಸುವ 'ಹಂಪಿ ಉತ್ಸವ'ದಲ್ಲಿ ಬೃಹತ್ ಬಂಡೆಕಲ್ಲುಗಳ ನೈಜ ಪರಿಸರದ ನಡುವೆ ಭವ್ಯವಾಗಿ ಅಣಿಗೊಳಿಸಲಾಗಿದ್ದ 'ಡಾ. ರಾಜ್‌ಕುಮಾರ್ ವೇದಿಕೆ'ಯಲ್ಲಿ ದಿನಾಂಕ 28 ಜನವರಿಯಂದು ಪ್ರದರ್ಶನಗೊಂಡ 'ನಾ ಸತ್ತಿಲ್ಲ!' ನಾಟಕ ಎರಡೂವರೆ ಸಾವಿರಕ್ಕೂ ಮಿಗಿಲಾಗಿ ನೆರೆದಿದ್ದ ಪ್ರೇಕ್ಷಕರ ಮನಗೆದ್ದಿತು.

ರಾಷ್ಟ್ರದ ರಾಜಧಾನಿ ದೆಹಲಿಯಲ್ಲಿ ಯಶಸ್ವೀ ಎರಡು ಪ್ರದರ್ಶನಗಳನ್ನು ಕಂಡು ವಿದ್ವಜ್ಜನರ ಪ್ರಶಂಸೆಗೆ ಪಾತ್ರವಾಗಿದ್ದ ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿಯವರು ರಚಿಸಿ, ಶ್ರೀ ಶಿವಾನಂದ ಇಂಗಳೇಶ್ವರ ಅವರು ನಿರ್ದೇಶಿಸಿದ ಈ ನಾಟಕ 'ಹಂಪಿ ಉತ್ಸವ'ದಲ್ಲಿ 3ನೇ ಪ್ರಯೋಗವನ್ನು ಕಂಡಿತು. ಜಾತ್ರೆಯ ಸಡಗರದ ಸದ್ದು ಗದ್ದಲಗಳ ನಡುವೆಯೂ ಗ್ರಾಮೀಣ ಜನರೇ ಬಹಳವಾಗಿದ್ದ ಸಭಿಕರ ಎದುರು ಗಹನವಾದ ವಸ್ತುವನ್ನು ಒಳಗೊಂಡ ಈ ನಾಟಕ ಪ್ರೇಕ್ಷಕರ ಆಸಕ್ತಿಯನ್ನು ಹಿಡಿದಿಡುವಲ್ಲಿ ಸಫಲವಾಯಿತು. ಅಷ್ಟೇ ಅಲ್ಲದೆ ಪಾತ್ರಗಳೊಂದಿಗೆ ಪ್ರೇಕ್ಷಕರ ಸಂವಹನ ತಂಡದ ಉತ್ಸಾಹಕ್ಕೆ ಪೂರಕವಾಗಿತ್ತು. ಇಂತಹ ಗಂಭೀರ ವಸ್ತು ಇರುವ ನಾಟಕವನ್ನು ದೂರದ ದೆಹಲಿಯಿಂದ ಬಂದು ನಮಗಾಗಿ ನೀಡಿದ್ದು ಶ್ಲಾಘನೀಯವೆಂದು ಈ ಸಂದರ್ಭದಲ್ಲಿ ಉಪಸ್ಥಿತರಿದ್ದ ಶ್ರೀ ನರಸಿಂಹ ಮೂರ್ತಿ, ರಿಜಿಸ್ಟ್ರಾರ್, ಕರ್ನಾಟಕ ನಾಟಕ ಅಕಾಡೆಮಿ ಅವರು ಅಭಿಪ್ರಾಯಪಟ್ಟರು. ರಂಗಕರ್ಮಿ ಗುಬ್ಬಿ ಪ್ರಕಾಶ್, ಚಿಂದೋಡಿ ಶಂಭುಲಿಂಗಪ್ಪ ಹಾಗೂ ವಿವಿಧ ಕಲಾತಂಡಗಳ ಕಲಾವಿದರು ಕೂಡ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದರು.

ಜಗದ್ವಿಖ್ಯಾತ ಗೋಲಗೊಮ್ಮಟದ ಊರು ಬಿಜಾಪುರದಲ್ಲಿ 'ನಾ ಸತ್ತಿಲ್ಲ!'ದ 4ನೇ ಪ್ರಯೋಗ ದಿನಾಂಕ 29.01.2011ರಂದು ನಗರದ ಉಪ್ಪಲಿ ಬುರುಜದ ಸಮೀಪವಿರುವ ಬಿಡಿಇ ಸಂಸ್ಥೆಯ ಬಾಲಕಿಯರ ಮಾಧ್ಯಮಿಕ ಶಾಲೆಯ ಆವರಣದಲ್ಲಿ ನಡೆಯಿತು. ಈ ಪ್ರದರ್ಶನಕ್ಕೆ ಬಿಜಾಪುರದ ನ್ಯಾಯಮೂರ್ತಿ ಶ್ರೀ ಮಾಸ್ಟರ್ ಆರ್ ಕೆ ಎಂ ಎಂ ಮಹಾಸ್ವಾಮೀಜಿ, 1ನೇ ಹೆಚ್ಚುವರಿ ಮುಖ್ಯ ನ್ಯಾಯಾಧೀಶರು, ಶ್ರೀ ಎಸ್ ಎಸ್ ಪಟ್ಟಣಶೆಟ್ಟಿ, ಡೆಪ್ಯುಟಿ ಕಮಿಷನರ್, ಶ್ರೀ ವಿ ಜಿ ಕುಲಕರ್ಣಿ, ಶ್ರೀ ಅಶೋಕ ಜೋಶಿ, ಶ್ರೀ ಎಂ ಕೆ ಕುಲಕರ್ಣಿ ಸೇರಿದಂತೆ ಇನ್ನೂ ಹಲವಾರು ಖ್ಯಾತ ವಕೀಲರು, ನ್ಯಾಯಾಧೀಶರು, ಉದ್ಯಮಿಗಳು ಹಾಗೂ ರಂಗಾಸಕ್ತರ ಸಮೂಹವೇ ಹಾಜರಿತ್ತು. ಈ ನಾಟಕದ ಲೇಖಕರಾದ ಶ್ರೀ ಕೃಷ್ಣ ಕೊಲ್ಹಾರ ಕುಲಕರ್ಣಿ ಅವರೂ ಸಹ ಈ ಸಂದರ್ಭದಲ್ಲಿ ಉಪಸ್ಥಿತರಿದ್ದು ಕಲಾವಿದರನ್ನು ಪ್ರೋತ್ಸಾಹಿಸಿದರು. ಈ ಸಂದರ್ಭದಲ್ಲಿ ನಾಟಕದ ನಿರ್ದೇಶಕರಾದ ಶ್ರೀ ಶಿವಾನಂದ ಇಂಗಳೇಶ್ವರರನ್ನು ಬಿಡಿಇ ಸಂಸ್ಥೆಯ ವತಿಯಿಂದ ಸನ್ಮಾನಿಸಲಾಯಿತು.

ಉತ್ತರ ಕರ್ನಾಟಕದ ವಿಖ್ಯಾತ ಸೀರೆಗೆ ಹೆಸರಾದ ಬಾಗಲಕೋಟ ಜಿಲ್ಲೆಯ ಇಳಕಲ್‌ನಲ್ಲಿ ದಿನಾಂಕ 30.01.2011ರಂದು 'ಸ್ನೇಹರಂಗ' ಸಂಸ್ಥೆಯ ಸಹಯೋಗದೊಂದಿಗೆ ಈ ನಾಟಕದ 5ನೇ ಪ್ರಯೋಗ ನಡೆಯಿತು. ಸ್ನೇಹರಂಗ ಕಳೆದ ಮೂರು ದಶಕಗಳಿಂದ ಅನೇಕ ಹವ್ಯಾಸೀ ರಂಗತಂಡಗಳಿಗೆ ವೇದಿಕೆ ಒದಗಿಸುತ್ತಾ ಪ್ರೋತ್ಸಾಹ ನೀಡುತ್ತಿದೆ. ನಗರದ 'ಅನುಭವ ಮಂಟಪ'ದಲ್ಲಿ ರಾತ್ರಿ 11 ಕ್ಕೆ ಶುರುವಾದ ಈ ಪ್ರದರ್ಶನವನ್ನು ಶ್ರೀ ನವಲಿ ಹಿರೇಮಠ್ ಅವರು ಉದ್ಘಾಟಿಸಿದರು. ಹಿರೇಮಠ್ ಅವರು ವೃತ್ತಿ ರಂಗಭೂಮಿಯ ಹಿರಿಯ ಚೇತನಗಳಿಗಾಗಿ ವೃದ್ಧಾಶ್ರಮ ನಡೆಸುತ್ತಿದ್ದಾರೆ. ಈ ಸಂದರ್ಭದಲ್ಲಿ ಅನೇಕ ಖ್ಯಾತ ಉದ್ಯಮಿಗಳು, ರಂಗಾಸಕ್ತರು ಮತ್ತು ಗಣ್ಯರು ಪಾಲ್ಗೊಂಡು ಸಭಾಂಗಣ ಕಿಕ್ಕಿರಿದು ತುಂಬಿತ್ತು. ಶ್ರೀ ಇಂಗಳೇಶ್ವರರನ್ನು 'ಸ್ನೇಹರಂಗ' ಆತ್ಮೀಯವಾಗಿ ಸನ್ಮಾನಿಸಿತು.

ದಿನಾಂಕ 01.02.2011ರಂದು ಬೆಂಗಳೂರಿನ ರಾಜಾಜಿನಗರದಲ್ಲಿರುವ ಶ್ರೀರಾಮ ಮಂದಿರದ ಸಭಾಂಗಣದಲ್ಲಿ 'ನಾ ಸತ್ತಿಲ್ಲ!'ದ 6ನೇ ಪ್ರಯೋಗ ಅತ್ಯಂತ ಯಶಸ್ವಿಯಾಗಿ ನಡೆಯಿತು. ಪೂರ್ವ ನಿಗದಿತ ಕಾರ್ಯಕ್ರಮ ಪಟ್ಟಿಯಲ್ಲಿದ್ದ ಬೆಂಗಳೂರಿನ ಕಾರ್ಯಕ್ರಮ ಅಂತಿಮ ಕ್ಷಣದಲ್ಲಿ ರದ್ದಾಗಿದ್ದರಿಂದ ಕೇವಲ ಒಂದು ದಿನದ ಅವಧಿಯಲ್ಲಿ ಈ ನಾಟಕ ಬೆಂಗಳೂರಿನಲ್ಲಿ ಪ್ರದರ್ಶನಗೊಳ್ಳಲು ಕಾರಣಕರ್ತರಾದ ಬೆಂಗಳೂರು ನಗರ ಪಾಲಿಕೆ ಸದಸ್ಯರಾದ ಶ್ರೀಮತಿ ಎಂ.ಜಿ. ಜಯರತ್ನ ಹಾಗೂ ಬೆಂಗಳೂರು ನಗರ ಯುವಮೋರ್ಚಾ ಉಪಾಧ್ಯಕ್ಷರಾದ ಶ್ರೀ ಎಂ.ಜಿ. ಬಾಲಕೃಷ್ಣ ಅವರನ್ನು 'ದಿನಕರ' ವತಿಯಿಂದ ಸನ್ಮಾನಿಸಲಾಯಿತು. ಆರ್‌ಎಸ್‌ಎಸ್ ಮುಖಂಡರಾದ ಶ್ರೀ ಶಂಕರಭಟ್, ಶ್ರೀರಾಮಮಂದಿರದ ಕಾರ್ಯದರ್ಶಿಯವರು, 'ದಿನಕರ'ದ ಪ್ರಥಮ ಪ್ರಯೋಗವಾದ ಕುಂ.ವೀ.ಯವರ 'ಪಯಣ'ದ ರಂಗರೂಪಾಂತರವನ್ನು ನಿರ್ದೇಶಿಸಿದ್ದ ಶ್ರೀ ನಾರಾಯಣ ಸ್ವಾಮಿ, ಅನೇಕ ನಾಟಕಗಳನ್ನು ನಿರ್ದೇಶಿಸಿ ದೆಹಲಿ ಕನ್ನಡಿಗರಿಗೆ ಚಿರಪರಿಚಿತರಾದ ಶ್ರೀ ವೀರಣ್ಣ ಕಮ್ಮಾರ, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಶ್ರೀ ಆಂಜನಿ ಗೌಡ, ದೆಹಲಿ ಕರ್ನಾಟಕ ಸಂಘದ ಮಾಜಿ ಕಾರ್ಯದರ್ಶಿ ಶ್ರೀ ಆರ್. ರೇಣುಕುಮಾರ್, ಶ್ರೀ ಪುಟ್ಟರಾಜು, ಉದ್ಯಮಿ ಇವರು ಸಹ ಈ ಕಾರ್ಯಕ್ರಮಕ್ಕೆ ಸಹಕಾರ ನೀಡಿದರು ಹಾಗೂ ಇನ್ನೂ ಅನೇಕ ರಂಗಾಸಕ್ತರು ಸಹ ಉಪಸ್ಥಿತರಿದ್ದು ಮೆಚ್ಚುಗೆ ವ್ಯಕ್ತಪಡಿಸಿದರು.

ಧನಬಲ, ಕುತಂತ್ರಗಳ ಮೂಲಕ ಸತ್ಯ, ಆದರ್ಶಗಳನ್ನು ಕೊಲ್ಲುವ ಪ್ರಯತ್ನವನ್ನು ಪ್ರಸ್ತುತ ಪಡಿಸುವ ಈ ನಾಟಕ ನ್ಯಾಯಾಂಗ ವ್ಯವಸ್ಥೆಯಲ್ಲಿರುವ ನ್ಯೂನತೆಗಳನ್ನು ಬಳಸಿಕೊಂಡು ವ್ಯಕ್ತಿ ಜೀವಂತ ಇರುವಾಗಲೇ ಸತ್ತಿದ್ದಾನೆಂದು ಸಾಧಿಸುವಲ್ಲಿ ಬಲಾಢ್ಯರ, ಹಣದ ಆಮಿಷಕ್ಕೊಳಗಾಗಿ ಸತ್ಯವನ್ನು ಮರೆಮಾಚುವವರ ತಂತ್ರ ಈ ನಾಟಕದ ಕಥಾವಸ್ತು.

ದಿನಕರದ ಈ ಕರ್ನಾಟಕ ಪ್ರವಾಸದಲ್ಲಿ ದೆಹಲಿವಾಸಿ ಕನ್ನಡ ಕಲಾವಿದರುಗಳಾದ ಶ್ರೀ ಶಿವಾನಂದ ಇಂಗಳೇಶ್ವರ ಅವರು ನ್ಯಾಯಾಧೀಶನ ಪಾತ್ರ ವಹಿಸಿದರೆ, ಶ್ರೀ ಶ್ಯಾಮಸುಂದರ್ ಆರ್ ಎಸ್ ಸತ್ಯವಂತನ ಪಾತ್ರಕ್ಕೆ ಜೀವ ತುಂಬಿದರು. ಶ್ರೀ ಹೆಚ್ ಕೆ ರವಿಕುಮಾರ್ ಹಾಗೂ ಶ್ರೀ ಶ್ರೀನಿವಾಸ ಮೂರ್ತಿ ಡಿ ಎ ಅವರು ವಕೀಲರಾಗಿ ತಂತಮ್ಮ ಕಕ್ಷಿದಾರರನ್ನು ಸಮರ್ಥಿಸಿಕೊಂಡರೆ ಶ್ರೀ ಎಸ್ ಕುಮಾರ್ ಅವರು ಬೀರಪ್ಪನ ಪಾತ್ರದಲ್ಲಿ ಮಿಂಚಿದರು. ಶ್ರೀ ಬಿ ನಾರಾಯಣರವರು ಧನವಂತರಾವ್‌ನ ದರ್ಪ ತೋರಿಸಿದರೆ, ಶ್ರೀ ಎಸ್ ಎಸ್ ಗೋವಿಂದರಾಜು ಅವರು ಜವಾನನ ಪಾತ್ರದ ಹಾಗೂ ಶ್ರೀ ಮಲ್ಲನಗೌಡ ಬಿ ಎಸ್ ಅವರು ಬೆಂಚ್‌ಕ್ಲರ್ಕ್ ಪಾತ್ರದ ಶಿಸ್ತನ್ನು ಎತ್ತಿ ಹಿಡಿದರು. ಪ್ರಚಂಡಾಚಾರಿ ಪಾತ್ರವಹಿಸಿದ ಶ್ರೀ ಟಿ ಎಸ್ ರಮೇಶ್ ಅವರು ಪ್ರೇಕ್ಷಕರ ಮುಖದಲ್ಲಿ ನಗೆ ಮೂಡಿಸಲು ಕಾರಣರಾದರು. ಶ್ರೀಮತಿ ಆಶಾ ಶ್ಯಾಮಸುಂದರ್ ಅವರು ರಂಗಸಜ್ಜಿಕೆ ನಿರ್ವಹಣೆಯಲ್ಲಿ ಸಹಕರಿಸಿದರು ಹಾಗೂ ಶ್ರೀ ಶಶಿಕಾಂತ ಪಾಟೀಲ ಪ್ರಸಾಧನದಲ್ಲಿ ನೆರವಿತ್ತರೆ ಬಿಜಾಪುರದಿಂದ ಜತೆಗೂಡಿದ ಶ್ರೀ ಯೋಗೇಂದ್ರ ಸಿಂಗ್ ಅವರು ಈ ಎಲ್ಲಾ ಪ್ರದರ್ಶನಗಳಿಗೆ ಉತ್ತಮ ಬೆಳಕಿನ ವ್ಯವಸ್ಥೆ ಮಾಡಿದರು.

ಹೀಗೆ 'ದಿನಕರ'ದ ಕರ್ನಾಟಕ ಪ್ರವಾಸ ಕನ್ನಡ ನಾಡಿನ ನಾಲ್ಕು ಬೇರೆ ಬೇರೆ ಜಿಲ್ಲೆಗಳಲ್ಲಿ ಪ್ರದರ್ಶನಗೊಂಡು ಅದ್ಭುತ ಯಶಸ್ಸನ್ನು ಪಡೆದು ಎಲ್ಲರಿಂದ ಮೆಚ್ಚುಗೆ ಗಳಿಸಿತಲ್ಲದೆ ದಿನಕರದ ಮುಂಬರುವ ನಾಟಕಗಳನ್ನು ತಮ್ಮೂರಿನಲ್ಲಿ ಪ್ರದರ್ಶನ ಮಾಡುವಂತೆ ಅನೇಕರ ಪ್ರೀತಿಯ ಒತ್ತಾಯವೂ ಬರುತ್ತಿದೆ ಎಂದು ಈ ಕರ್ನಾಟಕ ಪ್ರವಾಸದ ರೂವಾರಿ ಶ್ರೀ ಶಿವಾನಂದ ಇಂಗಳೇಶ್ವರ್ ಹೇಳಿದರು. 'ದಿನಕರ' ತಂಡಕ್ಕೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹಾರ್ದಿಕ ಅಭಿನಂದನೆಗಳು.

❑ ದಿನಕರ ವರದಿ

# ಕೊರೆಯುವ ಚಳಿಯಲ್ಲಿ ಸರ್ವ ಸದಸ್ಯರ ಸಭೆ ಮತ್ತು ಚುನಾವಣೆ






ಜನವರಿ 9, ರಂದು 2011–2013 ಸಾಲಿನ ದೆಹಲಿ ಕರ್ನಾಟಕ ಸಂಘದ ಚುನಾವಣೆ ದಿನ. ದೆಹಲಿ ಕನ್ನಡ ಶಾಲೆಯ ಆವರಣದ ತುಂಬೆಲ್ಲ ಕನ್ನಡಿಗರ ಜಾತ್ರೆ. ಕಳೆದ ಒಂದು ವಾರದಿಂದ ಉತ್ತರಭಾರತದಲ್ಲಿ ಶೀತ ಗಾಳಿ ಬೀಸುತ್ತಿದ್ದು, ಕೆಲವೆಡೆ ಹಿಮಪಾತವೂ ಆಗಿದ್ದುದರಿಂದ ದೆಹಲಿಯಲ್ಲಿ ಮೋಡ ಕವಿದುಕೊಂಡು, ತೆಳುವಾದ ಮಂಜು ಮುಸುಕಿದೆಯೇನೋ ಎಂಬಂತಿದ್ದ ಹಸಿ ವಾತಾವರಣ. ಭಾನುವಾರದ ಚಳಿ ಕಳೆದ ನಲವತ್ತೆರಡು ವರ್ಷದ ದಾಖಲೆಯನ್ನು ಮುರಿದಿತ್ತು. ಹೆಚ್ಚಿನ ತಾಪಮಾನ ಕೇವಲ 11 ಡಿಗ್ರಿ, ನ್ಯೂನತಮ 5 ಡಿಗ್ರಿಯ ಗದಗುಡುವ ಚಳಿಯಲ್ಲಿ ಜನ ಸೇರುತ್ತಾರೋ ಇಲ್ಲವೋ ಎಂಬ ಸಹಜ ಆತಂಕದಲ್ಲಿ ನಿಂತ ಅಭ್ಯರ್ಥಿಗಳ ಗುಂಪು. "ಸೂರ್ಯದೇವಾ ಇವತ್ತೊಂದು ದಿನ ಕರುಣೆ ತೋರಪ್ಪಾ, ಸ್ವಲ್ಪಾದರೂ ಬಿಸಿಲಿನ ಮುಖ ತೋರು" ಎಂಬ ಅಭ್ಯರ್ಥಿಗಳ ಪ್ರಾರ್ಥನೆಗೆ ಸೂರ್ಯದೇವ ಕರುಣೆ ತೋರಲಿಲ್ಲ. ಇಡೀ ದಿನ ಒಂದು ಬಿಸಿಲಿನ ಎಳೆಯೂ ಕಾಣಲಿಲ್ಲ. ಆದರೆ ಆಶ್ಚರ್ಯಕರ ರೀತಿಯಲ್ಲಿ ಅನಿರೀಕ್ಷಿತವಾಗಿ ಪ್ರವಾಹದಂತೆ ಬಂದ ನೂರಾರು ಸದಸ್ಯರು ತಮ್ಮ ಮತ ಚಲಾಯಿಸಿ ಕನ್ನಡ ಸೇವೆಗಾಗಿ ತಾವೆಂದೂ ಮುಂದೆ ಎಂಬುದನ್ನು ತೋರಿಸಿ, ಕನ್ನಡಾಭಿಮಾನವನ್ನು ಮೆರೆದರು. ಇದೆಲ್ಲದರ ಮಧ್ಯೆ ಚಳಿಯ ಪರಿವೆಯೇ ಇಲ್ಲದೆ ತಮ್ಮದೇ ಆಟದಲ್ಲಿ ನಿರತರಾದ ಪುಟಾಣಿ ಮಕ್ಕಳು, ಚುನಾವಣೆಗೆ ನಿಂತ ತಮ್ಮ ತಂದೆ–ತಾಯಿ, ಆಪ್ತರಿಗಾಗಿ ಪ್ರಚಾರ ಮಾಡುತ್ತಿದ್ದ ದೊಡ್ಡ ಮಕ್ಕಳಿಗೆ ಯಾವುದೋ ಪಿಕ್‌ನಿಕ್ ತರಹದ ಉತ್ಸಾಹ, ಸಡಗರ. ಒಂದೆಡೆ ಡಾ. ಸರೋಜಿನಿ ಮಹಿಷಿ, ನೇತ್ರಾವತಿ ಮಯ್ಯ, ಸಾವಿತ್ರಿ ಶಾಸ್ತ್ರಿಯವರಂಥ ಹಿರಿಯ ಜೀವಿಗಳು ಚಳಿಯನ್ನೂ ಲೆಕ್ಕಿಸದೇ ಮತ ನೀಡಲು ಬಂದ ಉತ್ಸಾಹ, ಕನ್ನಡದ ಕಳಕಳಿ, ಸಂಘದ ಬಗೆಗಿನ ಕಾಳಜಿಗೆ ಮನ ಮೂಕವಾದರೆ, ಇನ್ನೊಂದೆಡೆ ಒಂದು ಚೆಂದದ ರಂಗೋಲಿಯಂತೆ ಬಣ್ಣ ಬಣ್ಣದ ಬಟ್ಟೆ, ಉಲ್ಲನ್ ಕೋಟು, ಟೋಪಿ, ಶಾಲು ಹಾಕಿ ಓಡಾಡುವ ಜನ. ಹಬ್ಬವೋ ದಿಬ್ಬಣವೋ ಎನಿಸುವಂತಿದ್ದ ನೂರಾರು ಕನ್ನಡಿಗರ ಗೌಜಿ, ಮಕ್ಕಳ ಕಲಕಲ. ಬಿಸಿಬೇಳೆ ಭಾತ್, ಮೈಸೂರ್ ಪಾಕ್, ಸಾಂಬಾರಿನ ರುಚಿಯಾದ ಊಟ, ಮಾತುಕತೆ, ತುಂಬಾ ದಿನಗಳ ನಂತರ ಭೆಟ್ಟಿಯಾದವರ ಸಂಭ್ರಮ, ಹಳೆ ಗುರುತಿನ ಆಪ್ತ ಸ್ನೇಹಿತರ ಸಂತಸ, ಉಭಯ ಕುಶಲೋಪರಿ ಮನಸ್ಸಿಗೆ ಮುದ ನೀಡಿತು.

ಇನ್ನೊಂದೆಡೆ ವಾರ್ಷಿಕ ಸರ್ವ ಸದಸ್ಯರ ಸಭೆ ಗಂಭೀರವಾಗಿ ಜರುಗಿತು. ಅಧ್ಯಕ್ಷರ ಅನುಪಸ್ಥಿತಿಯಲ್ಲಿ ಉಪಾಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಸಭೆಯ ಅಧ್ಯಕ್ಷತೆ ವಹಿಸಿ, ಸಭೆಗೆ ಆಗಮಿಸಿದ ಸದಸ್ಯರನ್ನು ಸ್ವಾಗತಿಸಿದರು. ಕಳೆದ ಸಾಲಿನಲ್ಲಿ ನಮ್ಮನ್ನಗಲಿದ ಸಂಘದ ಮಾಜಿ ಅಧ್ಯಕ್ಷ ಶ್ರೀ ಎ.ಪಿ. ಕುಮಟಾಕರ್, ಹಿರಿಯ ಸದಸ್ಯರಾದ ಶ್ರೀ ಸೇತುರಾವ್, ಶ್ರೀ ಅಣ್ಣಪ್ಪ ಗುಡುಗುಡಿ ಮತ್ತು ಶ್ರೀಮತಿ ಗೀತಾ ಸಾಗರ್‌ರವರಿಗೆ ಸಭೆ ಶ್ರದ್ಧಾಂಜಲಿ ಅರ್ಪಿಸಿತು.

ಚುನಾವಣಾಧಿಕಾರಿಯಾದ ಶ್ರೀ ಈಶ್ವರ ಭಟ್ ಅವರು ಸಭೆಗೆ ಚುನಾವಣಾ ಪ್ರಕ್ರಿಯೆ ಮತ್ತು ವ್ಯವಸ್ಥೆಗಳ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿದರು. ಚುನಾವಣೆಗೆ ಸ್ಪರ್ಧಿಸಿದ್ದ ಎಲ್ಲ ಅಭ್ಯರ್ಥಿಗಳು ತಮ್ಮ ಕಿರು ಪರಿಚಯ ಮಾಡಿಕೊಂಡ ನಂತರ ಚುನಾವಣಾ ಪ್ರಕ್ರಿಯೆ ಭರದಿಂದ ಸಾಗಿತು.

ಕಾರ್ಯದರ್ಶಿಯವರು ಸಂಘದ ವಾರ್ಷಿಕ ವರದಿ ಬಗ್ಗೆ ಸಭೆಗೆ ವಿವರಿಸಿ ಅನುಮೋದನೆ ಕೋರಿದರು. ಶ್ರೀ ಆನಂದರಾವ್ ಅವರು ಮೊದಲಿಗರಾಗಿ ಬೆಂಬಲಿಸಿದರೆ ಶ್ರೀ ರವಿಚಂದ್ರ ಬೇಕಲ್ ಅನುಮೋದಿಸಿದರು. ಲೆಕ್ಕಪತ್ರಗಳ ಬಗ್ಗೆ ವಿಸ್ತೃತ ಚರ್ಚೆಯ ನಂತರ ತಿದ್ದುಪಡಿಗಳೊಂದಿಗೆ ಅನುಮೋದನೆ ನೀಡಲಾಯಿತು. ಶ್ರೀ ನರಸಿಂಹ ಮೂರ್ತಿ ಬೆಂಬಲಿಸಿದರೆ, ಶ್ರೀ ಈಶ್ವರ ಮಡಿವಾಳ ಅನುಮೋದಿಸಿದರು. ನಂತರ ಇತರ ವಿಷಯಗಳ ಮೇಲೆ ವಿಸ್ತೃತ ಚರ್ಚೆ ನಡೆದು ಕಾರ್ಯದರ್ಶಿಯವರ ವಂದನೆಯೊಂದಿಗೆ ಸಭೆ ಮುಕ್ತಾಯವಾಯಿತು.







# ದೆಹಲಿ ಕರ್ನಾಟಕ ಸಂಘದ ಕಾರ್ಯಕಾ



**ಅಧ್ಯಕ್ಷರು – ಡಾ. ವೆಂಕಟಾಚಲ ಜಿ. ಹೆಗಡೆ :**
ಅಂತರರಾಷ್ಟ್ರೀಯ ಅಧ್ಯಯನ ಶಾಲ
ಮಂತ್ರಾಲಯದ ಅಂತರರಾಷ್ಟ್ರೀಯ ಕಾ
ಇನ್ನಿತರ ಅಂತರರಾಷ್ಟ್ರೀಯ ಸಂಸ್ಥೆಗಳ
ಕಾನೂನಿನ ಕುರಿತಾಗಿ ಬರೆದ ಲೇಖನಗ
ಶಿಕ್ಷಣ ಸಂಸ್ಥೆಯ ಕಾರ್ಯಕಾರಿ ಸಮಿತ
ಈಗ ಈ ಸಂಸ್ಥೆಯ ಕಂಪ್ಯೂಟರ್ ಶಾ
ಕತೆಗಳು ಮತ್ತು ಲೇಖನಗಳು ಕರ್ನಾಟ
ಪುಸ್ತಕ 'ದೌಲಧಾರಾ' ಪ್ರಶಂಸೆ ಗಳಿಸಿ
ಮೂರನೆಯ ಬಹುಮಾನ ಗಳಿಸಿದ್ದಾರೆ.
ಸಂದರ್ಶಕ ಪ್ರಾಧ್ಯಾಪಕರಾಗಿಯೂ ಕೆ
ಹಿಡಿಯುವಂತೆ ಗುರುತರ ಜವಾಬ್ದಾರಿ



**ಉಪಾಧ್ಯಕ್ಷೆ – ಉಷಾ ಭರತಾದ್ರಿ** : ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಗೆ 2004ರಲ್ಲಿ ಸದಸ್ಯರಾಗಿ ಆಯ್ಕೆಯಾದ ಇವರು ಮುಂದಿನ ವರ್ಷಗಳಲ್ಲಿ ಜಂಟಿ ಕಾರ್ಯದರ್ಶಿಯಾಗಿ ಹಾಗೂ ಉಪಾಧ್ಯಕ್ಷೆಯಾಗಿ ಸೇವೆ ಸಲ್ಲಿಸಿದ್ದಾರೆ. 2004 ರಿಂದ 2009 ರವರೆಗೆ ಅಭಿಮತದ ಪ್ರಧಾನ ಸಂಪಾದಕರಾಗಿ ಕಾರ್ಯನಿರ್ವಹಿಸಿದ ಇವರು ಪತ್ರಿಕೆ ಸ್ವಾವಲಂಬಿಯಾಗಿ ಬೆಳೆಯಲು ಅವಿರತವಾಗಿ ಶ್ರಮಿಸಿದ್ದಲ್ಲದೇ ದೆಹಲಿಯ ವಿವಿಧ ವೇದಿಕೆಗಳಲ್ಲಿ ಮಹಿಳೆಯರ ದನಿಯಾಗಿ ಮಹಿಳಾಪರ ಸಂಘಟನೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಾ ಬಂದಿದ್ದಾರೆ. ತಮ್ಮ ನಿರೂಪಣಾ ಶೈಲಿಯಿಂದ ದೆಹಲಿ ಕನ್ನಡಿಗರಿಗೆ ಚಿರಪರಿಚಿತರಾಗಿರುವ ಉಷಾ ಭರತಾದ್ರಿ ಅವರು ಪ್ರಸ್ತುತ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಪ್ರಾದೇಶಿಕ ನಿರ್ದೇಶಕರಾಗಿ ದೆಹಲಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇದೀಗ ಸಂಘದ ಉಪಾಧ್ಯಕ್ಷೆಯಾಗಿ ಭಾರಿ ಬಹುಮತದಿಂದ ಪುನರಾಯ್ಕೆಯಾಗಿದ್ದಾರೆ.



**ಉಪಾಧ್ಯಕ್ಷರು – ಬಿ.ಕೆ. ಬಸವರಾಜು** : ಭಾರತೀಯ ಚಿಕಿತ್ಸಾ ಕೇಂದ್ರೀಯ ಪರಿಷತ್, ನವದೆಹಲಿಯಲ್ಲಿ ಅಧೀಕ್ಷಕರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಬಿ.ಕೆ. ಬಸವರಾಜು ಅವರು ಜನಕಪುರಿ ಕನ್ನಡ ಕೂಟದ ಖಜಾಂಚಿ, ಜಂಟಿ ಕಾರ್ಯದರ್ಶಿ ಮತ್ತು ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದಾರೆ. ಪ್ರಸ್ತುತ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಕಾರ್ಯಕಾರಿ ಮಂಡಳಿಯ ಸದಸ್ಯರಾಗಿರುವ ಬಿ.ಕೆ.ಬಸವರಾಜು ಅವರು ಪ್ರಥಮ ಬಾರಿಗೆ ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷರಾಗಿ ಚುನಾಯಿತರಾಗಿದ್ದಾರೆ.



**ಪ್ರಧಾನ ಕಾರ್ಯದರ್ಶಿ – ಸಿ.ಎಂ. ನಾಗರಾಜ** : ದೆಹಲಿ ಪೋಲಿಸ್ ಇಲಾಖೆಯಲ್ಲಿ 17 ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಸಿ.ಎಂ. ನಾಗರಾಜ ಅವರು ಈ ಹಿಂದೆ ದೆಹಲಿ ಕರ್ನಾಟಕ ಸಂಘದಲ್ಲಿ ಎರಡು ಬಾರಿ ಜಂಟಿ ಕಾರ್ಯದರ್ಶಿ ಹಾಗೂ 9 ತಿಂಗಳು ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ ಅನುಭವ ಹೊಂದಿರುವ ಉತ್ಸಾಹಿ ಯುವಕ. ದೆಹಲಿ ಪೋಲೀಸ್ ಕಲ್ಯಾಣ ಸಮಿತಿಯ ಕಾರ್ಯದರ್ಶಿ. ಪ್ರಸ್ತುತ ದೆಹಲಿ ಒಕ್ಕಲಿಗ ಗೌಡ ಸಂಘದ ಖಜಾಂಚಿ ಹಾಗೂ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯು ಕಾರ್ಯಕಾರಿ ಸಮಿತಿಯ ಸದಸ್ಯರಾಗಿರುವ ನಾಗರಾಜ ಅವರು ಕಾರ್ಯದರ್ಶಿಯಾಗಿ ಸಂಘದ ಸೇವೆಗೆ ಮತ್ತೊಮ್ಮೆ ಮುಂದಾಗಿದ್ದಾರೆ.



**ಖಜಾಂಚಿ – ಕೆ.ಆರ್. ರಾಮಮೂರ್ತಿ** : ಮ್ಯಾಕ್ಸ್ ನ್ಯೂಯಾರ್ಕ್ ಲೈಫ್‌ನ ರಿಸ್ಕ್ ಮ್ಯಾನೇಜ್‌ಮೆಂಟ್ ವಿಭಾಗದಲ್ಲಿ ಸೀನಿಯರ್ ಮ್ಯಾನೇಜರ್ ಆಗಿ ಕಾರ್ಯ ನಿರ್ವಹಿಸುತ್ತಿರುವ ಶ್ರೀ ಕೆ.ಆರ್. ರಾಮಮೂರ್ತಿಯವರು ಸಂಘದ ಸದಸ್ಯ, ಜಂಟಿ ಕಾರ್ಯದರ್ಶಿ ಹಾಗೂ ಖಜಾಂಚಿಯಾಗಿ ಅಲ್ಲದೇ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಸದಸ್ಯರಾಗಿಯೂ ಕಾರ್ಯ ನಿರ್ವಹಿಸಿದ್ದಾರೆ. ಪ್ರಸ್ತುತ ಸೌತ್ ಕೆನರಾ ಕ್ಲಬ್‌ನ ಕಾರ್ಯದರ್ಶಿ ಹಾಗೂ ದೆಹಲಿ ಮಾಧ್ವ ಸಂಘದ ಉಪಾಧ್ಯಕ್ಷರಾಗಿದ್ದಾರೆ. ಇದೀಗ ಸಂಘದ ಖಜಾಂಚಿಯ ಹೊಣೆಯನ್ನು ಸಮರ್ಥವಾಗಿ ನಿರ್ವಹಿಸಲು ಭಾರಿ ಬಹುಮತದೊಂದಿಗೆ ಚುನಾಯಿತರಾಗಿದ್ದಾರೆ.



**ಜಂಟಿ ಕಾರ್ಯದರ್ಶಿ – ಎನ್.ಆರ್.ಶ್ರೀನಾಥ್** : ಕಟ್ಟಾ ಕನ್ನಡಾಭಿಮಾನಿಯಾದ ಶ್ರೀನಾಥ್ ಅವರು ಉತ್ತಮ ಸಂಘಟಕರು. ಈಗಾಗಲೇ ಜನಕಪುರಿ ಕನ್ನಡಕೂಟದ ಕಾರ್ಯದರ್ಶಿ, ಗಣೇಶ ಮಿತ್ರ ಮಂಡಳಿಯ ಕಾರ್ಯದರ್ಶಿ, ದೆಹಲಿ ಪೋಲಿಸ್ ಕಲ್ಯಾಣ ಸಮಿತಿಯ ಸದಸ್ಯ ಹಾಗೂ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಉತ್ತಮ ಸೇವೆ ಸಲ್ಲಿಸಿದ್ದಾರೆ. ದೆಹಲಿ ಕರ್ನಾಟಕ ಸಂಘದ ಜಂಟಿಕಾರ್ಯದರ್ಶಿಗಳಾಗಿ, ಕ್ರೀಡಾ ಸಮಿತಿಯ ಸಂಚಾಲಕರಾಗಿ ಕ್ರಿಕೆಟ್ ಪಂದ್ಯಾವಳಿ ಹಾಗೂ ಆಟೋಟ ಸ್ಪರ್ಧೆಗಳನ್ನು ಯಶಸ್ವಿಯಾಗಿ ಆಯೋಜಿಸಿದ್ದಾರೆ. ಕನ್ನಡ ನಾಡು,ನುಡಿ, ಸಂಸ್ಕೃತಿಯ ಸೇವೆಗೆ ಸದಾ ಸನ್ನದ್ಧರಾಗಿರುವ ಶ್ರೀನಾಥ್ ತಮ್ಮ ಜನಪ್ರಿಯತೆಯಿಂದ ಈ ಬಾರಿ ಜಂಟಿಕಾರ್ಯದರ್ಶಿಯಾಗಿ ಪುನರಾಯ್ಕೆಗೊಂಡಿದ್ದಾರೆ.



**ಜಂಟಿ ಕಾರ್ಯದರ್ಶಿ – ರೇಣುಕಾ ಎಸ್. ನಿಡಗುಂದಿ** : ಕನ್ನಡ ಸಾಹಿತ್ಯ ಹಾಗೂ ಸಂಸ್ಕೃತಿಯಲ್ಲಿ ಅಪಾರ ಪ್ರೀತಿ ಹೊಂದಿರುವ, ಸೂಕ್ಷ್ಮ ಸಂವೇದನೆಗಳ ಶ್ರೀಮತಿ ರೇಣುಕಾ ನಿಡಗುಂದಿಯವರು ದೆಹಲಿ ಕರ್ನಾಟಕ ಸಂಘದೊಂದಿಗೆ ಬಹುಕಾಲದ ಒಡನಾಡಿ. 2004 ರಿಂದ 2008 ರವರೆಗೆ ಅಭಿಮತದ ಸಂಪಾದಕ ಮಂಡಳಿಯಲ್ಲಿ ಸಕ್ರಿಯವಾಗಿ ಕೆಲಸ ಮಾಡಿದ್ದಾರೆ. ಶ್ರೀಮತಿ ನಿಡಗುಂದಿಯವರು ಉತ್ತಮ ಕವಿಯಿತ್ರಿ. ಅವರ ಕವನ ಸಂಕಲನ "ಕಣ್ಣ ಕಣಿವೆ' ಬಿಡುಗಡೆಯಾಗಿ ಕನ್ನಡ ಸಾಹಿತ್ಯ ಲೋಕದಲ್ಲಿ ಒಳ್ಳೆಯ ವಿಮರ್ಶೆಯನ್ನು ಪಡೆದಿದೆ. ಅವರ ಕವನಗಳು, ಪ್ರಬಂಧ ಲೇಖನಾಳು' ಕನ್ನಡದ ಪ್ರಮುಖ ಮಾಸಿಕ ಪತ್ರಿಕೆಗಳಲ್ಲಿ ಹಾಗೂ ದಟ್ಸ್ ಕನ್ನಡ ಡಾಟ್‌ಕಾಮ್ ಮತ್ತು ಕೆಂಡಸಂಪಿಗೆ ಅಂತರ್ಜಾಲ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ 2006-2008 ರ ಸಾಲಿನ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಹಲವಾರು ಗುರುತರ ಜವಾಬ್ದಾರಿಗಳನ್ನು ಯಶಸ್ವಿಯಗಿ ನಿರ್ವಹಿಸಿದ್ದಾರೆ. ಪ್ರಸ್ತುತ ಬರ್ಜರ್ ಪೇಂಟ್ಸ್ ಲಿಮಿಟೆಡ್ ಕಂಪನಿಯಲ್ಲಿ ಸೇವೆ ಸಲ್ಲಿಸುತ್ತಿರುವ ರೇಣುಕಾ ನಿಡಗುಂದಿ ಅವರು ಮೊದಲಬಾರಿಗೆ ಸಂಘದ ಜಂಟಿಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದಾರೆ.

# ರಿ ಸಮಿತಿ 2011-13 ಪದಾಧಿಕಾರಿಗಳು

: ಡಾ. ಹೆಗಡೆಯವರು ಪ್ರಸ್ತುತ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ
ೆಯಲ್ಲಿ ಪ್ರಾಧ್ಯಾಪಕರಾಗಿ ಕೆಲಸ ಮಾಡುತ್ತಿದ್ದಾರೆ. ಅವರು ವಿದೇಶಾಂಗ
ನೂನು ವಿಭಾಗದಲ್ಲಿ 1996 ರಿಂದ ಕೆಲಸ ಮಾಡಿದ್ದಲ್ಲದೇ, ವಿಶ್ವಸಂಸ್ಥೆ ಹಾಗೂ
ಗಳಲ್ಲೂ ಭಾರತದ ಪರವಾಗಿ ಸಲಹೆಗಾರರಾಗಿ ಕೆಲಸ ಮಾಡಿದ್ದಾರೆ. ಅವರು
ಳು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮನ್ನಣೆ ಪಡೆದಿವೆ. ದೆಹಲಿ ಕನ್ನಡ
ತಿಯ ಸದಸ್ಯರಾಗಿ 2006 ರಿಂದ 2010ರ ವರೆಗೆ ಕೆಲಸ ಮಾಡಿದ ಇವರು
ಾಲೆಯ ಆಡಳಿತ ಮಂಡಳಿಯ ಸದಸ್ಯರಾಗಿದ್ದಾರೆ. ಡಾ. ಹೆಗಡೆಯವರ ಸಣ್ಣ
ಟಕದ ಪ್ರಮುಖ ದೈನಿಕಗಳಲ್ಲಿ, ಮಾಸಿಕಗಳಲ್ಲಿ ಪ್ರಕಟವಾಗಿವೆ. ಅವರ ಕನ್ನಡ
ದೆ. ಅವರು 2007ರ ಪ್ರತಿಷ್ಠಿತ ಪ್ರಜಾವಾಣಿ ದೀಪಾವಳಿ ಕಥಾಸ್ಪರ್ಧೆಯಲ್ಲಿ
ಹಲವಾರು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ವಿಶ್ವವಿದ್ಯಾಲಯಗಳಿಗೆ
ಲಸ ಮಾಡಿರುವ ಅವರು ಇದೀಗ ಅಧ್ಯಕ್ಷರಾಗಿ ಸಂಘದ ಚುಕ್ಕಾಣಿಯನ್ನು
ಯನ್ನು ದೆಹಲಿ ಕನ್ನಡಿಗರು ಪ್ರೀತಿ ಅಭಿಮಾನಗಳಿಂದ ನೀಡಿದ್ದಾರೆ.

### ಸದಸ್ಯರುಗಳು



**ಆಂಜನಿ ಗೌಡ** : ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿಯವರಾದ ಆಂಜನಿ ಗೌಡ ಅವರು ಜನಪ್ರಿಯರು. ಮಾಜಿ ಪ್ರಧಾನಿ ಸನ್ಮಾನ್ಯ ಶ್ರೀ ದೇವೇಗೌಡರ ಆಪ್ತ ಸಹಾಯಕರಾಗಿ ಕೆಲಸ ನಿರ್ವಹಿಸುತ್ತಿರುವ ಇವರು ಉತ್ತಮ ಸಾರ್ವಜನಿಕ ಸಂಪರ್ಕ ಹೊಂದಿದ್ದು ಪ್ರಧಾನಮಂತ್ರಿಗಳ ಕಾರ್ಯಾಲಯದಲ್ಲಿ ಸಮರ್ಥವಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಕನ್ನಡ ನಾಡು, ನುಡಿ, ಸಂಸ್ಕೃತಿಯ ಪರಮ ಅಭಿಮಾನಿಯಾದ ಇವರು ದೆಹಲಿ ಒಕ್ಕಲಿಗ ಗೌಡ ಸಂಘ ಮೊದಲಾದ ದೆಹಲಿಯ ಕನ್ನಡಪರ ಸಂಘಟನೆಗಳ ಸಕ್ರಿಯ ಕಾರ್ಯಕರ್ತರು. ದೆಹಲಿ ಕನ್ನಡಿಗರಿಗೆ ಚಿರಪರಿಚಿತರಾದ ಆಂಜನಿಗೌಡರು ಅತ್ಯಧಿಕ ಬಹುಮತದಿಂದ ಸಂಘದ ಸದಸ್ಯರಾಗಿ ಪುನರಾಯ್ಕೆಯಾಗಿದ್ದಾರೆ.



**ಎಸ್.ಸಿ. ಹೇಮಲತ** : ಕರ್ನಾಟಕದಲ್ಲಿ ಹಲವಾರು ಮಹಿಳಾ ಸ್ವಸಹಾಯ ಸಂಘಗಳನ್ನು ಸ್ಥಾಪಿಸಿ ಅವುಗಳ ಒಕ್ಕೂಟದ ಅಧ್ಯಕ್ಷೆಯಾಗಿ ಕರ್ತವ್ಯ ನಿರ್ವಹಿಸಿದ ಇವರು ಸಮಾಜಸೇವೆಯ ವಿವಿಧ ಪ್ರಕಾರಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡ ಅನುಭವಿ, ಉತ್ಸಾಹಿ ಮಹಿಳೆ. ಅವರ ಹಲವಾರು ಕವನಗಳು, ಲೇಖನಗಳು ನಾಡಿನ ಹಲವು ಪತ್ರಿಕೆಗಳಲ್ಲಿ ಮತ್ತು ಅಭಿಮತದಲ್ಲಿ ಪ್ರಕಟಗೊಂಡಿವೆ. ಹೇಮಲತರವರು ಸಂಘದ ಸಾಹಿತ್ಯಿಕ ಸಮಿತಿ, ಕ್ರೀಡಾ ಸಮಿತಿ ಹಾಗೂ ದೆಹಲಿ ಒಕ್ಕಲಿಗ ಗೌಡ ಸಂಘದ ಉಪಾಧ್ಯಕ್ಷೆಯಾಗಿಯೂ ಯಶಸ್ವಿಯಾಗಿ ಕಾರ್ಯನಿರ್ವಹಿಸಿದ್ದಾರೆ. ಪ್ರಥಮ ಬಾರಿಗೆ ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯೆಯಾಗಿ ಅಧಿಕ ಬಹುಮತಗಳಿಂದ ಆಯ್ಕೆಯಾಗಿದ್ದಾರೆ.



**ಟಿ.ಎಂ. ಮೈಲಾರಪ್ಪ** : ವೃತ್ತಿಯಲ್ಲಿ ಪೋಲೀಸ್, ಪ್ರವೃತ್ತಿಯಲ್ಲಿ ರಂಗ ಕಲಾವಿದರಾದ ಮೈಲಾರಪ್ಪ ಅವರಿಗೆ ಕರ್ನಾಟಕದ ಕಲೆ, ಸಂಸ್ಕೃತಿಯ ಬಗ್ಗೆ ಅಪಾರ ಅಭಿಮಾನ. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ 2006 ರಿಂದ 2010 ರವರೆಗೆ ಕೆಲಸ ಮಾಡಿದ್ದಾರೆ. ದೆಹಲಿ ಪೋಲೀಸ್ ಕಲ್ಯಾಣ ಸಮಿತಿ ಹಾಗೂ ಗಣೇಶ ಮಿತ್ರ ಮಂಡಳಿಯಲ್ಲೂ ಸಕ್ರಿಯವಾಗಿ ಪಾಲ್ಗೊಳ್ಳುವ ಮೈಲಾರಪ್ಪನವರು ಹಲವಾರು ಪ್ರತಿಷ್ಠಿತ ನಾಟಕ ತಂಡಗಳೊಂದಿಗೆ ದೆಹಲಿಯಲ್ಲಿ ಮಾತ್ರವಲ್ಲದೇ ಕರ್ನಾಟಕದಲ್ಲೂ ಅಭಿನಯಿಸಿದ್ದಾರೆ ಹಾಗೂ ಹಲವಾರು ನಾಟಕಗಳನ್ನು ನಿರ್ದೇಶಿಸಿದ್ದಾರೆ. ಅವರು ನಿರ್ದೇಶಿಸಿದ ನಾಟಕಕ್ಕೆ ಸಂಘದ ನಾಟಕ ಸ್ಪರ್ಧೆಯಲ್ಲಿ ಹಲವಾರು ಬಹುಮಾನಗಳೂ ಬಂದಿವೆ. ದೆಹಲಿ ಪೋಲೀಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಮೈಲಾರಪ್ಪನವರು ದೆಹಲಿ ಕರ್ನಾಟಕಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಮತ್ತೊಮ್ಮೆ ಚುನಾಯಿತರಾಗಿದ್ದಾರೆ.



**ಪಿ.ಸಿ. ಶ್ರೀನಿವಾಸ** : ದೆಹಲಿ ಪೋಲೀಸ್ ಇಲಾಖೆಯಲ್ಲಿ ಕಳೆದ 17 ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಶ್ರೀನಿವಾಸ ಅವರು ಕರ್ನಾಟಕದ ಐ.ಎ.ಎಸ್. ಆಕಾಂಕ್ಷಿಗಳ ಮಾರ್ಗದರ್ಶನಕ್ಕೆಂದು ಆರಂಭವಾಗಿರುವ "ದೆಹಲಿ ಕೃಷಿಕ್ ಸರ್ವೋದಯ ಫೌಂಡೇಶನ್"ನ ಜಂಟಿ ಕಾರ್ಯದರ್ಶಿಯಾಗಿ ಹಾಗೂ ದೆಹಲಿ ಒಕ್ಕಲಿಗ ಗೌಡ ಸಮಾಜದ ಜಂಟಿ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಿದ್ದಾರೆ. ಸಾಹಿತ್ಯಪ್ರೇಮಿಯಾದ ಶ್ರೀನಿವಾಸ ಇದೀಗ ಮೊದಲ ಬಾರಿಗೆ ದೆಹಲಿ ಕರ್ನಾಟಕ ಸಂಘದ ಸಮಿತಿಯ ಸದಸ್ಯರಾಗಿ ಆಯ್ಕೆಯಾಗಿದ್ದಾರೆ.



**ಸಿ.ಆರ್. ಶ್ರೀನಿವಾಸ್** : 2006 ರಿಂದ 2010 ರ ವರೆಗೆ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಕೆಲಸ ಮಾಡಿದ್ದಾರೆ. ಶಾಲೆಯ ಪಾಲಕ ಮತ್ತು ಅಧ್ಯಾಪಕರ ಸಮಿತಿಯ ಕಾರ್ಯದರ್ಶಿಯಾಗಿ ಅನುಭವ ಹೊಂದಿರುವ ಶ್ರೀನಿವಾಸ ಅವರು ಪ್ರಸ್ತುತ ಆರೋಗ್ಯ ಮಂತ್ರಾಲಯದಲ್ಲಿ ವಿಭಾಗದ ಮುಖ್ಯಸ್ಥರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಸೇವೆ ಸಲ್ಲಿಸಿದ ಇವರು ಮತ್ತೊಮ್ಮೆ ಆಯ್ಕೆಯಾಗಿದ್ದಾರೆ.



**ಜಿ.ಬಿ. ಹೆಗಡೆ** : ದೆಹಲಿ ಕನ್ನಡ ಶಾಲೆಯಲ್ಲಿ 14 ವರ್ಷ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿರುವ ಶ್ರೀ ಜಿ.ಬಿ.ಹೆಗಡೆ ಅವರು ದೆಹಲಿಯ ಕನ್ನಡಪರ ಸಂಘಟನೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. 1996 ರಿಂದ 2002 ರವರೆಗೆ NCERT ಆಡಳಿತ ಮಂಡಳಿಯ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಪ್ರಸ್ತುತ ನೋಯ್ಡಾದಲ್ಲಿರುವ ಮೈಸೂರಿನ ಪ್ರತಿಷ್ಠಿತ ಜೆ.ಎಸ್.ಎಸ್.ಪಬ್ಲಿಕ್ ಸ್ಕೂಲ್ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇದೀಗ ಮೊದಲ ಬಾರಿಗೆ ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ತಮ್ಮ ಅನುಭವದ ಸೇವೆಯನ್ನು ನೀಡಲು ಮುಂದಾಗಿದ್ದಾರೆ



**ಆನಂದ ಈಶ್ವರಪ್ಪ ಮುರಗೋಡ** : ಕೇಂದ್ರ ರಸ್ತೆ ಸಾರಿಗೆ ಮತ್ತು ರಾಜ ಮಾರ್ಗ ಮಂತ್ರಾಲಯದಲ್ಲಿ ಸಹಾಯಕರಾಗಿ ಕಾರ್ಯ ನಿರ್ವಹಿಸುತ್ತಿರುವ ಆನಂದ ಮುರಗೋಡ ಅವರು ಮೂಲತಃ ಶ್ರೇಷ್ಠ ಕಲಾವಿದ ಮನೆತನದವರು. ರಾಷ್ಟ್ರಮಟ್ಟದ ಹೆಸರಾಂತ ಫೋಟೋಗ್ರಾಫರ್ ಆದ ಇವರಿಗೆ ಮೂರು ಬಾರಿ ರಾಷ್ಟ್ರೀಯ ಪ್ರಶಸ್ತಿ ದೊರೆತಿವೆ. ಇದೀಗ ಮೊದಲ ಬಾರಿಗೆ ದೆಹಲಿ ಕರ್ನಾಟಕ ಸಂಘದ ಸಮಿತಿಯ ಸದಸ್ಯರಾಗಿ ಆಯ್ಕೆಯಾಗಿದ್ದಾರೆ.



**ಬಿ.ನಾರಾಯಣ** : ರಂಗಾಸಕ್ತಿ ಹೊಂದಿರುವ ನಾರಾಯಣ ಅವರು ಕರ್ನಾಟಕ ಭವನದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಕಳೆದ ಕೆಲವು ವರ್ಷಗಳಿಂದ ಸಂಘದ ಕ್ರೀಡಾ ಸಮಿತಿ, ಗಣೇಶ ಮಂಡಳಿ ಮೊದಲಾದ ಕನ್ನಡಪರ ಸಂಘಟನೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿರುವ ಇವರು ಹಲವಾರು ನಾಟಕಗಳಲ್ಲಿನ ತಮ್ಮ ಉತ್ತಮ ಅಭಿನಯದಿಂದ ಚಿರಪರಿಚಿತರು. ಇದೇ ಮೊದಲಬಾರಿಗೆ ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಬಂದಿರುವ ಉತ್ಸಾಹಿ ತರುಣ.

# ಜಂಟಿ ಕಾರ್ಯಕಾರಿ ಸಮಿತಿ ಸಭೆ

ಸಂಘದ ಅಧಿಕಾರ ಹಸ್ತಾಂತರದ ಜಂಟಿ ಸಮಿತಿ ಸಭೆ ಜನವರಿ 16ರಂದು ವಸಂತ ಶೆಟ್ಟಿ ಬೆಳ್ಳಾರೆಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಭೆಯಲ್ಲಿ ಹಾಜರಿದ್ದ ಹಳೆಯ ಹಾಗೂ ಹೊಸ ಸಮಿತಿಯ ಪದಾಧಿಕಾರಿಗಳೆಲ್ಲರನ್ನು ಸ್ವಾಗತಿಸಿ, ಶಾಂತ ರೀತಿಯಲ್ಲಿ ಚುನಾವಣೆ ನಡೆಯಲು ಸಹಕರಿಸಿದ ಎಲ್ಲರಿಗೂ ಕೃತಜ್ಞತೆ ಹಾಗು ನೂತನವಾಗಿ ಆಯ್ಕೆಯಾದ ಸಂಘದ ಪದಾಧಿಕಾರಿಗಳಿಗೆ ಅಭಿನಂದನೆಯನ್ನು ವ್ಯಕ್ತಪಡಿಸಿದರು. ಸಂಘದಲ್ಲಿ ಕಳೆದೆರಡು ವರ್ಷಗಳಲ್ಲಿ ಕಾರ್ಯ ನಿರ್ವಹಿಸಲು ಸಹಕಾರ ನೀಡಿದ ಎಲ್ಲರನ್ನೂ ಸ್ಮರಿಸುತ್ತಾ ಸಾಧ್ಯವಾದ ಕೆಲಸಗಳನ್ನು ಮಾಡಲಾಗಿದ್ದು ಮುಂದಿನ ದಿನಗಳಲ್ಲಿ ಸಂಘದಲ್ಲಿ ಆಗಬೇಕಾದ ಕೆಲಸಗಳ ವಿವರವನ್ನಿತ್ತರು. ವಸಂತ ಶೆಟ್ಟಿ ಬೆಳ್ಳಾರೆಯವರು ಡಾ.ವೆಂಕಟಾಚಲ ಹೆಗಡೆಯವರಿಗೆ ಅಧಿಕಾರ ಹಸ್ತಾಂತರಿಸಿ ಸಂಘಕ್ಕೆ ಬರಬೇಕಾದ ಹಾಗೂ ಕೊಡಬೇಕಾದ ಆರ್ಥಿಕ ವಿವರಗಳನ್ನು ನೀಡಿದರು. ಆರ್.ರೇಣುಕುಮಾರ್ ಅವರು ಹೊಸ ಸಮಿತಿಯನ್ನು ಅಭಿನಂದಿಸುತ್ತಾ ಸಂಘದ ಪ್ರಗತಿಪರ ಚಟುವಟಿಕೆಗಳಿಗೆ ತಾವು ನಿರಂತರವಾಗಿ ಸಹಕಾರ ನೀಡುವುದಾಗಿ ತಿಳಿಸಿದರು. ಅಧಿಕಾರ ಸ್ವೀಕರಿಸಿ ಮಾತನಾಡಿದ ಅಧ್ಯಕ್ಷ ಡಾ.ವೆಂಕಟಾಚಲ ಹೆಗಡೆಯವರು ಹಿಂದಿನ ಸಮಿತಿ ಮಾಡಿರುವ ಒಳ್ಳೆಯ ಕೆಲಸಗಳನ್ನು ಶ್ಲಾಘಿಸಿ ಹೊಸ ಸಮಿತಿ ಸಾಧ್ಯವಾಗುವ ಎಲ್ಲಾ ಕೆಲಸ ಕಾರ್ಯಗಳನ್ನು ಮಾಡುವುದಾಗಿ ಹೇಳಿದರು. ಹೊಸ ಸಮಿತಿಯನ್ನು ಸ್ವಾಗತಿಸುತ್ತಾ ಹೊರ ಹೋಗುತ್ತಿರುವ ಸಮಿತಿಯ ಸಂಪೂರ್ಣ ಸಹಕಾರವನ್ನು ಡಾ.ವೆಂಕಟಾಚಲ ಹೆಗಡೆಯವರು ಕೋರಿದರು. ಕಾರ್ಯದರ್ಶಿ ಶ್ರೀ ಸಿ.ಎಂ.ನಾಗರಾಜ ಅವರು ಧನ್ಯವಾದ ಸಲ್ಲಿಸುವುದರೊಂದಿಗೆ ಸಭೆ ಮುಕ್ತಾಯಗೊಂಡಿತು.



ಚುನಾವಣಾ ಅಧಿಕಾರಿಯಾಗಿ ಸಹಕರಿಸಿದ ಶ್ರೀ ಕೆ. ಈಶ್ವರ ಭಟ್ ಅವರನ್ನು ಅಭಿನಂದಿಸುತ್ತಿರುವುದು

# ದೆಹಲಿಯಲ್ಲಿ ಕುವೆಂಪು ಉತ್ಸವ



ನೂತನ ಕಾರ್ಯಕಾರಿ ಸಮಿತಿ ಅಧಿಕಾರ ಸ್ವೀಕರಿಸಿದ ನಂತರದ ಮೊದಲ ಭೇಟಿ ಕರ್ನಾಟಕದಿಂದ ಆಗಮಿಸಿದ್ದ ಸಾಹಿತಿಗಳಾದ ಹಂಪನಾ ಹಾಗೂ ಪ್ರೊ.ಎಂ.ಎಚ್. ಕೃಷ್ಣಯ್ಯ ಅವರೊಡನೆ. ಕುವೆಂಪು ಭಾಷಾ ಭಾರತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಹಾಗೂ ಕುವೆಂಪು ಪ್ರತಿಷ್ಠಾನಗಳ ಸಹಯೋಗದೊಂದಿಗೆ ಏಪ್ರಿಲ್‌ನಲ್ಲಿ 3 ದಿನಗಳ ಕುವೆಂಪು ಉತ್ಸವವನ್ನು ಹಮ್ಮಿಕೊಳ್ಳುವ ಯೋಜನೆ ಕುರಿತಾಗಿ ಕುವೆಂಪು ಪ್ರತಿಷ್ಠಾನದ ಅಧ್ಯಕ್ಷ ಡಾ.ಹಂಪನಾ ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಪ್ರೊ.ಎಂ.ಎಚ್. ಕೃಷ್ಣಯ್ಯ ಅವರು ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯ ಜೊತೆ ಚರ್ಚಿಸಿದರು. ರಾಷ್ಟ್ರಕವಿ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕುವೆಂಪು ಅವರನ್ನು ರಾಷ್ಟ್ರದ ರಾಜಧಾನಿಯ ಕನ್ನಡೇತರರರಿಗೂ ಪರಿಚಯಿಸುವ ಯೋಜನೆ ಕುರಿತಂತೆ ತಮ್ಮ ವಿಚಾರಗಳನ್ನು ಮುಂದಿಟ್ಟು ದೆಹಲಿ ಕರ್ನಾಟಕ ಸಂಘದ ಸಹಕಾರವನ್ನು ಕೋರಿದರು. ಖ್ಯಾತ ಲೇಖಕ, ನಾಟಕಕಾರ ಪ್ರೊ.ಎಚ್.ಎಸ್.ಶಿವಪ್ರಕಾಶ್, ದೆಹಲಿ ವಿಶ್ವವಿದ್ಯಾಲಯದ ಪ್ರೊ.ಟಿ.ಎಸ್.ಸತ್ಯನಾಥ್, ದೆಹಲಿಯ ಕರ್ನಾಟಕ ಸರ್ಕಾರದ ಹೆಚ್ಚುವರಿ ವಿಶೇಷ ಪ್ರತಿನಿಧಿಯಾಗಿರುವ ಬೈಕೆರೆ ನಾಗೇಶ್ ಹಾಗೂ ಜಾನಪದ ವಿದ್ವಾಂಸ, ಅಮೇರಿಕನ್ ಇನ್ಸ್‌ಟಿಟ್ಯೂಟ್ ಆಫ್ ಇಂಡಿಯನ್ ಸ್ಟಡೀಸ್ ನಿರ್ದೇಶಕ ಡಾ.ಪುರುಷೋತ್ತಮ ಬಿಳಿಮಲೆ ಅವರುಗಳು ಭಾಗವಹಿಸಿ ಕುವೆಂಪು ಉತ್ಸವ ಆಚರಣೆಯ ಕುರಿತಾಗಿ ಪರಸ್ಪರ ವಿಚಾರ ವಿನಿಮಯ ಮಾಡಿಕೊಂಡರು. ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷರಾದ ಡಾ.ವೆಂಕಟಾಚಲ ಹೆಗಡೆ ಅವರು ಸಂಘದಿಂದ ಸಂಪೂರ್ಣ ಸಹಕಾರ ನೀಡುವುದಾಗಿ ಭರವಸೆ ನೀಡಿದರು.

ಲೇಖನ

# ಚುನಾವಣಾ ಪರಸಂಗ

ಸಂಘದ ಕಾರ್ಯಕಾರಿ ಸಮಿತಿಯ ಚುನಾವಣೆ ಯಾವಾಗಂತೆ ಅಂತ ಒಬ್ಬರಿಗೊಬ್ಬರು ಸಿಕ್ಕಾಗ ಮಾತನಾಡುತ್ತಿದ್ದ ಮಾತಿಗೆ ಜನವರಿ ಒಂಭತ್ತರಂದು ದಿನಾಂಕ ನಿಗದಿಯಾಯ್ತು. ಚುನಾವಣಾ ಪರಸಂಗಕ್ಕೆ ಮೂಲ ಈ ಬಾರಿಯ ಚುನಾವಣೆಯಲ್ಲಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದು, ಚುನಾವಣಾ ಪ್ರಚಾರಕ್ಕಾಗಿ ಮತ ಕೇಳಲು ಪರಿಚಯದವರಲ್ಲಿ ಹಾಗೂ ಸಂಘದ ಸದಸ್ಯರುಗಳಿಗೆ ದೂರವಾಣಿ ಕರೆ ಮೂಲಕ ಶುರು ಆಯ್ತು ನೋಡಿ.

ಮೊದಲನೆಯ ದಿನ ಒಬ್ಬರಿಗೆ ಕರೆ ಮಾಡಿ "ಹಲೋ" ಎಂದೆ. ಆ ಕಡೆಯಿಂದ "ರೀ ಯಾರ್ರೀ" ಅಂದ್ರು. ಅವರು ಕೇಳಿದ ರೀತಿಲಿ ಸಿಟ್ಟಿನಲ್ಲಿದ್ದರು ಅನ್ಸುತ್ತೆ. ನಾನು ನನ್ನ ಪರಿಚಯ ಹೇಳಿದಾಗ "ಸರಿ ಏನಾಗ್‌ಬೇಕು" ಅಂದ್ರು. ದೆಹಲಿ ಕರ್ನಾಟಕ ಸಂಘದ ಚುನಾವಣೆ ನಡೀತಿದೆಯಲ್ಲ ಅದರ ಬಗ್ಗೆ ಮಾತಾಡ್‌ಬೇಕು ಅಂತಿದ್ದ ಹಾಗೆ ಅವರು "ರೀ ಸರಿಯಾಗಿ ನಮಗೆ 3-4 ತಿಂಗಳಿಂದ ಅಭಿಮತ ಬರ್‍ತಿಲ್ಲ, ಕಾರ್ಯಕ್ರಮದ ಬಗ್ಗೆಯೂ ತಿಳಿತಿಲ್ಲ, ನಿಮ್ಮಗಳ ಎಲೆಕ್ಷನ್ ಬಗ್ಗೆ ನಮಗ್ಯಾಕೆ ತಿಳಿಬೇಕು, ಮೊದ್ಲು ನಮಗೆ ಸರಿಯಾಗಿ ಅಭಿಮತ ಸಿಗ್ಲಿ" ಅಂತಾನೇ ಫೋನ್ ಕಟ್ಟಾಯಿತು, ಮಾತು ಪೂರ್ಣ ಆಗ್‌ಅಲ್ಲವಲ್ಲ ಅಂತ ಮತ್ತೆ ಮಾಡಿದೆ. ಅದಕ್ಕೆ ಅವರು ಅಭಿಮತ ಬರಲಿ ನಿಮ್ಮ ಗುಂಪಿಗೇ ಓಟ್ ಹಾಕ್ತೀವಿ ಅಂತ್ಹೇಳಿ ಇಟ್ಬಿಟ್ರು. ನನಗೋ ಇದು ಮೊದಲ ಚುನಾವಣೆ, ಜೊತೆಗೆ ಹೊಸ ಅನುಭವ. ಅದರಲ್ಲೂ ಮೊದಲನೆಯ ಕರೆ ಬೇರೆ ಹೀಂಗಾಂದ್ರಲ್ಲ ಅಂತ ಚಿಂತೆ ಆಯ್ತು. ಇರ್‍ಲಿ ಅಂತ್ಹೇಳಿ ಮತ್ತೊಬ್ಬರಿಗೆ ಕರೆ ಮಾಡಿದೆ. ಇವರೇನಂತರರೋ ನೋಡಣ ಅಂತ, ಆ ಕಡೆ ಫೋನ್ ತೆಗಿತಿದ್ದ ಹಾಗೆ "ಹಲೋ" ಅಂದ್ರು, "ನಮಸ್ಕಾರ ಸಾರ್" ಅಂತ ಹೆಸರ್‍ಹೇಳಿದೆ. ಅವರಿಗೆ ಸ್ವಲ್ಪ ಕಿವಿ ಕೇಳ್ಸ್‌ತಿರ್‌ಅಲ್ಲ ಅನ್ಸುತ್ತೆ. ಮಮತಾನೇ ಅಂದ್ರು, ಮತ್ತೆ ನನ್ನ ಹೆಸರು ಹೇಳಿ ಚುನಾವಣೆ ಬಗ್ಗೆ ತಿಳಿಸಿ ನಮ್ಮ ತಂಡಕ್ಕೆ ನಿಮ್ಮ ಸಹಕಾರ ಬೆಂಬಲ ನೀಡಿ ಸಾರ್ ಅಂದೆ, "ಏನ್ ತಂಡಗಳೋ ಏನೋ ಹಿಂದಿನವರು ಮಾಡಿದ ಸುದ್ದಿಯೇ ಇಲ್ಲ, ತಂಡ ಅಂತೆ ತಂಡ. ಯಾರೂ ಏನೂ ಮಾಡೋದಿಲ್ಲ, ನೋಡಣ ಬರಕ್ಕಾದ್ರೆ ಬರ್‍ತಿನಿ" ಅಂತ ಫೋನ್ ಇಟ್ರು. ಎರಡನೆಯ ಕರೆ ಹೀಗಾಯ್ತು ನಾನು ಇನ್ನು ಓಟು ಕೇಳಿದ ಹಾಗೇನೆ, ಯಾಕೋ ಇವತ್ತು ಶುರು ಮಾಡಿದ ಘಳಿಗೆಯೇ ಸರಿ ಇಲ್ಲವೇನೋ ಕಾಣೆ, ಇನ್ನೊಂದು ಮಾಡಿ ನೋಡೋಣ, ಅದೂ ಸರಿ ಹೋಗ್‌ಅಲ್ಲ ಅಂದ್ರೆ ಮೂರನೆಯದಕ್ಕೆ ಇವತ್ತಿಗೆ ಮುಕ್ತಾಯ ಅಂದ್‌ಕೊಂಡು ಕರೆ ಮಾಡಿದೆ. ಆ ಕಡೆಯಿಂದ ಹಲೋ ಎನ್ನುತ್ತಿದ್ದ ಹಾಗೆ "ನಮಸ್ಕಾರ ಸಾರ್ ದೆಹಲಿ ಕರ್ನಾಟಕ ಸಂಘದ ಚುನಾವಣೆ ಇದೆ" ಅಂತಿದ್ದ ಹಾಗೆ ಹೌದಾ ಯಾವಾಗ? ನಮಗೆ ಇದರ ಬಗ್ಗೆ ಇನ್ನೂ ಮಾಹಿತಿ ಬಂದಿಲ್ಲ ಅಂತ ವಿವರವಾಗಿ ಕೇಳಿ ತಿಳ್‌ಕೊಂಡ ನಂತರ "ಖಂಡಿತ ಬರ್‍ತೀವಿ. ವಿಷಯ ತಿಳಿಸಿದ್ದು ಒಳ್ಳೆಯದಾಯ್ತು. ಆಲ್ ದ ಬೆಸ್ಟ್" ಅಂತ್ಹೇಳಿ ಇಟ್ರು. ಅಂತು ಇವರಾದ್ರೂ ಇಷ್ಟು ಮಾತಾಡಿದ್ರಲ್ಲ ಅಂತ ಸಮಾಧಾನದ ಜೊತೆಗೆ ಖುಷಿಯಾಯ್ತು.

ಮತ್ತೊಂದು ದಿನ ಕರೆ ಮಾಡುವುದರಲ್ಲಿ ನಿರತಳಾಗಿದ್ದಾಗ ಆ ಕಡೆಯಿಂದ ಹಿಂದಿಯಲ್ಲಿ ಉತ್ತರ ಬಂತು. ಸರಿ ನಾನು ಮಾಮೂಲಿನಂತೆ ನನ್ನ ಪರಿಚಯ ಹೇಳಿ ಹೇಳ್‌ಬೇಕಾದ್ದು ಹೇಳಿ ಮುಗಿಸಿದ ಮೇಲೆ ಅಲ್ಲೀವರೆಗೂ ಎಲ್ಲಾ ಕೇಳ್‌ಕೊಂಡ ಆಸಾಮಿ ತಣ್ಣಗೆ "ಆಪ್ ಕ್ಯಾ ಬೋಲಾ, ಮೈ ಸಮ್‌ಜಾ ನಹೀ" ಅಂದ್ರು. ಮೊದಲೇ ದೆಹಲಿಯ ಚಳಿಯಲ್ಲಿ ಫೋನ್ ಮಾಡ್ತಾ ಕೂತಿದ್ದವಳು ವ್ಯಕ್ತಿಯ ಮಾತಿಂದ ಥಂಡಾ ಹೊಡೆದು ಸುಮಾರು ಹೊತ್ತು ತಣ್ಣಗೆ ಕುಳಿತೆ. ಇನ್ನೊಂದು ದಿನವೂ ಹೀಗೆ ಫೋನ್ ಮಾಡಿದಾಗ ಆ ಕಡೆಯಿಂದ ಕೌನ್ ಅಂತ ಕೇಳಿದ್ರು ಅದಕ್ಕೆ ಪ್ರತ್ಯುತ್ತರವಾಗಿ (ಅನುಭವ ಆಗಿತ್ತಲ್ಲ) ಹಿಂದಿಯಲ್ಲೇ ನನ್ನ ಮಾತು ಶುರು ಮಾಡಿ ಅವರಿಗೂ ನನ್ನ ಬಗ್ಗೆ ಚುನಾವಣೆ ಬಗ್ಗೆ ಹೇಳುವುದನ್ನೆಲ್ಲಾ ಹೇಳಿದೆ. ನಾಲ್ಕೈದು ದಿನಗಳಿಂದಾದ ಅನುಭವದಿಂದ ತಿಳಿದ ವಿಚಾರ ನಮ್ಮವರು ಇಲ್ಲಿಯವರನ್ನು ಮದುವೆಯಾಗಿ ಅವರುಗಳನ್ನು ಸಂಘದ ಸದಸ್ಯರನ್ನಾಗಿ ಮಾಡಿರುವ ವಿಚಾರ ತಿಳಿದಿತ್ತು. ಅವರುಗಳು ಹಿಂದಿಯಲ್ಲೇ ಮಾತನಾಡುತ್ತಿದ್ದರಿಂದ ನಾನು ಸಹ ಆ ವ್ಯಕ್ತಿ ಬಳಿ ಇಲ್ಲಿಯವರೆಂದು ತಿಳಿದು ಮಾತಾಡಿದೆ. ಆತ ಕೂಡ ಸಿಟ್ಟಾಗಿ ಎಲೆಕ್ಷನ್ ಯಾವಾಗ ಎಲ್ಲಿ ಅಂತೆಲ್ಲಾ ಕೇಳಿ ತಿಳ್‌ಕೊಂಡು ಕೊನೇಲಿ ಗಲತ್ ನಂಬರ್ ಲಗಾಯಿ ಹೈ ಅಂತ ಹೇಳಿ ನನ್ನ ಬೆಪ್ಪು ಹಿಡಿಸಿದ ಪುಣ್ಯಾತ್ಮ. ಮುಂದೆ ಕರೆ ಮಾಡಿದಾಗ ಇನ್ನೂ ಸರಿಯಾಗಿ ವಿಚಾರಿಸಿದ ಮೇಲೆ ಮುಂದಕ್ಕೆ ಮಾತಾಡ್‌ಬೇಕು ಅಂದ್‌ಕೊಂಡೆ. ಇದಕ್ಕೆ ಕಾರಣ ಫೋನ್ ಸಂಖ್ಯೆಯ ಬದಲಾವಣೆ. ಸದಸ್ಯರುಗಳ ಹಳೇ ನಂಬರ್ ಬದಲಾದ ಬಗ್ಗೆ ಸಂಘಕ್ಕೆ ಮಾಹಿತಿ ಇರೋದಿಲ್ಲ. ಇದ್ದ ನಂಬರಿಗೆ ಮಾಡಿದಾಗ ನನಗಾದ ಅನುಭವ ಬೇರೆಯವರಿಗೂ ಆಗುತ್ತೆ.

ಹಿಂದಿನ ಅನುಭವದಿಂದ ಕರೆ ಮಾಡಿದವರು ಅವರೇ ಎಂದು ಖಚಿತ ಪಡಿಸಿಕೊಂಡು ಮಾತನಾಡಲು ಶುರು ಮಾಡುತ್ತಿದ್ದೆ. ಹೀಗೆ ಒಬ್ಬರಿಗೆ ಕರೆ ಮಾಡಿ ಮಾತಾಡುವಾಗ ಅವರಿಗೆ ನನ್ನ ಪರಿಚಯ, ಚುನಾವಣೆ ಬಗ್ಗೆ ತಿಳಿಸಿದೆ. "ಅವರು ನೀವು ಈಗ ಹೇಳಿದಾಗಲಷ್ಟೇ ನಮಗೆ ಗೊತ್ತಾಗಿದ್ದು, ಮೊದಲೆಲ್ಲಾ ಸಂಘದ ಕಾರ್ಯಕ್ರಮಗಳಿಗೆ ತಪ್ಪದೇ ಬರ್‍ತಿದ್ವಿ, ಆದ್ರೆ ಈಗ ನಮಗೆ ತುಂಬಾ ದಿನಗಳಿಂದ ಸಂಘದ ಯಾವ ವಿಷಯವೂ ತಿಳಿತಿಲ್ಲ, ಅಲ್ಲದೆ ಊರಿಂದ ದೂರ ಇರುವುದರಿಂದ ಸಂಘದ ಕಾರ್ಯಕ್ರಮಗಳೇ ನಮಗೆ ನಮ್ಮವರ ಜೊತೆ ಬೆರೆಯಲು ಕಲೆಯಲು ಸಹಕಾರಿ, ಮುಂದಾದ್ರು ದಯವಿಟ್ಟು ನಮಗೆ ಸಂಘದ ಕಾರ್ಯಕ್ರಮಗಳ ಬಗ್ಗೆ ನೀವು ತಿಳಿಸಿದರೆ ಸಾಕು, ಒಳ್ಳೆದಾಗಲಿ ನಿಮಗೆ" ಅಂತ ಶುಭ ಹಾರೈಸಿ, ಸಂಘದ ವೆಬ್ ಸೈಟ್‌ನಲ್ಲೂ ಹಾಕಬಹುದಲ್ವಾ ಅಂತ್ಹೇಳಿ ಕಟ್ ಮಾಡಿದ್ರು.

ಮತ್ತೊಬ್ಬರಿಗೆ ಕರೆ ಮಾಡಿದಾಗ ಅವರ ಬಳಿಯೂ ಚುನಾವಣೆ, ಬಗ್ಗೆ ತಿಳಿಸಿ ಮಾತಾಡ್‌ತಿದ್ದೆ. ಅವರಂದ್ರು ನಿಮ್ಮ ಸಂಘದ ವೆಬ್‌ಸೈಟ್‌ನಲ್ಲಿ ಏನೂ ಬದಲಾವಣೆ ಇಲ್ಲ ಹಾಗೇ ಇದೆ, ಇನ್ನೂ ಚೆನ್ನಾಗಿ ಮಾಡಲು ಪ್ರಯತ್ನ ಮಾಡ್‌ಬಹುದಲ್ಲ ಈಗಲಾದ್ರು ಅಂತಂದು ಚುನಾವಣೆ ಎಷ್ಟು ಗಂಟೆ ಹೊತ್ತಿಗೆ ಕೊನೆ ಅಂತ ತಿಳಕೊಂಡು ಇಟ್ರು. ಹೀಗೆ ಮತ್ತೊಬ್ಬರು ನಿಮ್ಮ ಅಜೆಂಡಾ ಏನು ಅಂತ ಕೇಳಿ ತಿಳ್‌ಕೊಂಡ್ರು.

ಉಪಾಧ್ಯಕ್ಷೆ ಮತ್ತು ಸದಸ್ಯತ್ವಕ್ಕೆ ಒಂದೇ ಹೆಸರಿನ ನಾವು ಇಬ್ಬರು ನಿಂತಿದ್ದರಿಂದ ಕೆಲವರು ಇಬ್ಬರನ್ನೂ ಒಬ್ಬರೇ ಎಂದು ತಿಳಿದು ಮಾತಾಡ್‌ತಿದ್ರು. ಕರೆ ಮಾಡಿದ ಮೇಲೆ ನನ್ನನ್ನೇ ಅವರೆಂದು ತಿಳಿದು ಪರಿಹಾರ ಕೇಳ್‌ತಿದ್ರು.

ಅಂತೂ ದೂರವಾಣಿ ಕರೆಗೆ ಮುಕ್ತಾಯ ಹಾಡುವ ದಿನವೂ ಬಂತು. ಆ ದಿನದ ಅನುಭವ ಬೇರೆ ರೀತಿಯದೇ ಆಗಿತ್ತು. ಕೊನೆಯ ದಿನದ ಮೊದಲ ಕರೆ ಮಾಡಿದೆ. ಆ ಕಡೆಯಿಂದ ಫೋನ್ ಎತ್ತಿದ್ದು ಕೇಳಿ "ಹಲೋ" ಎನ್ನಬೇಕು ಎನ್ನುವಷ್ಟರಲ್ಲಿ ಬೈಗುಳಗಳು ಕಿವಿಗೆ ಬಿದ್ವು. ಇದೇನಪ್ಪ ಯಾರೂ ಏನೂ ಅಂತನೂ ಕೇಳ್‌ಅಲ್ಲ ಮೊದಲೇ ಬೈತಿದಾರಲ್ಲ ಅಂತ ಯೋಚ್ನೆಗೆ ಬಿದ್ದೆ. ಅಷ್ಟರಲ್ಲಿ ಅವರು ಹಾಗೇ ಯಾರು ಅಂದ್ರು. (ಸಮಾಧಾನ ಆಯ್ತು ನನಗಲ್ಲ ಬೈದಿದ್ದು ಬೇರಾರಿಗೋ ಅಂತ) ನಾನು ನನ್ನ ಪರಿಚಯ ಮತ್ತು ಚುನಾವಣೆ ಬಗ್ಗೆ ತಿಳಿಸಿ ಆವತ್ತು ಬರಬೇಕೆಂದು ವಿನಂತಿಸಿದೆ. ನಂತರ ಅವರಂದ್ರು, ಮಗಳಿಗೆ ಬೈತಿದ್ದೆ ಹಾಗೆ ಫೋನ್ ಎತ್ತಿದೆ, ಬೈಗುಳಗಳು ನಿಮಗೆ ಕೇಳ್ಸಿ ಏನಂದ್‌ಕೊಂಡ್ರೋ ಏನೋ? ಸಾರಿ ಅಂದ್ರು.

ಹೀಗೆ ಡಿಸೆಂಬರ್ ಇಪ್ಪತ್ತೇಳರಿಂದ ಶುರುವಾದ ನನ್ನ ಮತ್ತು ಸಂಘದ ಸದಸ್ಯರುಗಳ ದೂರವಾಣಿ ಸಂಭಾಷಣೆ ಜನವರಿ ಏಳರವರೆಗೂ ಸಂತೋಷ, ಹಾಸ್ಯ, ದುಃಖ, ಬೇಸರ, ಬೇಸ್ತು ಬೀಳಿಸುವರೆಗೆ ನಡೆದಿತ್ತು. ಪ್ರಥಮ ಬಾರಿಗೆ ಎಲ್ಲ ಸದಸ್ಯರುಗಳೊಂದಿಗಿನ ಸಂಭಾಷಣೆ, ಹಾರೈಕೆ, ಆಶೀರ್ವಾದ, ಸಲಹೆ ಸಹಕಾರಗಳನ್ನು ಪಡೆಯುವ ಸದವಕಾಶವನ್ನು ತಂದೊದಗಿಸಿತ್ತಲ್ಲದೆ ಮುಂದೇನು ಮಾಡಬಹುದು ಎನ್ನುವ ಮಾರ್ಗದರ್ಶನ ಮತ್ತು ಹಲವು ಅನುಭವವನ್ನು ಗಳಿಸಿಕೊಟ್ಟಿತು, ಈ ಚುನಾವಣಾ ಪರಸಂಗಗಳು.

❑ **ಎಸ್.ಸಿ. ಹೇಮಲತ**

# ‘ವಿಕಿಪೀಡಿಯ’ದ ಹರಿಪ್ರಸಾದ್ ನಾಡಿಗ್ ಅವರೊಂದಿಗೆ ಸಂವಾದ



ವಿಕಿಪೀಡಿಯಾ ಡಾಟ್ ಕಾಮ್ ತನ್ನ ಹತ್ತನೇ ವಾರ್ಷಿಕೋತ್ಸವವನ್ನು ಜನವರಿ ಹತ್ತರಂದು ವಿಶ್ವದೆಲ್ಲೆಡೆ ಆಚರಿಸಲಾಯಿತು. ದೇಶದೆಲ್ಲೆಡೆ ವಿಕಿಪೀಡಿಯಾದ ಬಗ್ಗೆ ಜಾಗೃತಿ ನಡೆಸಲು ವಿವಿಧ ಪ್ರದೇಶಗಳಲ್ಲಿ ಚರ್ಚಾ ಕೂಟ ನಡೆಯುತ್ತಿರುವಾಗ ವಿಕಿ ಪೀಡಿಯಾದ ಬಳಗವು ದೆಹಲಿಗೂ ಆಗಮಿಸಿತ್ತು. ಈ ಸಂದರ್ಭದಲ್ಲಿ ಅದರ ಭಾರತೀಯ ವ್ಯವಸ್ಥಾಪಕ ಸದಸ್ಯರಾಗಿರುವ ಕನ್ನಡಿಗ ಹರಿಪ್ರಸಾದ್ ನಾಡಿಗ್ ಅವರ ಜೊತೆ ಒಂದು ಭೇಟಿ ಕಾರ್ಯಕ್ರಮ ಜನವರಿ 18ರಂದು ದೆಹಲಿ ಕರ್ನಾಟಕ ಸಂಘದಲ್ಲಿ ನಡೆಯಿತು. ಅಂದು ನಡೆದ ಹರಟೆ ಕಾರ್ಯಕ್ರಮದಲ್ಲಿ ದೆಹಲಿಯ ಕನ್ನಡಿಗರೊಂದಿಗೆ ಕನ್ನಡವನ್ನು ವಿಕಿಪೀಡಿಯದಲ್ಲಿ ಹೇಗೆ ಅಳವಡಿಸುವುದು, ವಿಕೀಪೀಡಿಯಾವನ್ನು ಕನ್ನಡ ಭಾಷೆಯಲ್ಲಿ ಆರಂಭಿಸಿದ ಹಿನ್ನಲೆ, ಬೆಳವಣಿಗೆಯ ಕುರಿತು ನಾಡಿಗ್ ಅವರು ವಿವರ ನೀಡಿದರು.

ವಿಕಿಪೀಡಿಯ ಅಂತರ್ಜಾಲದಲ್ಲಿರುವ ಒಂದು ಮುಕ್ತ ವಿಶ್ವಕೋಶ. ಇದು ಅನೇಕ ಓದುಗರ, ಸದಸ್ಯರ ಸಹಯೋಗದಿಂದ ಒಟ್ಟಾಗಿ ಬರೆಯಲ್ಪಡುತ್ತಿರುವ ವಿಶ್ವಕೋಶ. ಜನವರಿ 2001 ರಂದು ಜಿಮ್ಮಿ ವೇಲ್ಸ್ ಮತ್ತು ಲಾರ್ರಿ ಸೇಂಗರ್ ಆರಂಭಿಸಿದ ವಿಕಿಪೀಡಿಯ 262 ವಿವಿಧ ಭಾಷೆಗಳಲ್ಲಿ ಆವೃತ್ತಿಗಳನ್ನು ಹೊಂದಿರುವ ವಿಶ್ವಕೋಶಗಳ ಸಮೂಹವಾಗಿದ್ದು ಈಗ ವಿಕಿಮೀಡಿಯ ಫೌಂಡೇಷನ್ ನಿಂದ ಪ್ರಾಯೋಜಿಸಲ್ಪಟ್ಟಿದೆ. ಇದು ಸಾಂಪ್ರದಾಯಿಕ ವಿಶ್ವಕೋಶಗಳ ಲೇಖನಗಳ ವಿಷಯಗಳ ಮೇಲೆ ಹಾಗೂ ಪ್ರಚಲಿತ ವಿದ್ಯಮಾನಗಳ ಬಗೆಗೆ ಲೇಖನಗಳನ್ನು ಒಳಗೊಂಡ ವಿಕಿಗಳ ಸಮೂಹವಾಗಿದೆ.

ವಿವಿಧ ಭಾಷೆಗಳಲ್ಲಿ ಲಭ್ಯವಿರುವ ವಿಕಿಪೀಡಿಯ ಈಗ ಹಲವು ವಿದೇಷಿ ಭಾಷೆಗಳಲ್ಲಿ ಮಾತ್ರವಲ್ಲದೆ ಅನೇಕ ಭಾರತೀಯ ಭಾಷೆಗಳಲ್ಲಿ ಕೂಡ ಲಭ್ಯವಿದೆ. ಕನ್ನಡ ವಿಕಿಪೀಡಿಯವು ಸೆಪ್ಟೆಂಬರ್ 2004 ರಲ್ಲಿ ಆರಂಭವಾಯಿತು.

ವಿಕಿಪೀಡಿಯ ಅನ್ಯ ವಿಶ್ವಕೋಶಗಳಿಂದ ಬೇರೆಯಾಗಿದ್ದು, ಇದನ್ನು ಸದಸ್ಯರು ಮಾತ್ರವಲ್ಲದೆ ಯಾವುದೇ ಓದುಗರು ಕೂಡ ಸಂಪಾದಿಸಬಹುದು. ಸಂಪಾದಿಸಿದ ಲೇಖನಗಳು ಓದುಗರಿಗೆ ತಕ್ಷಣವೇ ಕಾಣಸಿಗುತ್ತದೆ. ಅದಲ್ಲದೆ ಒಂದು ವಿಷಯುವನ್ನು ಪ್ರತಿ ಬಾರಿ ಸಂಪಾದಿಸಿದಾಗಲೂ ಆ ವಿಷಯ ಪುಟದ ಬದಲಾವಣೆಗಳು “ಇತಿಹಾಸ” ಪುಟದಲ್ಲಿ ದಾಖಲಾಗುತ್ತದೆ. ಇದರಿಂದಾಗಿ ಯಾವುದೇ ಹಿಂದಿನ ಮತ್ತು ಅದರ ನಂತರದ ಆವೃತ್ತಿಯ ಬದಲಾವಣೆಗಳನ್ನು ನೋಡಬಹುದು ಹಾಗು ಅವಶ್ಯವಿಲ್ಲದ ಬದಲಾವಣೆಗಳನ್ನು ತೆಗೆದುಹಾಕಬಹುದು. “ಚರ್ಚೆ” ಪುಟಗಳು ಹಲವು ಸಂಪಾದಕರ ಕೆಲಸಗಳನ್ನು ಸರಿಯಾಗಿ ರಚಿಸಲು ಸಹಕರಿಸುತ್ತದೆ. ಕನ್ನಡ ವಿಕಿಪೀಡಿಯ ಪ್ರತಿಯೊಬ್ಬರೂ ಬಳಸಬಲ್ಲ, ಸಂಪಾದಿಸಬಲ್ಲ ಮುಕ್ತ ಕನ್ನಡ ವಿಶ್ವಕೋಶ.

ಹರಿಪ್ರಸಾದ್ ನಾಡಿಗ್ ಅವರ ಜೊತೆ ನಡೆದ ಸಂವಾದ ಕಾರ್ಯಕ್ರಮದಲ್ಲಿ ಮೊಹೇರ್ ಶೆಟ್ಟಿ, ಆಶಿಶ್ ನಿಡಗುಂದಿ, ಪ್ರಕಾಶ್ ಶೆಟ್ಟಿ ಮತ್ತಿತರ ಯುವ ಕನ್ನಡಿಗರು ಹೆಚ್ಚು ಉತ್ಸುಕತೆಯಿಂದ ಭಾಗವಹಿಸಿದರು. ಡಾ.ಪುರುಷೋತ್ತಮ ಬಿಳಿಮಲೆ ಕನ್ನಡ ಓದಲು ಬರೆಯಲು ಬಾರದ ಹೊರನಾಡಲ್ಲಿ ಹುಟ್ಟಿದ ಕನ್ನಡದ ಹೊಸ ಪೀಳಿಗೆಗೆ ಕನ್ನಡ ಕಲಿಸಿ ಅಂತರ್ಜಾಲದಂತಹ ಆಧುನಿಕ ಮಾಹಿತಿ ತಂತ್ರಜ್ಞಾನದಲ್ಲಿ ಕನ್ನಡದ ಬೆಳವಣಿಗೆ ಸಾಧ್ಯ ಎಂದು ನುಡಿದರು. ಶ್ರೀ.ಅವನೀಂದ್ರನಾಥ್ ರಾವ್ ಅವರು ಕನ್ನಡ ಮುಕ್ತಕೋಶದ ಅಭಿವೃದ್ಧಿಗೆ ಕನ್ನಡ ಭಾಷಾತಜ್ಞರೂ ಪಾಲ್ಗೊಳ್ಳಬೇಕೆಂದು ಅಭಿಪ್ರಾಯಪಟ್ಟರು. ವೆಂಕಟಾಚಲ ಹೆಗ್ಡೆಯವರು ಹರಿಪ್ರಸಾದ್ ನಾಡಿಗ್ ಅವರನ್ನು ಸನ್ಮಾನಿಸಿದರು ವಿಕಿಪೀಡಿಯಾದ ಇನ್ನೊಬ್ಬ ನಿರ್ವಹಣಾ ತಜ್ಞೆಯಾದ ಸಿರಿಯಾ ದೇಶದ ಮೊಕ ಪ್ಯಾಂಟೇಜಸ್ ಅವರನ್ನೂ ಸನ್ಮಾನಿಸಲಾಯಿತು. ರೇಣುಕಾ ನಿಡಗುಂದಿ ಅವರು ಕಾರ್ಯಕ್ರಮ ನಿರ್ವಹಿಸಿದರು.

❑ ಪ್ರಕಾಶ್ ಶೆಟ್ಟಿ ಉಳೆಪಾಡಿ

# “ನವರಸ” ಗ್ರೂಪ್ ಗುಲಬರ್ಗಾ ಅವರ ಚಿತ್ರಕಲಾ ಪ್ರದರ್ಶನ

ದಿನಾಂಕ 24.01.2011 ರಂದು ದೆಹಲಿ ಕರ್ನಾಟಕ ಸಂಘದ ಆರ್ಟ್ ಗ್ಯಾಲರಿಯಲ್ಲಿ ನವರಸ ಗ್ರೂಪಿನ ಒಂಬತ್ತು ಕಲಾವಿದರಾದ ಪ್ರದೀಪ್‌ಸಿಂಗ್, ಸೋಮನಾಥ್ ಎಚ್. ಜಾಧವ, ಶಂಕರ ಚವ್ಹಾಣ, ಶರಣಪ್ಪ ಎನ್. ಎಮ್, ಮನೋಜ್‌ಕುಮಾರ ವಿ.ಜಿ, ಪ್ರಮೋದ್ ಕೆ ಬಿ, ವೆಂಕಟೇಶ್‌ಕುಮಾರ್ ಕೆ. ಎಚ್, ಅಬ್ದುಲ್ ಬಾಷಾ, ಶಿವಕುಮಾರ ಫಾಲ್ಕಿ ಪ್ರದರ್ಶನವನ್ನು ಏರ್ಪಡಿಸಿದ್ದರು. ಸಮಾರಂಭಕ್ಕೆ ಆಗಮಿಸಿದ್ದ ದೆಹಲಿಯ ಸುಪ್ರಸಿದ್ದ ಕಲಾವಿದರಾದ ಶ್ರೀಮತಿ ಶೋಭಾ ಬ್ರೂಟಾರವರು ಜ್ಯೋತಿ ಬೆಳಗಿಸಿ ಉದ್ಘಾಟನೆ ಮಾಡಿ ಈ ಒಂಭತ್ತು ಜನ ಕಲಾವಿದರು ಚಿಕ್ಕ ವಯಸ್ಸಿನಲ್ಲಿಯೇ ಇಷ್ಟೊಂದು ಅತ್ಯುತ್ತಮ ಕಲಾಕೃತಿಗಳನ್ನು ಸಿದ್ಧಪಡಿಸಿ ದೇಶದ ರಾಜಧಾನಿಯಲ್ಲಿ ಪ್ರದರ್ಶಿಸುತ್ತಿರುವುದನ್ನು ನೋಡಿ ತಮಗೆ ತುಂಬಾ ಸಂತೋಷವಾಗಿದೆ, ಇನ್ನೂ ಹೆಚ್ಚಿನ ಶ್ರಮವಹಿಸಿ ನಾಡಿಗೆ ಕೀರ್ತಿ ತರಲೆಂದು ಹಾರೈಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಡಾ. ವೆಂಕಟಾಚಲ ಹೆಗಡೆಯವರು ಕರ್ನಾಟಕ ಸಂಘದ ಆರ್ಟ್ ಗ್ಯಾಲರಿಯಲ್ಲಿ ಯುವ ಕಲಾವಿದರು ಪ್ರದರ್ಶನ ಏರ್ಪಡಿಸಿದ್ದು ತಮಗೆ ಸಂತಸ ತಂದಿದೆ, ಇಂತಹ ಕಾರ್ಯಕ್ರಮಗಳಿಗೆ ದೆಹಲಿ ಕರ್ನಾಟಕ ಸಂಘವು ಮುಕ್ತವಾಗಿ ಸಹಕರಿಸುತ್ತದೆ ಎಂದು ನುಡಿದರು.

ಸಂಘದ ಜಂಟಿ ಕಾರ್ಯದರ್ಶಿ ಶ್ರೀ ಎನ್. ಆರ್. ಶ್ರೀನಾಥ್ ಅವರು “ಕವಿ ಕಾಣದ್ದನ್ನು ರವಿಕಂಡ, ರವಿ ಕಾಣದ್ದನ್ನು ಕಲೆಗಾರ ಕಂಡ” ಎಂಬಂತೆ ತಮ್ಮ ಭಾವನೆಗಳಿಗೆ ರೂಪಕೊಟ್ಟಿದ್ದಾರೆ ಎಂದು ಕಲಾವಿದರನ್ನು ಹುರಿದುಂಬಿಸಿದರು.



ದೆಹಲಿಯ ಪ್ರಖ್ಯಾತ ಕನ್ನಡ ಕಲಾವಿದರಾದ ಶ್ರೀ ಈರಣ್ಣ ಜಿ.ಆರ್, ಶ್ರೀ ಭೀಮರಾವ್ ಮುರಗೋಡ, ಶ್ರೀಮತಿ ಶಾಲನ್ ಮುರಗೋಡ, ಶ್ರೀ ಆನಂದ ಮುರಗೋಡ ಹಾಗೂ ಸಂಘದ ಕಾರ್ಯದರ್ಶಿ ಹಾಗೂ ಪದಾಧಿಕಾರಿಗಳು ಕಾರ್ಯಕ್ರಮಕ್ಕೆ ಬಂದು ಕಲಾವಿದರ ಕಲೆಯನ್ನು ತುಂಬು ಹೃದಯದಿಂದ ಪ್ರಶಂಶಿಸಿದರು. ದೆಹಲಿ ಕಲಾಸಕ್ತರು ಕಲಾಕೃತಿಗಳನ್ನು ನೋಡಿ ಆನಂದಿಸಿದರು.

❑ ಡಾ॥ ಸುಮಂಗಲಾ ದೇವಿ

# ವಿನಾಯಕ್ ಭಟ್ ಮತ್ತು ವೀರೇಶ್ ಹೊಗೆಸೊಪ್ಪಿನವರ್ ಅವರಿಗೆ ಆತ್ಮೀಯ ವಿದಾಯ



ಹೊಸ ವೃತ್ತಿ ಜೀವನದ ಜವಾಬ್ದಾರಿ ಮತ್ತು ಕನಸುಗಳನ್ನು ಹೊತ್ತ ದೆಹಲಿ ಕನ್ನಡಿಗರ ನೆಚ್ಚಿನ ಯುವ ಪತ್ರಕರ್ತರಾದ, 'ವಿಜಯ ಕರ್ನಾಟಕ'ದ ವಿನಾಯಕ ಭಟ್ ಹಾಗೂ 'ದಿ ಸಂಡೇ ಇಂಡಿಯನ್' ನ ವೀರೇಶ್ ಹೊಗೆಸೊಪ್ಪಿನವರ್ ಅವರು ಬೆಂಗಳೂರಿಗೆ ಮರಳಿ ಹೋಗುತ್ತಿದ್ದಾರೆಂಬ ದಿಢೀರ್ ಸುದ್ದಿ ತಿಳಿಯುತ್ತಲೇ ದೆಹಲಿ ಕರ್ನಾಟಕ ಸಂಘದ ಸೆಮಿನಾರ್ ಹಾಲ್‌ನಲ್ಲಿ ಭಾನುವಾರ, ದಿನಾಂಕ ೩೦ ರ ಸಂಜೆ ಒಂದು ಪುಟ್ಟ ಬೀಳ್ಕೊಡುಗೆ ಸಮಾರಂಭಕ್ಕೆ ಎಲ್ಲ ಅಭಿಮಾನಿ ಬಳಗವೇ ಸೇರಿತ್ತು. ಸಂಘದ ಜಂಟಿ ಕಾರ್ಯದರ್ಶಿ ಶ್ರೀನಾಥ್ ಅವರು ಎಲ್ಲರನ್ನು ಸ್ವಾಗತಿಸುತ್ತ, ಪತ್ರಕರ್ತ ವಿನಾಯಕ್ ಭಟ್ ಅವರೊಂದಿನ ತಮ್ಮ ನಿತ್ಯದ ಒಡನಾಟ, ಕ್ರಿಕೆಟ್ ಪಂದ್ಯಾವಳಿಯಲ್ಲಿ ಹುರುಪಿನಿಂದ ಪಾಲ್ಗೊಳ್ಳುವ ಅವರ ಆಸಕ್ತಿ , ಎಲ್ಲರೊಂದಿಗೆ ಬೆರೆಯುವ ಸ್ನೇಹಪರತೆ ಹಾಗೂ ಯಾವುದೇ ಸಲಹೆ, ಸಹಾಯಕ್ಕೆ ಸದಾ ಸಿದ್ಧವಿರುವ ವೀರೇಶ್ ಅವರ ವಿನಯತೆಯನ್ನು ನೆನೆದರು. ಸಂಘದ ಉಪಾಧ್ಯಕ್ಷೆ, ಉಷಾ ಭರತಾದ್ರಿ ಅವರು ಸಂಘದ ಮುಖವಾಣಿ 'ಅಭಿಮತ'ದ ವಿನ್ಯಾಸ, ತಾಂತ್ರಿಕ ಮಾಹಿತಿಗಳಿಗೆ ವೀರೇಶ್ ಹೊಗೆಸೊಪ್ಪಿನವರ್ ಸದಾ ಮುಂದಾಗುತ್ತಿದ್ದ ರೀತಿ, ತೋರುತ್ತಿದ್ದ ಕೌಶಲ್ಯತೆಯನ್ನು ಶ್ಲಾಘಿಸುತ್ತಾ ಸಂಘದ ಎಲ್ಲ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ತಮ್ಮ ವೃತ್ತಿ ಮಾಧ್ಯಮದ ಅನುಭವಿಕ ಸಲಹೆಗಳನ್ನು ನೀಡುತ್ತಿದ್ದ ವಿನಾಯಕ ಭಟ್ ಅವರುಗಳಿಗೆ ನೂತನ ವೃತ್ತಿ ಬದುಕು ಶುಭವಾಗಲಿ ಎಂದು ಹಾರೈಸಿದರು.

ಶ್ರೀ ರೇಣುಕುಮಾರ್ ಅವರು ತಮ್ಮ ಸರಕಾರಿ ಕರ್ತವ್ಯಪಾಲನೆಯ ತುರ್ತು ಕೆಲಸದಲ್ಲಿ ವೀರೇಶ್ ಕಡಿಮೆ ಸಮಯದಲ್ಲಿ ತೋರಿದ ಚುರುಕಿನ ಸಹಾಯ ಹಸ್ತವನ್ನು ಮರೆಯುವಂತಿಲ್ಲ ಮತ್ತು ವಿನಾಯಕ್ ಭಟ್ ಅವರ ಕನ್ನಡಪರ ಟೀಕೆ, ಸಲಹೆಗಳು ಹೇಗೆ ತಮ್ಮನ್ನು ಪ್ರಭಾವಿಸಿದ್ದವು ಎಂಬುದನ್ನು ನೆನಪಿಸಿಕೊಂಡರು. ಸಂಘದ ಅಧ್ಯಕ್ಷ, ಡಾ. ವೆಂಕಟಾಚಲ ಹೆಗಡೆ ಅವರು ಇಬ್ಬರೂ ಪತ್ರಕರ್ತರಿಗೆ ಶುಭ ಕೋರುತ್ತ, 'ಹೊರನಾಡಿನ ವಿದ್ಯಮಾನಗಳೂ ನಾಡಿನ ಪತ್ರಿಕೆಗಳಲ್ಲಿ ಪ್ರಕಟಗೊಳ್ಳುವಂತಾಗಬೇಕು. ತಾವು ದೆಹಲಿ ಕರ್ನಾಟಕ ಸಂಘ, ಮತ್ತು ದೆಹಲಿ ಕನ್ನಡಿಗರ ಪ್ರತಿನಿಧಿಯಾಗಿ ಬೆಂಗಳೂರಿಗೆ ತೆರಳುತ್ತಿದ್ದೀರಿ' ಎಂದು ನುಡಿದರು. ದೆಹಲಿಗೆ ಬಂದೊಡನೆ ಕನ್ನಡಿಗರಿಗಾಗಿ ಹುಡುಕಾಟ ಮಾಡುವವರ ಪಾಲಿಗೆ ದೆಹಲಿ ಕರ್ನಾಟಕ ಸಂಘ ಕನ್ನಡಿಗರ ಒಡನಾಟದ ನೆಲೆಯಾಗಿದೆ. ತಮಗೆ ಪ್ರೀತಿ, ಅಭಿಮಾನಗಳನ್ನು ತೋರಿದ ಕನ್ನಡಿಗರನ್ನು ಮರೆಯುವಂತಿಲ್ಲವೆಂದು ವೀರೇಶ್ ತಮ್ಮ ಧನ್ಯವಾದಗಳನ್ನು ಅರ್ಪಿಸಿದರು. ನವವಧುವಾಗಿ ದೆಹಲಿಗೆ ಇತ್ತೀಚೆಗಷ್ಟೇ ಕಾಲಿಟ್ಟಿದ್ದ ವೀರೇಶ್ ಅವರ ಪತ್ನಿ ಜ್ಯೋತಿ, ಕನ್ನಡಿಗರ ಒಡನಾಟದಲ್ಲಿ ಇಂಥ ಮಹಾನಗರದಲ್ಲೂ ತವರೂರಲ್ಲೇ ಇದ್ದೇನೆ ಅನಿಸುತ್ತಿತ್ತು ಎಂದರು. ವಿನಾಯಕ ಭಟ್ ಅವರು ಸಂಘದ ಬೆಳವಣಿಗೆ, ಕಾರ್ಯವೈಖರಿ ಕುರಿತಂತೆ ಮೆಚ್ಚುಗೆ ವ್ಯಕ್ತಪಡಿಸುತ್ತಾ ತಾವು ಎಲ್ಲೇ ಇದ್ದರು ಸಂಘದ ಬಗ್ಗೆ ಒಳ್ಳೆಯ ಪ್ರಚಾರ ನೀಡಲು ಯತ್ನಿಸುವುದಾಗಿ ಭರವಸೆ ನೀಡಿದರು. ಸಂಘದ ಕಾರ್ಯದರ್ಶಿ ಸಿ.ಎಂ.ನಾಗರಾಜ್ ಅವರು ವಂದಿಸಿದರು.

❑ **ರೇಣುಕಾ ಎಸ್. ನಿಡಗುಂದಿ**

ಕವನ

## ನನ್ನ ನೆನಪಿನಲ್ಲಿ

ಅಂದಿನಿಂದ ಒಂದೇ ರಾಗ
ಈ ನಗರದ ಮಹಾಮಂದಿರದಿಂದ
ಜನರಿಗೆ ಹೊಸ ರಾಗಗಳು ಕೇಳಲು ಕಾತರ
ಬೇಕಾದ ಭಜನೆಯನ್ನು ಕೇಳದೆಯೇ
ಕರಾಳ ರಾತ್ರಿಯಲ್ಲಿ ದೀಪವಾರಿಸಿ ಪಾಪ ಪೂಜಾರಿ
ತನ್ನಾತ್ಮವನ್ನು ಬಲಿಕೊಟ್ಟ ದೇವರಗುಡಿಯಲ್ಲಿ
ಹೇ ಪರಮಾತ್ಮ ಪ್ರತಿ ರಾತ್ರಿ
ಆಕಾಶ ನೋಡುತ್ತೇವೆ; ನಕ್ಷತ್ರ ಎಣಿಸುತ್ತೇನೆ
ರಾತ್ರಿಯಾದ ಕೂಡಲೇ ಚಂದ್ರ ಗ್ರಹಣದ ಸೆರಗಿನಲ್ಲಿ
ಈ ನಗರದ ಪ್ರಬುದ್ಧ ಜನರು
ಮುರಿದ ಟಿನ್ನಿನ ಡಬ್ಬ ಹೊಡೆಯುತ್ತಾ
ನಾಯಿಗಳನ್ನು ಸಾಯಿಸುತ್ತಾ ಎಂತಹ
ಎಂತಹದೋ ವಿಕಾರ ಸ್ವರಗಳನ್ನು
ಮಾಡುತ್ತಾ ಇರುವುದನ್ನು ಕೇಳುತ್ತೇನೆ

ಆಕಾಶವೂ ಸ್ವಚ್ಛವಾಗಿಲ್ಲ
ಹಗಲು ಸಹ ದಿನದಂತಿಲ್ಲ
ಬೆಳಗಿನಲ್ಲೂ ಜನರು ಮಲಗಿದ್ದಾರೆ ಯಾಕೆ
ಪ್ರಭು ನಿನ್ನ ಪವಿತ್ರ ನೇತ್ರರು ಕೊಳಚೆ ಚರಂಡಿಯಲ್ಲಿ ಏಕೆ ಹರಿಯುತ್ತಿದೆ?
ನಿನ್ನ ಪವಿತ್ರ ಆತ್ಮ ಅಲ್ಲಿ ಇಲ್ಲಿ ಏಕೆ ತಿರುಗುತ್ತಿದೆ
ಏನು ಹುಡುಕುತ್ತಿದೆ?

ಕನ್ನಡಕ್ಕೆ ಅನುವಾದ : ಡಾ. ಅಹಲ್ಯಾಚಿಂತಾಮಣಿ
ಹಿಂದಿಮೂಲ : ಡಾ. ವೀರಭದ್ರ ಕಾರ್ಕಿಢೋಲಿ

## ಮಾತು – ಮೌನ

ಮೌನವು ಒಳ್ಳೆಯದೇ ಆದರೂ
ಒಮ್ಮೊಮ್ಮೆ
ಮಾತು ಮಾಡುವ ಕಾರ್ಯವನ್ನು
ಮೌನವು ಮಾಡದು.
ಮೌನ ಒಬ್ಬರದೇ
ಮಾತು ಎಲ್ಲರದೂ
ಆದರೆ
ಮಾತು ದುರ್ಗಂಧವಾದಾಗ
ಮೌನಕ್ಕಿಂತಲೂ ಹರಿತವಾದುದಿಲ್ಲ.
ಮಾತನಾಡದೇ ಇದ್ದರೆ
ಸುಮ್ಮನಿದ್ದಂತೇನೂ ಅಲ್ಲ!
ಮಾತನ್ನು ಮೀರಿದ ಅಭಿವ್ಯಕ್ತಿಯು
ಹಿಮದಲ್ಲಿ ಬಿರಿದ ಮಲ್ಲಿಗೆಯ ಹೂವು
ದೃಶ್ಯದಿಂದಲೂ
ಹಾವಭಾವಗಳಿಂದಲೂ
ಹೊರಬಂದ ಮಾತು ಎಷ್ಟು ಏಕಾಂಗಿಯೋ!
ಮಾತಿನ ಸಹಾಯವಿಲ್ಲದ ಆಕಾರಗಳು
ತೊಗಲು ಗೊಂಬೆಗಳು
ಮಾತೂ ಮೌನಗಳು
ಬೆಳಕು–ನೆರಳುಗಳು
ಯಾವುದು ಬೆಳಕೋ ಯಾವುದು ಭಸ್ಮವೋ
ಬಯಲಾದೀತೇ ಎಂದಿಗಾದರೂ
ಮೌನವನ್ನು ಹೀರಿ
ಬೆಳೆದ ಬಳ್ಳಿಯಲ್ಲವೇ ಮಾತು
ಹಾಗಾದರೆ ಮೌನ?
ಮಾತುಗಳನ್ನು ನುಂಗಿ
ಅರಗಿಸಿಕೊಂಡ ಮೌನವು
ಆತ್ಮಗಳಿಗೆ ತಾಕುವ ನಿಶ್ಯಬ್ದ ಗಾನವು.

ತೆಲುಗು ಮೂಲ : ಡಾ.ಎನ್.ಗೋಪಿ
ಕನ್ನಡಾನುವಾದ : ಕೃಷ್ಣಮೂರ್ತಿ ಕಲುಮಂಗಿ

# ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಕಂಪ್ಯೂಟರ್ ಶಾಲೆಯಲ್ಲಿ ಉಪನ್ಯಾಸ



ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಕಂಪ್ಯೂಟರ್ ಕಲಿಕಾ ಕೇಂದ್ರದಲ್ಲಿ ದಿನಾಂಕ 18.1.2011 ಮತ್ತು 28.1.2011ರಂದು ಎರಡು ಉಪನ್ಯಾಸ ಗೋಷ್ಠಿಗಳನ್ನು ಆಯೋಜಿಸಲಾಗಿತ್ತು. 18.01.2011ರಂದು ಶ್ರೀ ಬಿ.ಎಲ್. ರಮೇಶ್, ಹಿರಿಯ ವ್ಯವಸ್ಥಾಪಕರು (ಮಾನವ ಸಂಪನ್ಮೂಲ) ವಿಪ್ರೋ ಟೆಕ್ನೋಲಜಿ, ಬೆಂಗಳೂರು, ಇವರು 'ಉದ್ಯೋಗಾಭಿಲಾಷಿಗಳಿಗೆ ಸಂದರ್ಶನದ ಸಿದ್ಧತೆ' ಎಂಬ ವಿಷಯ ಕುರಿತು ಮಾಡಿದ ಉಪನ್ಯಾಸದಲ್ಲಿ ಅಭ್ಯರ್ಥಿಗಳು ಸಂದರ್ಶನಕ್ಕೆ ಹೋಗುವ ಮೊದಲು ಗಮನದಲ್ಲಿಡಬೇಕಾದ ಅಂಶಗಳನ್ನು ಹೇಳುತ್ತಾ ಇಂಗ್ಲೀಷಿನ ಮೂರು 'C'ಗಳ ಸಾದೃಶ್ಯದೊಂದಿಗೆ ಆತ್ಮವಿಶ್ವಾಸ (confidence) ಸಂವಹನ (communication) ನಿಖರ ದೃಷ್ಟಿಕೋನ (clarity of vision) ಇವುಗಳನ್ನು ಹೊಂದಿರಬೇಕೆಂದು ವಿವರಿಸಿದರು. ಅಲ್ಲದೇ ಮ್ಯಾನೇಜ್‌ಮೆಂಟ್‌ನಂತಹ ಜವಾಬ್ದಾರಿಯುತ ಸ್ಥಾನಗಳಲ್ಲಿ ಉದ್ಯೋಗದ ಕನಸು ಕಾಣುತ್ತಿರುವ ಆಕಾಂಕ್ಷಿಗಳು "ಆಡಳಿತ ಮತ್ತು ನಾಯಕತ್ವ" ಗುಣಗಳನ್ನು ಬೆಳೆಸಿಕೊಳ್ಳಬೇಕೆಂದು ಒತ್ತಿ ಹೇಳಿದರು. ಸಾಫ್ಟ್‌ವೇರ್ ಮತ್ತು ಹಾರ್ಡ್‌ವೇರ್‌ಗಳಲ್ಲಿ ಆಸಕ್ತಿ ಹೊಂದಿರುವ ವಿದ್ಯಾರ್ಥಿಗಳು ಆಯಾ ಅಧ್ಯಯನ ಕ್ಷೇತ್ರಗಳಲ್ಲಿನ ನಿರ್ದಿಷ್ಟ ಕೌಶಲ್ಯಗಳನ್ನು ಮತ್ತು ಅವುಗಳನ್ನು ಕಾರ್ಯಾನ್ವಿತಗೊಳಿಸುವ ಬಗೆಯನ್ನು ಕುರಿತ ಸಮರ್ಪಕವಾದ ಜ್ಞಾನವನ್ನು ಹೊಂದಬೇಕೆಂದು ಕರೆ ನೀಡಿದರು. ಉಪನ್ಯಾಸದ ನಂತರ ಪ್ರಶ್ನೋತ್ತರ ಗೋಷ್ಠಿಯನ್ನು ಸಹ ಏರ್ಪಡಿಸಲಾಗಿತ್ತು.

ಎರಡನೇ ಗೋಷ್ಠಿಯನ್ನು 28.1.2011ರಂದು ಏರ್ಪಡಿಸಲಾಗಿತ್ತು. ಶ್ರೀ ಎಂ.ಎಲ್. ಷಣ್ಮುಖ, ನಿರ್ದೇಶಕರು (ಮಾನವ ಸಂಪನ್ಮೂಲ)ಭಾರತ್ ಎಲೆಕ್ಟ್ರಾನಿಕ್ಸ್, ಬೆಂಗಳೂರು ಇವರು ವ್ಯಕ್ತಿತ್ವ ವಿಕಸನ ಮತ್ತು ವೃತ್ತಿ ಬೆಳವಣಿಗೆ (personality development & career enhancement) ಎಂಬ ವಿಷಯದ ಬಗೆಗೆ ನೀಡಿದ ಉಪನ್ಯಾಸದಲ್ಲಿ ವೃತ್ತಿ, ಬದುಕು ಮತ್ತು ವೈಯಕ್ತಿಕ ಜೀವನ ಎರಡರಲ್ಲೂ ಪ್ರತಿಯೊಬ್ಬರೂ ಒಳ್ಳೆಯ ಮನೋಭಾವ, ಆತ್ಮಸ್ಥೈರ್ಯ, ಕಾರ್ಯತತ್ಪರತೆ, ಆತ್ಮಾಭಿಲಾಷೆ ಮತ್ತು ಉತ್ತಮ ಜೀವನ ಶೈಲಿಗಳನ್ನು ರೂಢಿಸಿಕೊಂಡಾಗ ಯಶಸ್ಸು ಸಾಧ್ಯವಾಗುತ್ತದೆ ಎಂದು ನುಡಿದರು. ವೃತ್ತಿ ಜೀವನದಲ್ಲಿ ಉನ್ನತಿ ಸಾಧಿಸಲು ಅವಶ್ಯವಾದ ಸೂಕ್ತ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾದರೆ 'ಅಷ್ಟಾಂಗ ಮಾರ್ಗ ತತ್ವ'ವನ್ನು ಅನುಸರಿಸಬೇಕು ಮತ್ತು 'ಸ್ವಯಂಪ್ರೇರಣೆಯಿಂದ' ನಮ್ಮ ಜವಾಬ್ದಾರಿಗಳನ್ನು ನಿರ್ಧರಿಸಬೇಕು ಎಂದು ಕಿವಿ ಮಾತು ಹೇಳಿದರು. ಉಪನ್ಯಾಸದ ನಂತರ ಏರ್ಪಡಿಸಿದ್ದ ಪ್ರಶ್ನೋತ್ತರ ಗೋಷ್ಠಿ ಹೆಚ್ಚು ಪರಿಣಾಮಕಾರಿಯಾಗಿತ್ತು.

❑ ಎನ್.ಪಿ.ಚಂದ್ರಶೇಖರ್

# ಮಧ್ವ ಸಂಘ (ರಿ), ನವದೆಹಲಿ ನೂತನ ಕಾರ್ಯಕಾರಿ ಸಮಿತಿ ಆಯ್ಕೆ



ಕಳೆದ ಸುಮಾರು ಮೂರು ದಶಕಗಳಿಂದ ನವದೆಹಲಿಯ ಸಫ್ದರ್‌ಜಂಗ್ ಡೆವಲಪ್‌ಮೆಂಟ್ ಏರಿಯಾದಲ್ಲಿ ಶ್ರೀ ಕೃಷ್ಣಮಂದಿರವನ್ನು ಕಟ್ಟಿ ಸೇವೆ ಸಲ್ಲಿಸುತ್ತಿರುವ ಮಧ್ವ ಸಂಘ (ರಿ), ದೆಹಲಿಗೆ ಮುಂಬರುವ 2 ವರ್ಷಗಳಿಗೆ ನೂತನ ಕಾರ್ಯಕಾರಿ ಸಮಿತಿಯು ಕಳೆದ ಡಿಸೆಂಬರ್ 26, 2010ರಂದು ಅಧಿಕಾರ ವಹಿಸಿಕೊಂಡಿತು.

ಡಾ. ಎಂ.ಎಸ್.ಮುಧೋಳ್ ಅವರು ಮುಖ್ಯ ಚುನಾವಣಾ ಅಧಿಕಾರಿಯಾಗಿ ಚುನಾವಣಾ ಪ್ರಕ್ರಿಯೆಯನ್ನು ಅತ್ಯುತ್ತಮ ರೀತಿಯಲ್ಲಿ ನಿರ್ವಹಿಸಿದರು.

ಅಧ್ಯಕ್ಷರು : ಶ್ರೀ ಎಂ.ವಿ. ರಾವ್, ಉಪಾಧ್ಯಕ್ಷರು : ಶ್ರೀ ರಘುರಾಮ ರಾವ್, ಶ್ರೀ ಕೆ.ಆರ್. ರಾಮಮೂರ್ತಿ, ಕಾರ್ಯದರ್ಶಿ : ಡಾ. ಮಧುಸೂದನ ರಾವ್, ಖಜಾಂಚಿ : ಶ್ರೀ ಆರ್. ಶ್ರೀನಿವಾಸನ್, ಜಂಟಿ ಕಾರ್ಯದರ್ಶಿ : ಶ್ರೀ ರಾಘವೇಂದ್ರ ಬಿ.ಎಸ್.

ಸದಸ್ಯರುಗಳು : ಶ್ರೀಮತಿ ಗಂಗಾಮೂರ್ತಿ, ಶ್ರೀ ಅರವಿಂದ್ ಮಿಟ್ಟಿಮನಿ, ಶ್ರೀ ಕೃಷ್ಣನ್, ಶ್ರೀ ವೇಣುಗೋಪಾಲ್ ರಾವ್, ಶ್ರೀ ಗುರುರಾಜ್, ಶ್ರೀ ಗುರುಪ್ರಸಾದ್, ಶ್ರೀ ಎಚ್. ಗೋವಿಂದ, ಶ್ರೀ ರಾಘವೇಂದ್ರ ರಾವ್, ಶ್ರೀಮತಿ ಕವಿತಾ ರಾಘವೇಂದ್ರ

❑ ಕೆ.ಆರ್. ರಾಮಮೂರ್ತಿ

## ಸಾಮೂಹಿಕ ಸತ್ಯನಾರಾಯಣ ಪೂಜೆ, ಕನ್ನಡ ಬಳಗ, ರಾಜೇಂದ್ರ ನಗರ

ಕನ್ನಡ ಬಳಗ, ರಾಜೇಂದ್ರನಗರವು ಪ್ರತಿವರ್ಷ ನಡೆಸುವ ಸಾಮೂಹಿಕ ಸತ್ಯನಾರಾಯಣ ಪೂಜೆಯು **20.02.2011** ರಂದು ನಡೆಯಲಿದೆ. ಬೆಳಗ್ಗೆ 10 ಗಂಟೆಗೆ ಪೂಜಾರಂಭ. ಮಧ್ಯಾಹ್ನ 12.30ಕ್ಕೆ ಮಂಗಳಾರತಿ. ನಂತರ ಪ್ರಸಾದ ವಿತರಣೆ, ಭೋಜನ. ಭಕ್ತ ಜನರು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ. **ಸ್ಥಳ:** ಸಾರಸ್ವತ ಸಂಸ್ಕೃತಿ ಭವನ, ಹೊಸ ರಾಜೇಂದ್ರ ನಗರ (ಗೀತಾಮಂದಿರ) ನವದೆಹಲಿ.

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ – ಶ್ರೀ ಮಂಜುನಾಥ ಭಟ್, ಅಧ್ಯಕ್ಷರು–9810733877, ಶ್ರೀ ರವೀಂದ್ರನಾಥ್, ಉಪಾಧ್ಯಕ್ಷರು–9868101880, ಶ್ರೀ ಗೋಪಾಲಕೃಷ್ಣ ಭಟ್, ಕಾರ್ಯದರ್ಶಿ–9999335181

# ಜನಕಪುರಿ ಕನ್ನಡ ಕೂಟದ ವಾರ್ಷಿಕ ಸಭೆ ಹಾಗೂ "ಕೂಟ ರತ್ನ" ಪ್ರಶಸ್ತಿ ವಿತರಣೆ





ದಿನಾಂಕ 30.1.2011ರಂದು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಜನಕಪುರಿ ಕನ್ನಡ ಕೂಟದ ಮಹಿಳಾ ಮತ್ತು ಮಕ್ಕಳ ದಿನಾಚರಣೆ, ಕೂಟರತ್ನ ಪ್ರಶಸ್ತಿ ವಿತರಣೆ, ಆಟೋಟ ಸ್ಪರ್ಧೆ ಬಹುಮಾನ ವಿತರಣೆ ಹಾಗೂ ವಾರ್ಷಿಕ ಸಭೆಯನ್ನು ಆಯೋಜಿಸಲಾಗಿತ್ತು.

ಮಹಿಳಾ ಮತ್ತು ಮಕ್ಕಳ ದಿನಾಚರಣೆಯನ್ನು ಮಹಿಳಾ ಮಂಡಳಿಯ ಕಾರ್ಯದರ್ಶಿ ಶ್ರೀಮತಿ ಸವಿತಾ ಇನಾಂದಾರ್ ವಿಭಿನ್ನ ರೀತಿಯಲ್ಲಿ ರಚನಾತ್ಮಕವಾಗಿ ನಡೆಸಿ ಜನರನ್ನು ಮನರಂಜಿಸಿದರು. ಮಹಿಳಾ ಮಂಡಳಿ ಸದಸ್ಯರ ನೃತ್ಯ, ಎಳೆ ಮಕ್ಕಳು ಹೇಳಿದ ಭಗವದ್ಗೀತೆ ಶ್ಲೋಕ, ಸುಂದರಕಾಂಡ ಪಾಠ, ಸ್ವರಚಿತ ಕವನಗಳ ಪಠಣ, ನೆರೆದಿದ್ದ ಸಭಿಕರ ಮನಸೂರೆಗೊಂಡಿತು. ಜನಕಪುರಿ ಕನ್ನಡಕೂಟದ ಅವಿಭಾಜ್ಯ ಅಂಗವಾಗಿರುವ ಮಹಿಳಾ ಮಂಡಳಿಯ ಕಲೆಯನ್ನು ಮುಕ್ತ ಕಂಠದಿಂದ ಜನರು ಹೊಗಳಿದರು.

ಕೂಟರತ್ನ ಪ್ರಶಸ್ತಿಯನ್ನು ಶ್ರೀ ಹಿಮಕರ್‌ರವರಿಗೆ ನೀಡಿ ಗೌರವಿಸಲಾಯಿತು. ಕೂಟ ಸ್ಥಾಪನೆಯಲ್ಲಿ ಒಬ್ಬರಾದ ಶ್ರೀ ಹಿಮಕರ್ ದಂಪತಿಗಳಿಗೆ ಮುಖ್ಯ ಅತಿಥಿಗಳಾದ ಶ್ರೀಮತಿ ಸರೋಜಿನಿ ಮಹಿಷಿ, ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ.ವೆಂಕಟಾಚಲ ಹೆಗಡೆ, ಕೂಟದ ಅಧ್ಯಕ್ಷ ಶ್ರೀ ಬಿ.ಎಸ್.ರಾಮಕೃಷ್ಣರವರು ನೀಡಿ ಸನ್ಮಾನಿಸಿದರು. ಆಟೋಟ ಸ್ಪರ್ಧೆಗಳ ಪ್ರಶಸ್ತಿ ವಿತರಣೆಯನ್ನು ಅತೀ ಉತ್ಸಾಹದಿಂದ ಆಯೋಜಿಸಲಾಗಿತ್ತು. ಎಳೆ ವಯಸ್ಸಿನಿಂದ ಇಳಿ ವಯಸ್ಸಿನವರೆಗೆ ಕ್ರೀಡೆಗಳಲ್ಲಿ ಪಾಲ್ಗೊಂಡ ಸದಸ್ಯರು ಅಷ್ಟೇ ಲವಲವಿಕೆಯಿಂದ ಪ್ರಶಸ್ತಿಗಳನ್ನು ಸ್ವೀಕರಿಸಿದರು. ದೆಹಲಿ ಕರ್ನಾಟಕ ಸಂಘದ ನೂತನ ಪದಾಧಿಕಾರಿಗಳಿಗೆ ಹೂಗುಚ್ಛ ನೀಡಿ ಅಭಿನಂದಿಸಲಾಯಿತು.

ವಾರ್ಷಿಕ ಸಭೆಯಲ್ಲಿ ಕಾರ್ಯದರ್ಶಿ ಶ್ರೀನಾಥ್ ಎನ್.ಆರ್. ವಾರ್ಷಿಕ ವರದಿಯನ್ನು ಸಭೆಯ ಮುಂದಿಟ್ಟಾಗ ಸಭೆಯು ಅದನ್ನು ಅನುಮೋದಿಸಿತು. ಹೊಸ ಕಾರ್ಯಕಾರಿ ಸಮಿತಿಯನ್ನು ಚುನಾವಣೆ ಅಧಿಕಾರಿಯಾದ ಶ್ರೀ ಕೆ.ಎಸ್.ಜಿ.ಶೆಟ್ಟಿ ಪ್ರಕಟಿಸಿದರು.

ಅಧ್ಯಕ್ಷ : ಶ್ರೀ ಬಿ.ಎಸ್.ರಾಮಕೃಷ್ಣ, ಉಪಾಧ್ಯಕ್ಷ : ಶ್ರೀ ಎನ್.ಆರ್.ಶ್ರೀನಾಥ್, ಕಾರ್ಯದರ್ಶಿ : ಶ್ರೀ ಎಂ.ವಿ.ವೆಂಕಟೇಶ್, ಸಹ ಕಾರ್ಯದರ್ಶಿ : ಡಾ. ಅಶೋಕ ಎಂ.ಈಟಿ, ಖಜಾಂಚಿ : ಶ್ರೀ ಪ್ರಕಾಶ್ ಎನ್.

ಸದಸ್ಯರುಗಳಾಗಿ : ಡಾ. ಸುಮಂಗಲಾದೇವಿ, ಶ್ರೀ ಗಂಗಾಧರ, ಶ್ರೀ ಬಿ.ಕೆ.ಬಸವರಾಜ್, ಶ್ರೀಮತಿ ರಾಜೇಶ್ವರಿ ಪ್ರಕಾಶ್ ಅವರುಗಳು ಆಯ್ಕೆಯಾದರು.

❑ ವೆಂಕಟೇಶ್ ಎಂ.ವಿ.

# ದೆಹಲಿಯಲ್ಲಿ ಕನ್ನಡ ಕಲಾವಿದರ ಚಿತ್ರ ಪ್ರದರ್ಶನ

ಕಲಾವಿದರಾದ ಸುಧೀರ್ ಫಡ್ನೀಸ್, ರಮೇಶ್ ಪಚಪಾಂಡೆ , ಎಫ್.ವಿ.ಚಿಕಮಠ್, ದೇವೇಂದ್ರ ಎಂ.ಬಡೀಗೇರ್, ದಯಾನಂದ ಕಮಾಕರ್, ಬಿ.ಪಿ. ಕಾರ್ತಿಕ್ ಅವರ ಕಲಾಕೃತಿಗಳ ಪ್ರದರ್ಶನ ದೆಹಲಿಯ ಐಫ್ಯಾಕ್ಸ್‌ನಲ್ಲಿ ಜನವರಿ 18ರಿಂದ 24ರವರೆಗೆ ನಡೆಯಿತು. ಕಲಾವಿದರು ತಮ್ಮ ನೂತನ ಕಲಾಕೃತಿಗಳನ್ನು ಪ್ರದರ್ಶಿಸಿದರು. ಜನವರಿ 18ರಂದು ದೆಹಲಿಯ ಕರ್ನಾಟಕ ಸರ್ಕಾರದ ಹೆಚ್ಚುವರಿ ಪ್ರತಿನಿಧಿ ಶ್ರೀ ಬೈಕೆರೆ ನಾಗೇಶ್ ಹಾಗೂ ಲಲಿತ ಕಲಾ ಅಕಾಡೆಮಿಯ ಉಪಾಧ್ಯಕ್ಷ, ದೆಹಲಿಯ ಖ್ಯಾತ ಕಲಾವಿದರಾದ ಶ್ರೀ ಕೆ.ಆರ್. ಸುಬ್ಬಣ್ಣನವರು ಉದ್ಘಾಟಿಸಿ ಶುಭ ಹಾರೈಸಿದರು. ದೆಹಲಿ, ಮುಂಬೈ, ಧಾರವಾಡ, ಬಿಜಾಪುರ ಹಾಗೂ ಬೆಂಗಳೂರು ನಗರದ ಆರು ಕಲಾವಿದರು ಒಟ್ಟಾಗಿ ಕಲಾಪ್ರದರ್ಶನವನ್ನು ಆಯೋಜಿಸಿದ್ದರು. ರಾಷ್ಟ್ರೀಯ ಮಟ್ಟದಲ್ಲಿ ಪ್ರಶಸ್ತಿ ವಿಜೇತರಾದ ಕಲಾವಿದರ ಕಲಾಕುಂಚದಿಂದ ನೈಜವಾಗಿ ಮೂಡಿ ಬಂದ ಕಲಾಕೃತಿಗಳು ಒಂದಕ್ಕಿಂತ ಒಂದು ಮಿಗಿಲಾಗಿ ಕಲಾಸಕ್ತರನ್ನು ಬೇರೊಂದು ಲೋಕಕ್ಕೆ ಕರೆದೊಯ್ಯುವಂತಿದ್ದವು. ನಿಸರ್ಗ, ಗ್ರಾಮೀಣ ಬದುಕು, ಮಹಿಳೆ, ಪ್ರಕೃತಿ ಸೌಂದರ್ಯ ಹಲವಾರು ದಿನನಿತ್ಯದ ದೃಶ್ಯಗಳು ಕಲಾವಿದರ ಕಲ್ಪನೆಯ ಕುಂಚದಿಂದ ಮೂರ್ತ ಸ್ವರೂಪ ಪಡೆದು ನೋಡುಗರನ್ನು ಬೆರಗುಗೊಳಿಸುವಂತಿದ್ದವು. ದೆಹಲಿಯ ಕಲಾವಿದರಾದ ಸುಧೀರ್ ಫಡ್ನೀಸ್ ಅವರ ಕಲಾಕೃತಿಗಳು ಈಗಾಗಲೇ ದೆಹಲಿಯ ಕಲಾಸಕ್ತರ ಪ್ರಶಂಸೆಗೆ ಪಾತ್ರವಾಗಿವೆ. ಸುಧೀರ್ ಫಡ್ನೀಸ್ ವಿಶೇಷ ಆಸಕ್ತಿಯಿಂದ ಕಲಾ ಪ್ರದರ್ಶನವನ್ನು ಆಯೋಜಿಸಿದ್ದರು. ಕಲಾವಿದರ ಕಲಾ ಪ್ರೌಢಿಮೆಗೆ ಅಂತರ ರಾಷ್ಟ್ರೀಯ ಮನ್ನಣೆ ದೊರೆಯಲಿ ಎಂಬುದು ನಮ್ಮ ಆಶಯ.



# ದೆಹಲಿ ಕನ್ನಡಿಗರಿಗೊಂದು ‘ಕೆಂಪು ಕೋಟೆ’

“ದೆಹಲಿಯಲ್ಲೊಂದು ಕೆಂಪುಕೋಟೆ, ಹೊರಗಿದ್ದವರಿಗೆ ಒಳಹೋಗುವ ತವಕ. ಒಳಗಿದ್ದವರಿಗೆ ಹೊರಬರುವ ತಲ್ಲಣ!”



ಜಾಲ ತಾಣಗಳದ್ದೇ ಒಂದು ಜಗತ್ತು. ಇಲ್ಲಿ ಕ್ಷಣಕ್ಕೊಂದು ಅಚ್ಚರಿ ಸಂಭವಿಸುತ್ತಿರುತ್ತದೆ. ಈ ಜಗತ್ತು ನೈಜ ಜಗತ್ತಿನಿಂದ ಭಿನ್ನವಾಗಿಲ್ಲ. ಇಲ್ಲಿ ಅದೆಷ್ಟೋ ಸಾಮ್ರಾಜ್ಯಗಳು, ಕೋಟೆ –ಕೊತ್ತಲಗಳು ಸೃಷ್ಟಿಯಾಗುತ್ತಿರುತ್ತವೆ. ಹಾಗೇ ಮುರಿದು ಬೀಳುತ್ತ ಕಾಲಾವಶೇಷಗಳಾಗಿ, ಮಮ್ಮಿಗಳಾಗಿ ಜಾಲಗಳ ಅಡಿಯಲ್ಲಿ ಹೂತುಹೋಗಿರುತ್ತವೆ. ಈ ಜಗತ್ತಿನಲ್ಲೂ ಸೀಸರ್, ಕ್ಲಿಯೋಪಾತ್ರ, ನೀರೋ, ಅಲೆಕ್ಸಾಂಡರ್, ಅಶೋಕ, ಕೃಷ್ಣದೇವರಾಯ, ಶಾಹಜಹಾನ್ ನಂಥ ಚಕ್ರವರ್ತಿಗಳು ಆಳಿದ್ದಾರೆ, ಆಳುತ್ತಿದ್ದಾರೆ. ಭವ್ಯವಾದ ಪಿರಾಮಿಡ್‌ಗಳು, ಅಮರ ಪ್ರೇಮದ ಸಂಕೇತವಾದ ತಾಜ್‌ಮಹಲು, ಐಫೆಲ್‌ಟಾವರ್, ಪೀಸಾ ಗೋಪುರಗಳಂಥವು ಕಟ್ಟಲ್ಪಡುತ್ತಿವೆ. ಇವುಗಳ ಉದ್ದೇಶ ಬೇರೆ ಬೇರೆಗಳಾಗಿದ್ದರೂ ಇವುಗಳ ಅಸ್ತಿತ್ವವೇ ಒಂದು ಕುತೂಹಲಕಾರಿ ಆಗಿರುತ್ತದೆ. ತಮ್ಮ ಕಲೆ, ಸಂಸ್ಕೃತಿ, ಸಾಹಿತ್ಯ, ಪ್ರವಾಸ ಇತ್ಯಾದಿ ಎಲ್ಲಾ ಪ್ರಕಾರಗಳನ್ನು ವಸ್ತುವನ್ನಾಗಿಸಿಕೊಂಡ ಈ ತಾಣಗಳಲ್ಲೀಗ ಇತ್ತೀಚಿನ ಒಂದು ಸೇರ್ಪಡೆ ಬ್ಲಾಗ್. ಈ ಬ್ಲಾಗ್‌ಗಳು ಸಾಮಾನ್ಯ ಜಾಲತಾಣ (ವೆಬ್‌ಸೈಟ್) ಗಳಂತಲ್ಲದೇ ಒಬ್ಬ ವ್ಯಕ್ತಿಯ ಅನಿಸಿಕೆಗಳ ವಿವರಗಳನ್ನೊಳಗೊಂಡಿರುತ್ತವೆ . ದಿನನಿತ್ಯ ಒಂದಿಲ್ಲೊಂದು ವಿಷಯಗಳನ್ನು ಈ ಬ್ಲಾಗ್‌ಗೆ ತುಂಬುವುದಕ್ಕೆ ಅಥವಾ ಬರೆಯುವುದಕ್ಕೆ ಬ್ಲಾಗೀಕರಣ ಎನ್ನಬಹುದು. ಇಂಥ ಒಂದು ಬ್ಲಾಗ್ ದೆಹಲಿ ಕನ್ನಡಿಗರಿಗಾಗಿಯೇ ಸೃಷ್ಟಿಯಾಗಿದೆ. ಅದುವೇ ‘ಕೆಂಪುಕೋಟೆ’. ಈ ಕೋಟೆಯನ್ನು ಕಟ್ಟಿದ ಶಾಹಜಹಾನ್ ನಮ್ಮ ಬಾಲಕೃಷ್ಣ ನಾಯ್ಕ್ ಡಿ.

ಮೊದಲಿನಿಂದಲೂ ದೆಹಲಿ ಕರ್ನಾಟಕ ಸಂಘದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿರುವ ನಮ್ಮ ಬಾಲಕೃಷ್ಣ ನಾಯ್ಕ್ ಅವರು ಹಿಂದೆ ಅಭಿಮತ ಸಂಪಾದಕ ಮಂಡಳಿಯಲ್ಲಿದ್ದವರು. ಹೀಗಾಗಿ ಅವರಿಗೆ ದೆಹಲಿ ಕರ್ನಾಟಕ ಸಂಘದ ಆಗುಹೋಗುಗಳೆಲ್ಲ ಗೊತ್ತು. ಅವರೇ ಹೇಳುವಂತೆ ದೆಹಲಿ ಕರ್ನಾಟಕ ಸಂಘ ಮತ್ತು ಕನ್ನಡಿಗರಿಗಾಗಿ ಒಂದು ಬ್ಲಾಗಿನ ಕೊರತೆ ಇತ್ತು. ಒಂದು ಇಂಟರ್ಯಾಕ್ಟಿವ್ ಮಾಧ್ಯಮದ ಅಗತ್ಯ ಇತ್ತು. ಹೀಗಾಗಿ ಈ ಕೆಂಪುಕೋಟೆ ಕಟ್ಟಲಾಗಿದೆ. ಕಳೆದ ಒಂದು ವರ್ಷದಿಂದ ತಮ್ಮ ಮನಸ್ಸಿನಲ್ಲಿದ್ದ ಒಂದು ಆಲೋಚನೆಗೆ ಈಗ ರೂಪಕೊಟ್ಟಿದ್ದಾರೆ. ದೆಹಲಿಯಲ್ಲಿ ನಡೆಯುವ ಕನ್ನಡಿಗರ ಸಾಧ್ಯವಾದ ಎಲ್ಲಾ ಕಾರ್ಯಕ್ರಮಗಳನ್ನು ಸಚಿತ್ರವಾಗಿ ಈ ಬ್ಲಾಗಿನಲ್ಲಿ ಪ್ರಕಟಿಸುತ್ತಿದ್ದಾರೆ. ಈಗಾಗಲೇ ಹಲವಾರು ಕಾರ್ಯಕ್ರಮಗಳನ್ನು ನಮೂದಿಸಿರುವ ಈ ಕೆಂಪುಕೋಟೆ ದೆಹಲಿಯ ಕನ್ನಡವಲಯದಲ್ಲಿ ಒಂದು ಕುತೂಹಲ ಆಸಕ್ತಿಗಳನ್ನು ಕೆರಳಿಸುತ್ತಿದೆ.

ಬಾಲಕೃಷ್ಣ ಅವರ ಕವನ ಸಂಕಲನ “ಬೆಳಕಿನ ಪಾದ” ಕನ್ನಡ ಸಾಹಿತ್ಯ ಲೋಕದಲ್ಲಿ ಉತ್ತಮ ವಿಮರ್ಶೆಯನ್ನು ಪಡೆದಿದೆ. ವಸ್ತು ವಿಷಯ ಸಂಗ್ರಹಣೆ, ವಿಶಿಷ್ಟ ರೀತಿಯಲ್ಲಿ ಹೆಣೆಯುವ ಅವರ ಭಾಷಾ ಶೈಲಿ, ವಿಮಶಾತ್ಮಕ ಬರಹಗಳು ದೆಹಲಿ ಕನ್ನಡಿಗರಿಗೆ ಚಿರಪರಿಚತ. “ನಾವು ದೆಹಲಿ ಕನ್ನಡಿಗರು”–ಸಮುದಾಯ ತಾಣದ ಮೂಲಕ ಈಗಾಗಲೇ ಕನ್ನಡಿಗರಿಗೆ ವೇದಿಕೆ ಕಲ್ಪಿಸಿರುವ ಬಾಲಕೃಷ್ಣ ಇದೀಗ “ಕೆಂಪು ಕೋಟೆ”ಯ ಮೂಲಕ ಮತ್ತೊಂದು ತಾಣವನ್ನು ಸೃಷ್ಟಿಸಿರುವುದು ನಿಜಕ್ಕೂ ಸ್ವಾಗತಾರ್ಹ ಹಾಗೂ ಅಭಿನಂದನೀಯ. ಸಮೂಹ ಮಾಧ್ಯಮ ಸಂವಹನ ಸ್ನಾತಕೋತ್ತರ ಪಧವೀಧರರಾದ ಬಾಲಕೃಷ್ಣ ಅವರು ಇಂಡಿಯನ್ ಆಯಿಲ್ ಕಾರ್ಪೋರೇಷನ್‌ನಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಹಳೆ ತಲೆಮಾರಿನವರಿಂದ ಹಿಡಿದು ಹೊಸ ಪೀಳಿಗೆಯವರೆಲ್ಲರನ್ನು ಈ ಕೆಂಪುಕೋಟೆ ಮುಂಬರುವ ದಿನಗಳಲ್ಲಿ ತನ್ನ ಬಂಧನದಲ್ಲಿ ಇಟ್ಟುಕೊಳ್ಳುವುದರಲ್ಲಿ ಸಂಶಯವೇ ಇಲ್ಲ. ‘ಕೆಂಪುಕೋಟೆ’ಯ ಮೇಲೆ ಕನ್ನಡ ಬಾವುಟ ಸದಾ ಹಾರಾಡುತ್ತಿರಲಿ.

www.kempukote.blogspot.com ಕೊಂಡಿಯ ಮುಖಾಂತರ “ಕೆಂಪು ಕೋಟೆ”ಗೆ ಪ್ರವೇಶ ಉಚಿತ !!

❑ ಸಂತೋಷ್ ಕುಮಾರ್ ಉಪಾಧ್ಯಾಯ



**ದೆಹಲಿ ಕರ್ನಾಟಕ ಸಂಘದಲ್ಲಿ 62ನೇ ಗಣರಾಜ್ಯೋತ್ಸವ ದಿನಾಚರಣೆಯ ಅಂಗವಾಗಿ ಧ್ವಜಾರೋಹಣ–** ಸಂಘದ ಅಧ್ಯಕ್ಷರಾದ ಡಾ. ವೆಂಕಟಾಚಲ ಹೆಗಡೆ, ಉಪಾಧ್ಯಕ್ಷ ಬಿ.ಕೆ.ಬಸವರಾಜು, ಕಾರ್ಯದರ್ಶಿ ಸಿ.ಎಂ. ನಾಗರಾಜ, ಜಂಟಿ ಕಾರ್ಯದರ್ಶಿ ಶ್ರೀನಾಥ್ ಎನ್.ಆರ್., ಸದಸ್ಯ ಆನಂದ ಈಶ್ವರಪ್ಪ ಮುರಗೋಡ, ಕಲಾವಿದ ಭೀಮರಾವ್ ಮುರಗೋಡ, ವಿ.ವಿ. ಬಿರಾದಾರ, ಹಾಗು ಇತರ ಸದಸ್ಯರು.

ದೆಹಲಿ ಕರ್ನಾಟಕ ಸಂಘ

# DELHI KARNATAKA SANGHA

**Sector-12, Rao Tula Ram Marg, R.K.Puram**

**New Delhi – 110022**

**ಸಂಘವು 2011–12ನೇ ಸಾಲಿನ ವಿವಿಧ ಕ್ರೀಡಾ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳನ್ನು ವಾರ್ಷಿಕೋತ್ಸವದ ಅಂಗವಾಗಿ ಮಾರ್ಚ್ 26 ಮತ್ತು 27, 2011ರಂದು ಆಚರಿಸಲಿದೆ. ದಯವಿಟ್ಟು ತಾವೆಲ್ಲ ಬನ್ನಿ. ಇತರರನ್ನೂ ಕರೆ ತನ್ನಿ. ಕಾರ್ಯಕ್ರಮ ಯಶಸ್ವಿಗೊಳಿಸಿ.**

**Delhi Karnataka Sangha is organizing various Sports and Cultural events in view of its Annual Day Celebration for the year 2011-12 on 26 & 27th March 2011. You are cordially invited with your family and friends to make the programme a grand success.**

**The focus of the Sangha is to encourage the members and their children to participate in the events organised by the Sangha. Members are therefore requested to make use of the opportunity wholeheartedly by participating in the events.**

**Please find enclosed Programme Schedule, Entry Form, and Rules for the Competitions for your kind information.**

# DELHI KARNATAKA SANGHA

## ANNUAL DAY CELEBRATION 2011-12

### ENTRY FORM FOR SPORTS AND CULTURAL COMPETITIONS

### (Please see instructions and table of events for details)

| Sl. | Name of Participant | Age (Yrs.) as on Jan.2011 | Date of Birth | Gender (M/F) | Event Codes | Total No. of Events | Amount (Rs.) |
|---|---|---|---|---|---|---|---|
| 1 | | | | | | | |
| 2 | | | | | | | |
| 3 | | | | | | | |
| 4 | | | | | | | |
| 5 | | | | | | | |
| 6 | | | | | | | |
| | | | | | | **Total Amount** | |

**Note: Enclose Copy of Birth Certificate, if the Age of the Participant is below 14 years.**

**I _____________________ shall abide by the Rules/regulations of the Competition. The Sangha shall not be held responsible for any accidental eventualities during the events.**

**Name of the Member:**
**Membership No:**
**Membership: Life / Annual**

…………………………..
**Signature of Participant**
**(Parent in case of Minor)**
**Date:**

***Please note the following dates :***

**The last date for receiving entries for all events before 5pm on 15th March 2011.**

| | | |
|---|---|---|
| 1. | Shuttle Badminton / Table Tennis will be held at AIIMS Gymkhana on | 26.03.2011 |
| 2. | Bhavageethe/Bhaktigeethe Preliminary rounds at 2pm at Sangha Auditorium on | 26.03.2011 |
| 3. | Track Events commence at 9.30 am at Delhi Kannada School Ground | 27.03.2011 |
| 4. | Cultural/Indoor activities (Pls refer list) at 2pm at Sangha Auditorium | 27.03.2011 |
| 5. | Pick and Speak & Final round of Bhavageethe/Bhaktigeethe at 3pm onwards in Sangha Auditorium on | 27.03.2011 |

**Dr. Venkatachala Hegde**
President

**C.M. Nagaraja**
General Secretary

Note : Table of events, entry form, rules for competitions are enclosed herewith

# (For Office Use Only)

**Form No.**

**Number of Chargeable Events**

**Entry Fee @ Rs. 20/- Per Event**

**Receipt No and date**

**Signature**

# DELHI KARNATAKA SANGHA(R)
## ANNUAL DAY SPORTS & CULTURAL EVENTS: 2011 - 12
## PROGRAMME SCHEDULE

| CODE NO | EVENT | CATEGORY | AGE |
|---|---|---|---|
| A | 26/03/2011 at AIIMS GYMKHANA | 9 am onwards | |
| 1 | TABLE TENNINS | MEN | 15 & ABOVE |
| 2 | SHUTTLE BADMINTON SINGLES | MEN | 15 & ABOVE |
| 3 | SHUTTLE BADMINTON SINGLES | WOMEN | 15 & ABOVE |
| B | 26/03/2011 at Sangha Premises | 9 am onwards | |
| 4 | CARROM SINGLES | MEN | 15 & ABOVE |
| 5 | CARROM DOUBLES | MEN | 15 & ABOVE |
| 6 | CARROM SINGLES | WOMEN | 15 & ABOVE |
| 7 | CARROM DOUBLES | WOMEN | 15 & ABOVE |
| 8 | CHESS | COMMON | 10 & ABOVE |
| C | 26/03/2011 at Sangha Premises | 1 pm onwards | |
| 9 | FANCY DRESS | COMMON | 3 - 5 YRS |
| 10 | FANCY DRESS | COMMON | 6 - 9 YRS |
| 11 | RANGOLI | COMMON | 15 & ABOVE |
| 12 | QUIZ CONTEST | COMMON | 15 & ABOVE |
| 13 | PICK & SPEAK | COMMON | 18 & ABOVE |
| D | 26/03/2011 at Sangha Premises | 2 pm to 5 pm | |
| 14 | BHAKTI GEETHE (Preliminary) | COMMON | 10-17 YRS |
| 15 | BHAVA GEETHE (Preliminary) | COMMON | 10-17 YRS |
| 16 | BHAKTI GEETHE (Preliminary) | COMMON | 18 & ABOVE |
| 17 | BHAVA GEETHE (Preliminary) | COMMON | 18 & ABOVE |
| 18 | KANNADA RHYMES | COMMON | 3 - 5 YRS |
| E | 27/03/2011 at Delhi Kannada School Grounds | 9 am onwards | |
| 19 | MEMORY TEST | COMMON | 7-10 YRS |
| 20 | MEMORY TEST | COMMON | 10-14 YRS |
| 21 | DRAWING & PAINTING | COMMON | 3-5 YRS |
| 22 | DRAWING & PAINTING | COMMON | 6-9 YRS |
| 23 | RUNNING RACE 50 MTRS | BOYS | 3-5 YRS |
| 24 | RUNNING RACE 50 MTRS | GIRLS | 3-5 YRS |
| 25 | RUNNING RACE 50 MTRS | BOYS | 6-8 YRS |
| 26 | RUNNING RACE 50 MTRS | GIRLS | 6-8 YRS |
| 27 | RUNNING RACE 100 MTRS | BOYS | 9-11 YRS |
| 28 | RUNNING RACE 100 MTRS | GIRLS | 9-11YRS |
| 29 | RUNNING RACE 100 MTRS | BOYS | 12-15 YRS |
| 30 | RUNNING RACE 100 MTRS | GIRLS | 12-15 YRS |
| 31 | RUNNING RACE 200 MTRS | BOYS | 15-20 YRS |
| 32 | RUNNING RACE 200 MTRS | GIRLS | 15-20 YRS |
| 33 | SHOT PUT | MEN | 21-39 YRS |
| 34 | SHOT PUT | WOMEN | 21 -35 YRS |
| 35 | SHOT PUT | MEN | 40 & ABOVE |
| 36 | SHOT PUT | WOMEN | 36 & ABOVE |
| 37 | MUSICAL CHAIR | GENERAL | 6-12 YRS |
| 38 | MUSICAL CHAIR | WOMEN | 21 & ABOVE |
| 39 | MUSICAL CHAIR | WOMEN | 41 & ABOVE |
| 40 | RUNNING RACE 200 MTRS | MEN | 21-35 YRS |
| 41 | RUNNING RACE 100 MTRS | WOMEN | 21-30 YRS |
| 42 | BALL IN THE BUCKET | WOMEN | 21 & ABOVE |
| 43 | BALL IN THE BUCKET | MEN | 21 & ABOVE |
| 44 | RUNNING RACE 200 M | MEN | 36 & ABOVE |
| 45 | LEMON & SPOON | WOMEN | 31 & ABOVE |
| 46 | THREADING THE NEEDLE | COUPLES | 41 & ABOVE |
| 47 | SPEED WALK-200 M | MEN | 45 & ABOVE |
| 48 | SPEED WALK-200 M | WOMEN | 45 & ABOVE |
| 49 | KABADDI /VOLLEY BALL(Team of 7 Members) | MEN | 21 & ABOVE |
| 50 | THROW BALL | WOMEN | 15& ABOVE |

# RULES FOR COMPETITIONS

1. Participant/Parent must be member of the Sangha.
2. Entry fee for each event is as follows:

| | | |
|---|---|---|
| i. | Below 14 years | Free |
| ii. | 14 years & above | Rs.20/- per event, per participant |
| iii. | Team Events (Kabaddi/ Volley Ball/ Throw Ball) | Rs.500/- per team. |

3. Entry fee should be paid along with the entry forms to Karnataka Sangha Office. Please attach a photocopy of Birth Certificate (in case of age below 14 years)
4. On the spot entries are allowed on payment of Rs.100/- per event per individual.
5. For details of events, please refer Programme Schedule attached.
6. Non-reporting of the participants at the stipulated time may result in awarding walkover.
7. Sports Organising Committee has the right to cancel the events depending upon the response and need of the hour.
8. Any change regarding the venue will be intimated separately.
9. Ties for Shuttle Badminton, Carrom, Chess, Table Tennis, Kabaddi, Volleyball and Throw ball (for all team events) shall be drawn before the game starts.
10. The Participants are requested to bring the Sports Materials (Racquet, Striker etc/) required for the events by themselves.
11. The modalities of conducting the events shall be notified from time to time at Notice Board of the Sangha.
12. Participants shall reach the venue of the events at their own cost.
13. While the persons in charge will be responsible for conducting events, they may take additional assistance of persons of their choice in consultation with the Chairmann & Convener of the Sports Sub- Committee.
14. As far as practicable, the time schedule stipulated will be adhered to.
15. Use of Stencils, Chalk-Piece, Pencil, Sieving and Pen is not permitted in Rangoli Competition.
16. For any event, if there are less than 4 participants that event may be cancelled.
17. The decision of the Sports Organising Committee/Organiser shall be the final in respect of conducting/ cancellation of the event, subject to the minimum entry response required, non-availability of resources to conduct competitions etc.
18. In case of cultural events, the judgments given by the panel of judges will be final.

**Harishchandra Bantwal**
Chairman
Annual Day Sports Committee

**N.R. Sreenath**
Convener
Annual Day Sports Committee

# ಕನ್ನಡಿಗರಿಗೆ ಪದ್ಮ – ಕನ್ನಡಿಗರ ಹೆಮ್ಮೆ

**ಪದ್ಮ ಪ್ರಶಸ್ತಿ ಭಾಜನರಾದ ಎಲ್ಲ ಕನ್ನಡದ ಗಣ್ಯರಿಗೆ ದೆಹಲಿ ಕರ್ನಾಟಕ ಸಂಘ ಹಾಗೂ ಸಮಸ್ತ ದೆಹಲಿ ಕನ್ನಡಿಗರ ಹೃತ್ಪೂರ್ವಕ ಅಭಿನಂದನೆಗಳು**



**ಅಜೀಂ ಪ್ರೇಮ್ ಜಿ** – ಪದ್ಮವಿಭೂಷಣ – ವ್ಯಾಪಾರ ಮತ್ತು ಉದ್ಯಮ –ಭಾರತದ ಪ್ರತಿಷ್ಠಿತ ಮೂರನೇ ಅತಿದೊಡ್ಡ ಸಾಫ್ಟ್ ವೇರ್ ಕಂಪೆನಿ ಬೆಂಗಳೂರು ಮೂಲದ ವಿಪ್ರೋ ಕಂಪನಿಯ ಮುಖ್ಯಸ್ಥ ಅಜೀಂ ಪ್ರೇಮ್ ಜೀ ಅವರು ಗ್ರಾಮೀಣ ವಲಯದ ಶೈಕ್ಷಣಿಕ ಗುಣಮಟ್ಟ ಸುಧಾರಿಸಲು ಅನೇಕ ಕಾರ್ಯಯೋಜನೆಗಳಿಂದ ನಾಡಿನಾದ್ಯಂತ ಚಿರಪರಿಚಿತರಾಗಿದ್ದಾರೆ.

**ಟಿಜೆಎಸ್ ಜಾರ್ಜ್** – ಪದ್ಮಭೂಷಣ – ಸಾಹಿತ್ಯ ಮತ್ತು ಶಿಕ್ಷಣ –ಟಿಜೆಎಸ್.ಜಾರ್ಜ್ ಅವರ ಪೂರ್ಣ ಹೆಸರು ತಾಯಿಲ್ ಜಾಕೋಬ್ ಸೋನಿ ಜಾರ್ಜ್. ಕೇರಳದಲ್ಲಿ ಹುಟ್ಟಿ ವಿಶ್ವ ಖ್ಯಾತಿಯನ್ನು ಪಡೆದ ಜಾರ್ಜ್ ಹಿರಿಯ ಪತ್ರಕರ್ತ, ಹೆಸರಾಂತ ಅಂಕಣಕಾರರು ಮತ್ತು ಆತ್ಮಕಥನಕಾರರು. ಪ್ರಸ್ತುತ ?ದ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್ ? ನಲ್ಲಿ ಸಲಹಾ ಸಂಪಾದಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.



**ರುದ್ರಪಟ್ಣಂ ಆರ್ ಕೆ ಶ್ರೀಕಂಠನ್** – ಪದ್ಮಭೂಷಣ – ಕಲೆ ಮತ್ತು ಸಂಗೀತ ಕ್ಷೇತ್ರ – ತೊಂಭತ್ತರ ಹರೆಯದ ಸಂಗೀತ ಕಲಾನಿಧಿ, ನಡೆದಾಡುವ ಸಂಗೀತ ವಿಶ್ವಕೋಶವೆಂದು ಹೆಸರಾಗಿರುವ ಶ್ರೀ. ಆರ್.ಕೆ.ಶ್ರೀಕಂಠನ್ ಅವರು ಕರ್ನಾಟಕ ಶಾಸ್ತ್ರೀಯ ಸಂಗೀತ ಲೋಕದ ಅತ್ಯಂತ ಹಿರಿಯ ಹೆಮ್ಮರ. ಆರ್.ಕೆ. ಶ್ರೀಕಂಠನ್ ಅವರು ತ್ಯಾಗರಾಜ ಶಿಷ್ಯ ಪರಂಪರೆಯಲ್ಲಿ ಬರುವ ವಿದ್ವಾಂಸರು. ಹಾಸನ ಜಿಲ್ಲೆಯ ರುದ್ರಪಟ್ಣಂ ಹಳ್ಳಿಯಿಂದ ಜಗತ್ತಿನಾದ್ಯಂತ ಮಿಡಿದ ದನಿ. ಇವರದು ಸಂಗೀತ ಪರಂಪರೆಯ ಕುಟುಂಬ. ಸಂಗೀತ ಭಾಷೆಯನ್ನು ಮಾತೃಭಾಷೆ ಮಾಡಿಕೊಂಡು ಇಂದಿಗೂ ಮಾತನಾಡುತ್ತಲೇ ಇದ್ದಾರೆ.



**ಕ್ರಿಸ್ ಗೋಪಾಲಕೃಷ್ಣನ್** – ಪದ್ಮಭೂಷಣ – ವ್ಯಾಪಾರ ಮತ್ತು ಉದ್ಯಮ – ಭಾರತದ ಪ್ರತಿಷ್ಠಿತ ಐಟಿ ಕಂಪೆನಿ ಇನ್ಫೋಸಿಸ್ ನ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಹಾಗೂ ವ್ಯವಸ್ಥಾಪಕ ನಿರ್ದೇಶಕರಾಗಿದ್ದಾರೆ.




**ರಾಮದಾಸ್ ಮಾಧವ ಪೈ** – ಪದ್ಮಭೂಷಣ – ಸಾಹಿತ್ಯ ಮತ್ತು ಶಿಕ್ಷಣ – ಆಧುನಿಕ ಮಣಿಪಾಲದ ಶಿಲ್ಪಿ ಡಾ।ಟಿ.ಎಂ.ಎ.ಪೈ ಅವರ ಪುತ್ರ ಡಾ।ರಾಮದಾಸ್ ಎಂ. ಪೈ ಅವರು ದಶಕಗಳ ಹಿಂದೆ ಡಾ।ಟಿ.ಎಂ.ಎ.ಪೈ ಅವರು ಸ್ಥಾಪಿಸಿದ ಮಣಿಪಾಲ, ಮಂಗಳೂರಿನ ಹಲವು ಉನ್ನತ ಶಿಕ್ಷಣ ಸಂಸ್ಥೆಗಳನ್ನು ಅಭಿವೃದ್ಧಿಪಡಿಸಿದ ಹೆಗ್ಗಳಿಕೆ ಇವರದು. 1961ರಲ್ಲಿ ತಂದೆಯವರ ಜೊತೆ ಮಣಿಪಾಲ ಆಸ್ಪತ್ರೆಯ ಆಡಳಿತಾಧಿಕಾರಿಯಾಗಿ ವೃತ್ತಿ ಆರಂಭಿಸಿದ ಡಾ।ಪೈ ಅವರು ಈಗ ಜಾಗತಿಕ ಮಟ್ಟದಲ್ಲಿ ವೈದ್ಯಕೀಯ ಮತ್ತು ತಾಂತ್ರಿಕ ಶಿಕ್ಷಣವನ್ನು ಪಸರಿಸುತ್ತಿ ದ್ದಾರೆ



**ಎಸ್.ಪಿ.ಬಾಲಸುಬ್ರಹ್ಮಣ್ಯಂ** – ಪದ್ಮಭೂಷಣ – ಹಿನ್ನೆಲೆ ಗಾಯನ ಮತ್ತು ಸಂಗೀತ ನಿರ್ದೇಶನ – ಭಾರತೀಯ ಚಿತ್ರರಂಗದಲ್ಲಿ ಅದರಲ್ಲೂ ದಕ್ಷಿಣ ಭಾರತ ಚಿತ್ರರಂಗದಲ್ಲಿ ಎಸ್.ಪಿ.ಬಾಲಸುಬ್ರಹ್ಮಣ್ಯಂ ಅವರು ಬಹಳ ಪ್ರಸಿದ್ಧ ಹಿನ್ನೆಲೆ ಗಾಯಕರು. ಕನ್ನಡ, ತಮಿಳು, ತೆಲುಗು, ಮಲೆಯಾಳಂ, ಹಿಂದಿ, ಒರಿಯಾ, ಅಸ್ಸಾಮಿ, ಪಂಜಾಬಿ, ಬೆಂಗಾಲಿ ಮತ್ತು ತುಳು ಹೀಗೆ ಹಲವಾರು ಭಾಷೆಗಳಲ್ಲಿ ಹಾಡಿರುವ ಇವರು ಸುಮಾರು 36,000 ಕ್ಕೂ ಹೆಚ್ಚು ಹಾಡುಗಳನ್ನು ಹಾಡಿ ಜಗತ್ತಿನಲ್ಲೇ ಅತಿ ಹೆಚ್ಚು ಹಾಡುಗಳನ್ನು ಹಾಡಿರುವ ಗಿನ್ನಿಸ್ ದಾಖಲೆ ಮಾಡಿದ್ದಾರೆ



**ಗಿರೀಶ್ ಕಾಸರವಳ್ಳಿ** : ಪದ್ಮಶ್ರೀ – ಕಲೆ ಮತು ಚಿತ್ರ ನಿರ್ಮಾಣ . ಗಿರೀಶ್ ಕಾಸರವಳ್ಳಿ,ಭಾರತದ ಅತ್ಯಂತ ಪ್ರತಿಭಾನಿತ್ವ ಚಲನಚಿತ್ರ ನಿರ್ದೇಶಕರಲ್ಲೊಬ್ಬರು. ಮೂಲತಃ ಕರ್ನಾಟಕ ರಾಜ್ಯದ ಶಿವಮೊಗ್ಗದವರಾದ ಗಿರೀಶ್ ಕಾಸರವಳ್ಳಿಯವರು ತಮ್ಮ 27 ವರ್ಷಗಳ ವೃತ್ತಿ ಜೀವನದಲ್ಲಿ ಕೇವಲ 10 ಕನ್ನಡ ಚಿತ್ರಗಳನ್ನು ಮಾತ್ರ ನಿರ್ದೇಶಿಸಿದರೂ, ಹಲವಾರು ರಾಷ್ಟ್ರೀಯ ಹಾಗು ಅಂತರಾಷ್ಟ್ರೀಯ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಎಫ್.ಟಿ ಐ ಐನ ಬಂಗಾರದ ಪದಕದೊಂದಿಗೆ ಪದವಿ ಪಡೆದ ಗಿರೀಶ್ ಕಾಸರವಳ್ಳಿಯವರು, 1977ರಲ್ಲಿ ತಮ್ಮ ಪ್ರಥಮ ಚಲನಚಿತ್ರ **'ಘಟಶ್ರಾದ್ಧ'**ಕ್ಕಾಗಿ ಭಾರತದ ರಾಷ್ಟ್ರಪತಿಗಳಿಂದ ಸ್ವರ್ಣ ಕಮಲ ಪ್ರಶಸ್ತಿಯನ್ನು ಪಡೆದಿದ್ದಾರೆ. ಸತ್ಯಜಿತ್ ರೇ ಅವರ ನಂತರ ಹೆಚ್ಚಿನ ಸ್ವರ್ಣಕಮಲಗಳನ್ನು ಪಡೆದ ಹೆಗ್ಗಳಿಕೆ ಇವರದು. ಅವರ ರಾಷ್ಟ್ರ ಪ್ರಶಸ್ತಿ ಪಡೆದ ಚಿತ್ರಗಳು – ಘಟಶ್ರಾದ್ಧ ( 1977), ತಬರನ ಕಥೆ (1986), ತಾಯಿ ಸಾಹೇಬ ( 1997), ದ್ವೀಪ (2001), ಕನಸೆಂಬ ಕುದುರೆಯನೇರಿ ( 2009). ಚಲನಚಿತ್ರೋತ್ಸವದಲ್ಲಿ ಪ್ರದರ್ಶಿತಗೊಂಡ ಅತ್ಯುತ್ತಮ ಕುಟುಂಬ ಕಲ್ಯಾಣ ಚಿತ್ರ **'ಹಸೀನಾ'** (2005) ಮತ್ತು ಅತ್ಯುತ್ತಮ ಕನ್ನಡ ಚಲನಚಿತ್ರ **'ಗುಲಾಬಿ ಟಾಕೀಸ್'** (2009).



**ನೊಮಿತಾ ಚಾಂಡಿ** – ಪದ್ಮಶ್ರೀ – ಸಮಾಜ ಸೇವೆ – 'ಆಶ್ರಯ' ಎಂಬ NGO ದ ಕಾರ್ಯದರ್ಶಿಯಾಗಿರುವ ಇವರು 1980ರಿಂದಲೂ ನಿರಾಶ್ರಿತ ಮಹಿಳೆ ಮತ್ತು ಮಕ್ಕಳಿಗಾಗಿ ಕೆಲಸಮಾಡುತ್ತಿದ್ದಾರೆ. ಅನಾಥ ಮಕ್ಕಳು, ನಿರ್ಗತಿಕ ಮಹಿಳೆಯರಿಗೆ ಆಶ್ರಯ ನೀಡುವುದಲ್ಲದೇ ಅವರಿಗೆ ಉತ್ತಮ ಸ್ಥಾನಮಾನ ಕಲ್ಪಿಸಿಕೊಡುವುದಕ್ಕಾಗಿಯೇ ಆಶ್ರಯವನ್ನು ಹುಟ್ಟುಹಾಕಿದ ಮಹನೀಯರಲ್ಲಿ ನೊಮಿತಾ ಚಾಂಡಿಯೂ ಒಬ್ಬರು.



**ಅನಿತಾ ರೆಡ್ಡಿ** – ಪದ್ಮಶ್ರೀ – ಸಮಾಜ ಸೇವೆ – ಕಳೆದ 33 ವರ್ಷಗಳಿಂದ ಕೊಳಚೆಗೇರಿ, ಜುಗ್ಗಿ ಝೋಪಡಿಗಳಲ್ಲಿ ವಾಸಿಸುವ ಬಡ ಮತ್ತು ನಿರ್ಗತಿಕರಿಗೆ ಮೂಲಭೂತ ಹಕ್ಕುಗಳಿಗಾಗಿ, ವಸತಿ, ಶಿಕ್ಷಣ ಮುಂತಾದ ಸೌಕರ್ಯಗಳನ್ನು ದೊರಕಿಸಿಕೊಡುವ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಅನಿತಾ ರೆಡ್ಡಿ ಈಗಾಗಲೇ ಹೆಸರು ಗಳಿಸಿದ ಸಮಾಜಸೇವಕಿ.




**ಅನಂತ್ ದರ್ಶನ್ ಶಂಕರ್** – ಪದ್ಮಶ್ರೀ – ಸಾರ್ವಜನಿಕ ವ್ಯವಹಾರ – ಸ್ಥಳೀಯ ಆರೋಗ್ಯ ಪದ್ಧತಿಗಳನ್ನು ಸತ್ವಗೊಳಿಸುವುದಕ್ಕಾಗಿ ಬೆಂಗಳೂರಿನಲ್ಲಿ ಆಯುರ್ವೇದ ಮತ್ತು ಸಮಗ್ರ ಔಷಧಿಗಳ ಸಂಸ್ಥೆಯನ್ನು ಸ್ಥಾಪಿಸಿದ ಅನಂತ್ ದರ್ಶನ್ ಶಂಕರ್ ಅವರು ಈ ಸಂಸ್ಥೆಯ ಸಂಸ್ಥಾಪಕರು. ಸಾಂಪ್ರದಾಯಿಕ ಆರೋಗ್ಯ ವಿಜ್ಞಾನ ಮತ್ತು ಔಷಧೀ ಸಸ್ಯಗಳ ಬೆಳೆಗಳ ಸಂರಕ್ಷಣೆಯಲ್ಲಿ ಅನೇಕ ಜವಾಬ್ದಾರಿಯುತ ಹಿರಿಯ ಹುದ್ದೆಗಳಲ್ಲಿ ಕರ್ತವ್ಯ ನಿರ್ವಸಿದ್ದಾರೆ.



**ದೇವನೂರು ಮಹದೇವ** – ಪದ್ಮಶ್ರೀ – ಸಾಹಿತ್ಯ ಮತ್ತು ಶಿಕ್ಷಣ .. ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನ ದೇವನೂರಿನ ಮಹದೇವ ಅವರು ಕನ್ನಡದ ಅತ್ಯಂತ ಪ್ರಖ್ಯಾತ ಸಾಹಿತಿಗಳು ಮತ್ತು ಕನ್ನಡದ ಪ್ರಚಂಡ ಹೋರಾಟಗಾರ. ಇವರ **'ಒಡಲಾಳ'** ಕೃತಿಯನ್ನು ಕಲ್ಕತ್ತಾದ ಭಾರತೀಯ ಪರಿಷತ್ 1984ರ ಉತ್ತಮ ಸೃಜನಶೀಲ ಕೃತಿಯೆಂದು ಗೌರವಿಸಿತು. 1991ರಲ್ಲಿ ಇವರ 'ಕುಸುಮಬಾಲೆ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ ನೀಡಿತು. ಕಥಾಸಾಹಿತ್ಯದಲ್ಲಿ ಉನ್ನತ ಸ್ಥಾನ ಪಡೆದಿರುವ ಮಹದೇವ ಅವರ **'ಕುಸುಮಬಾಲೆ'** ಕೃತಿಗಾಗಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ದೇವನೂರು ಮಹದೇವ ಅವರು ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಸ್ಥಾಪಕರಲ್ಲಿ ಒಬ್ಬರು. ಅವರ ಪ್ರಮುಖ ಕೃತಿಗಳು ದ್ಯಾವನೂರು, ನಂಬಿಗೆಯ ನೆಂಟ, ಗಾಂಧಿ ಮತ್ತು ಮಾವೊ, ನೋಡು ಮತ್ತು ಕೂಡು ಮತ್ತಿತರ ಕೃತಿಗಳು. ಇದ್ದದ್ದನ್ನು ಇದ್ದಹಾಗೆ ನೇರವಾಗಿ ಹೇಳಬಲ್ಲ ಮಹದೇವ ಬದುಕನ್ನು ವಿಶಿಷ್ಟ ರೀತಿಯಲ್ಲಿ ನೋಡುತ್ತಾರೆ. ವ್ಯಂಗ್ಯ, ವಿನೋದ ಮತ್ತು ಗಾಂಭೀರ್ಯದ ಜೊತೆಗೆ ಅವರದೇ ಆದ ಸಾಹಿತ್ಯ ಶೈಲಿ ಅಚ್ಚರಿ ಹುಟ್ಟಿಸುವಷ್ಟು ಸೋಪಜ್ಞವಾಗಿದೆ.

**ಪ್ರೊ.ಎಂ. ಅಣ್ಣಾಮಲೈ** – ಪದ್ಮಶ್ರೀ – ವಿಜ್ಞಾನ ಮತ್ತು ಇಂಜಿನಿಯರಿಂಗ್ – ವಿಜ್ಞಾನ ಮತ್ತು ಇಂಜಿನಿಯರಿಂಗ್ ಕೃಷಿ ವಿಜ್ಞಾನ ಕ್ಷೇತ್ರದಲ್ಲಿ ಪ್ರೊ.ಎಂ.ಅಣ್ಣಾಮಲೈ ಅವರು ಗಣನೀಯವಾದ ಸೇವೆ ಸಲ್ಲಿಸಿದ್ದಾರೆ.

**Delhi Karnataka Sangha's Abhimatha Monthly,**
**Feb-2011, Price Rs.1/- RNI Regn. No. 53405/91, DL-SW-15/4016/10-11-12**
**Printout Date : February 8th / 9th, Postal Date :10th / 11th, Total Pages-28**




**Editor: Smt.Usha Bharatadri, Printed & Published by C.M.Nagaraja General Secretary on behalf of Delhi Karnataka Sangha (R), Rao Tularam Marg, Sector-12, R.K.Puram, New Delhi-110022, Tel: 26109615 and printed at R.V. Printing Press, C-97, Okhla Industrial Area, Phase-I, New Delhi-110020, Tel: 26815778, 40545298,**